೫. ನಿಯಮ ೬೯ ಮೇರೆಗೆ

ವಿಷಯ: ರಾಜ್ಯದಲ್ಲಿರುವ ಬರದ ಪರಿಸ್ಥಿತಿ ಹಾಗೂ ಕುಡಿಯುವ ನೀರಿನ ಸಮಸ್ಯೆ.

+ ಶ್ರೀ ಜಗದೀಶ್ ಶೆಟ್ಟರ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಗಂಭೀರತೆಯನ್ನು ಅರಿತುಕೊಂಡು ಚರ್ಚೆ ಮಾಡುವುದಕ್ಕೇನೋ ಸರ್ಕಾರದ ಪರವಾಗಿ ಅವರು ಒಪ್ಪಿಕೊಂಡಿದ್ದಾರೆ, ಅವರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸಿ ಈ ವಿಷಯಕ್ಕೆ ಬರುವುದಕ್ಕೆ ಮುಂಚೆ ಕೆಲವೊಂದು ನಿಮಿಷ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತಿದ್ದೇನೆ. ಹಿಂದೆ ಅಧಿವೇಶನ ನಡೆದಂಥ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿಯ ಎಲ್ಲಾ ಶಾಸಕರು ವೆಲ್‌ನಲ್ಲಿ ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದವು. ಈ ನಕಲಿ ಸ್ಟಾಂಪ್ ಹಗರಣ, ಅದನ್ನು ಸಿಬಿಐ ತನಿಖೆಗೆ ಕೊಡಬೇಕು ಎನ್ನುವ ಬಗ್ಗೆ ಆ ವಿಷಯವನ್ನು ತೆಗೆದುಕೊಂಡು ಧರಣಿ ಸತ್ಯಾಗ್ರಹವನ್ನು ವೆಲ್‌ನಲ್ಲಿ ಮಾಡುತ್ತಿದ್ದೆವು. ಆ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಯಾವುದೇ ಚರ್ಚೆಯಾಗಲಿಲ್ಲ ಮತ್ತು ಕಾನ್‌ಸ್ಟಿಟ್ಯೂಷನಲ್ ಅಮೆಂಡಮೆಂಟ್ ಬಿಲ್ ಕೂಡ ಆ ಗೊಂದಲದಲ್ಲಿ ಪಾಸಾಯಿತು. ಅದೊಂದು ದುರ್ದೈವದ ಸಂಗತಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ರೀತಿ ಆಗಬಾರದಾಗಿತ್ತು. ಅಟ್‌ಲೀಸ್ಟ್ ರಾಜ್ಯಪಾಲರ ಒಂದು ಭಾಷಣದ ಮೇಲೆ ಚರ್ಚೆಗೆ ಅವಕಾಶವಾದರೂ ಸಿಗಬೇಕಾಗಿತ್ತು.

ಅಧ್ಯಕ್ಷರು: ದಯವಿಟ್ಟು ಕ್ಷಮಿಸಿ. ಆರು ದಿವಸ ಅಜೆಂಡಾದಲ್ಲಿ ಹಾಕಿದರೂ ನೀವು ಮಾತನಾಡದಿದ್ದರೆ ನಾವೇನು ಮಾಡೋಣ. ಮಾತನಾಡಿ ಎಂದು ಹೇಳಿದರೂ ಮಾತನಾಡಲಿಲ್ಲ. ಎಂದರೆ ನಾವೇನು ಮಾಡೋಣ? ಇದು ನನ್ನ ತಪ್ಪಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ನಾನೇನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಸರ್ಕಾರ ಮೊಂಡುತನ ಮಾಡಿದ್ದರಿಂದ ಆ ರೀತಿಯ ಪರಿಸ್ಥಿತಿ ನಿರ್ಮಾಣವಾಯಿತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ನಮ್ಮ ಮುಂದೆ ಇವತ್ತು ಏನು ಸ್ಟಾಂಪ್ ಪೇಪರ್ ಹಗರಣ ಇದೆ ಅದಕ್ಕೆ ಸಂಬಂಧಪಟ್ಟಂತೆ ಮತ್ತೆ ಏನಾದರೂ ವಿಷಯಗಳನ್ನು ಪ್ರಸ್ತಾಪ ಮಾಡುವುದಿದ್ದರೆ ಇದೇ ಅಧಿವೇಶನದಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡುವವರಿದ್ದೇವೆ. ಅದರ ಬಗ್ಗೆಯೂ ಮುಂದೆ ವಿಷಯಗಳನ್ನು ತೆಗೆದುಕೊಳ್ಳುವವರಿದ್ದೇವೆ. ಮುಂದೇನಾಯಿತು, ಮತ್ತೆ ಸಬ್‌ಸಿಕ್ವೆಂಟ್ ಡೆವಲಪ್‌ಮೆಂಟ್ಸ್ ಏನು ಎನ್ನುವ ವಿಷಯಗಳನ್ನು ಪ್ರಸ್ತಾಪ ಮಾಡುವವರಿದ್ದೇವೆ. ಸೂಕ್ಷ್ಮವಾಗಿ ಹೇಳುವುದು ಏನು ಎಂದರೆ ನಾವು ಧರಣಿಯನ್ನು ಕಂಟಿನ್ಯೂ ಮಾಡುತ್ತೇವೆ. ಆದರೆ ಇವತ್ತು ಏಕೆ ಈ ವಿಷಯವನ್ನು ತೆಗೆದುಕೊಳ್ಳುತ್ತಿದ್ದೇವೆಂದರೆ ಇವತ್ತು ಇಡೀ ರಾಜ್ಯದಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಲುವಾಗಿ ಹಾಹಾಕಾರ ಆಗಿದೆ. ಈ ತೊಂದರೆಗಳು ಇರುವ

ಸಂದರ್ಭದಲ್ಲಿ ಇವತ್ತು ಪ್ರಥಮ ಪ್ರಾಶಸ್ತ್ಯವಾಗಿ ನಾವು ಈ ವಿಷಯವನ್ನು ತೆಗೆದುಕೊಳ್ಳುತ್ತಿದ್ದೇವೆ. ಆದರೆ ಸರ್ಕಾರ ಆ ಮೊಂಡುತನವನ್ನು ಬಿಟ್ಟು ಆ ವಿಷಯದ ಬಗ್ಗೆ ಸಿಬಿಐ ತನಿಖೆಗೆ ಒಪ್ಪುವಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡಿದರೆ ಒಳ್ಳೆಯದು ಎಂದು ನಾನು ಈಗಲಾದರೂ ಹೇಳುತ್ತೇನೆ. ಮುಂದೆ ಸುಮ್ಮನೆ ಅನಾವಶ್ಯಕವಾಗಿ ಪ್ರೊಸೀಡಿಂಗ್ಸ್ ಹೆಲ್ಡ್ ಅಪ್ ಆಗತಕ್ಕದ್ದು ಆಗಬಾರದು ಎಂದು ನನ್ನ ಕಳಕಳಿ ಇದೆ. ಸರ್ಕಾರ ಈಗಲಾದರೂ ಸಿಬಿಐ ತನಿಖೆಗೆ ಒಪ್ಪಬೇಕಾಗುತ್ತದೆ.

ಅಧ್ಯಕ್ಷರು: ತಾವು ದಯವಿಟ್ಟು ಸಬ್ಜೆಕ್ಟ್ ಮ್ಯಾಟರ್‌ಗೆ ಬನ್ನಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ ಎಂದರೆ ನಿನ್ನೆಯಿಂದ ಅಂದರೆ 18ನೇ ತಾರೀಖಿನಿಂದ ಅಧಿವೇಶನವನ್ನು ಕರೆದಿದ್ದಾರೆ. ಆಮೇಲೆ ಬಜೆಟ್ ಮಂಡನೆಯಾಗುವುದು 21ನೇ ತಾರೀಖು. ಇವತ್ತು ನಾಳೆ ಈ ಬಿಲ್‌ಗಳನ್ನು ಪಾಸ್ ಮಾಡುವುದು ಮತ್ತು ಬೇರೆ ಬೇರೆಯದನ್ನು ತೆಗೆದುಕೊಂಡಿದ್ದಾರೆ. 21ನೇ ತಾರೀಖಿಗೆ ಬಜೆಟ್ ಮಂಡನೆಯಾದರೆ ನಮಗೆ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದು ಯಾವಾಗ? 22ನೇ ತಾರೀಖು ಫುಲ್ ಡೇ ಚರ್ಚೆ ಆಗುತ್ತದೆ. ಮತ್ತೆ 23, 24 ಮತ್ತು 24 ರಜಾದಿನ ಇದೆ. ಮತ್ತೆ 26ನೇ ತಾರೀಖು ಫುಲ್‌ಡೇ ಚರ್ಚೆ. 27ನೇ ತಾರೀಖಿಗೆ ಸರ್ಕಾರದಿಂದ ರಿಪ್ಲೈ. ಅವತ್ತು ವೋಟ್ ಆನ್ ಅಕೌಂಟ್ ತೆಗೆದುಕೊಂಡು ಪಾಸ್ ಮಾಡಿಕೊಂಡುಬಿಡುತ್ತಾರೆ. ಇದು ಇವತ್ತು ಇರತಕ್ಕಂಥ ಒಂದು ವ್ಯವಸ್ಥೆ. ನಾನೊಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ನೋಡಿದ್ದೆ. 13ನೇ ತಾರೀಖಿನ ದಿವಸ ಬಜೆಟ್ ಅಧಿವೇಶನ ಕರೆಯುವುದಕ್ಕೆ ಸರ್ಕಾರಕ್ಕೆ ನಾವು ತಿಳಿಸಿದ್ದೇವೆ ಎಂದು ಮಾನ್ಯ ಅಧ್ಯಕ್ಷರೇ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದನ್ನು ನಾನು ನೋಡಿದ್ದೇನೆ. ಮತ್ತೆ ಹಿಂದಿನ ಸದನದ ಒಂದು ನೀತಿ ಸಂಹಿತೆ ಸಭೆಯಲ್ಲೂ ಸಹ ಇದರ ಬಗ್ಗೆ ಚರ್ಚೆಯಾಗಿದೆ, ಅಂದರೆ ಬಹುಶಃ ನನಗೇನು ಅನ್ನಿಸುತ್ತದೆ ಎಂದರೆ ಇದೇ ಅಧಿವೇಶನವನ್ನು ಮಾರ್ಚ್ ಮೊದಲ ವಾರದಲ್ಲಿ ಅಥವಾ ಮಾರ್ಚ್ 2ನೇ ವಾರದಲ್ಲಿ ಕರೆದಿದ್ದರೆ ಈ ಬಜೆಟ್ ಮಂಡನೆಯಾದ ನಂತರ ಹೆಚ್ಚಿನ ಚರ್ಚೆಗೆ ಸದಸ್ಯರಿಗೆ ಅವಕಾಶ ಸಿಗುತ್ತಿತ್ತು. ನಾವು ಸಹ ಹೆಚ್ಚಿನ ವಿಚಾರಗಳನ್ನು ಹೇಳುವುದಕ್ಕಾಗುತ್ತಿತ್ತು. ಸಾರ್ವಜನಿಕರಿಗೆ ಆ ವಿಷಯಗಳು ಹೋಗಬೇಕಾಗುತ್ತದೆ. ಏಕೆಂದರೆ ನೂರು ದಿವಸ ಅಧಿ ವೇಶನ ನಡೆಸುತ್ತೇವೆಂದು ಹೇಳಿ ಹೊಸ ಸರ್ಕಾರ ಅಧಿಕಾರ ತೆಗೆದುಕೊಂಡಾಗ ಹೇಳಿದಂಥವರು ಇವತ್ತು ಕೇವಲ 36 ದಿವಸ, 40 ದಿವಸ, 50 ದಿವಸ ಮಾತ್ರ ಸದನ ನಡೆಸುವಂಥ ವ್ಯವಸ್ಥೆ ಬಂದಿದೆ. ಇದು ಬಹಳ ಖೇದಕರವಾದ ಸಂಗತಿ. ಇದರ ಬಗ್ಗೆ ದೇಶದಲ್ಲಿ ಚರ್ಚೆ ನಡೆಯುತ್ತಿದೆ. ಪಾರ್ಲಿಮೆಂಟ್‌ನಲ್ಲೂ ನಡೆಯುತ್ತಿದೆ. ಆದರೆ ಇವತ್ತು ಅನುಷ್ಠಾನವಾಗುತ್ತಿಲ್ಲವೆನ್ನುವುದು ಖೇದಕರ ಸಂಗತಿ. ಅದೂ ಬಜೆಟ್ ಮಂಡನೆ. ಏಕೆಂದರೆ ನೀವು 27ನೇ ತಾರೀಖಿಗೆ ವೋಟ್ ಆನ್ ಅಕೌಂಟ್ ತೆಗೆದುಕೊಂಡು ಬಜೆಟ್ ಪಾಸ್

ಮಾಡಿಕೊಂಡು ಹೋದರೆ ಮುಂದೆ ನೀವು ಅಧಿವೇಶನವನ್ನು ಎಕ್ಸ್‌ಟೆಂಡ್ ಮಾಡಿದರೂ ಅಂದರೆ ಏಪ್ರಿಲ್ ಮೊದಲ ವಾರದವರೆಗೆ ಮುಂದುವರಿಸಿದರೂ ಅದರ ಮಹತ್ವ ಉಳಿಯುವುದಿಲ್ಲ. ಬಜೆಟ್ ಒಂದು ಸಲ ಪಾಸ್ ಆದ ಮೇಲೆ ಅದಕ್ಕೆ ಮಹತ್ವ ಉಳಿಯುವುದಿಲ್ಲ. ಹೀಗಾಗಿ ಬಜೆಟ್ ಅಧಿವೇಶನವನ್ನು ಒಂದು ವಾರ ಮುಂಚೆ ಕರೆಯಬಹುದಾಗಿತ್ತು, ಹತ್ತು ದಿವಸಗಳ ಮುಂಚೆ ಕರೆಯಬಹುದಾಗಿತ್ತು. ಅದನ್ನು ಏಕೆ ಮಾಡಲಿಲ್ಲ? ಸರ್ಕಾರ ಏಕೆ ನಿರ್ಲಕ್ಷ್ಯ ಮಾಡುತ್ತಿದೆ ಎನ್ನುವುದು ನನಗೆ ಅರ್ಥ ಆಗುತ್ತಿಲ್ಲ. ಹೀಗಾಗಿ ಈ ಒಂದು ಸದನಕ್ಕೆ ಏನು ಮಹತ್ವ ಇದೆ, ಅದನ್ನು ಸರ್ಕಾರ ಕೊಡಬೇಕಾಗುತ್ತದೆ. ಈ ರೀತಿ ಘಟನೆ ರಿಪೀಟ್ ಆಗಬಾರದು. ಕಳೆದ ಬಾರಿಯೂ ಹಾಗೆಯೇ ಆಯಿತು. ಅದಕ್ಕಾಗಿ ತಪ್ಪನ್ನು ತಿದ್ದಿಕೊಳ್ಳುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಈ ಸದನಕ್ಕೆ ಮಹತ್ವ ಕೊಡುವಂತಹ ಕೆಲಸ ಆಗಬೇಕು. ಬಹುಶಃ ಇವತ್ತು ಕೌನ್ಸಿಲ್‌ನಲ್ಲಿ ಇದೇ ವಿಷಯದ ಬಗ್ಗೆ ಪ್ರಸ್ತಾಪ ಇದೆ. ಬಜೆಟ್ ಮಂಡನೆ ಆದ ಮೇಲೆ ಚರ್ಚೆಗೆ ಹೆಚ್ಚು ದಿವಸಗಳ ಅವಕಾಶ ಇಲ್ಲ ಎನ್ನುವಂತಹ ವಿಷಯದ ಮೇಲೆ ವಿಧಾನ ಪರಿಷತ್‌ನಲ್ಲಿ ನಿಲುವಳಿ ಸೂಚನೆಯನ್ನು ಮಂಡನೆ ಮಾಡುತ್ತಿದ್ದಾರೆ ಎನ್ನುವ ವಿಚಾರ ನನಗೆ ತಿಳಿದು ಬಂದಿದೆ. ಅಂದರೆ ಇವತ್ತು ನಿಲುವಳಿ ಸೂಚನೆ ಮಂಡನೆ ಆಗುವಂತಹ ಹಂತಕ್ಕೆ, ಆ ಪರಿಸ್ಥಿತಿಗೆ ಬಂದರೆ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾದಂತಹ ವಿಷಯ ಎಂದು ಇವತ್ತು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಈ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು: ಬಿಎಸಿ ಮೀಟಿಂಗ್‌ನಲ್ಲಿ ಮಾತನಾಡುವ ವಿಷಯ ಇಲ್ಲಿ ಮಾತನಾಡಬಹುದಾ?

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು): ಈಗ ನಮ್ಮ ಸಂಪ್ರದಾಯದ ಪ್ರಕಾರ ಬಜೆಟ್ ಮಂಡನೆ ಆದ ಮೇಲೆ ಸಾಮಾನ್ಯ ಚರ್ಚೆಯನ್ನು ಕಳೆದ ಒಂದು 10-20 ವರ್ಷಗಳಿಂದ ಎಷ್ಟು ದಿವಸ ಸಾಮಾನ್ಯ ಚರ್ಚೆ ಮಾಡಿದ್ದೇವೆ ಎನ್ನುವುದನ್ನು ಲೆಕ್ಕ ತೆಗೆದುಕೊಂಡರೆ, ನಾವು ಲೆಕ್ಕ ಇಟ್ಟರೆ ಎಷ್ಟು ದಿವಸ ಸಿಗುತ್ತದೆ ಎನ್ನುವುದನ್ನು ತಾವು ವಿವರಿಸಿ ಹೇಳಬೇಕು. ಅಂತಹ ಅತಿರೇಕ ಈ ಸರ್ಕಾರದಿಂದ ನಡೆದಿದೆ ಎನ್ನತಕ್ಕದ್ದನ್ನು ತಾವು ವಿವರಿಸಿ ಹೇಳಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು: ಬಿಎಸಿ ಮೀಟಿಂಗ್‌ನಲ್ಲಿ ಈ ಡೀಟೇಲ್ಸ್ ಕೊಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಮೇಲಾಗಿ ನಾವು ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಲೇಬೇಕು. ಇಲಾಖಾ ಸಮಿತಿಗಳು ಇರುವ ಕಾರಣದಿಂದ ಆ ವ್ಯವಸ್ಥೆ ಬಂದಿರುವ ಕಾರಣದಿಂದಾಗಿ, ಇಲಾಖಾ ಸಮಿತಿಗಳು ವರದಿ ಕೊಡುವವರಗೆ ನಾವು ಬೇಡಿಕೆಗಳ ಮೇಲೆ ಚರ್ಚೆ ಮಾಡುವ ಹಾಗೆ ಇಲ್ಲ, ಬಜೆಟನ್ನು ಪಾಸ್ ಮಾಡುವ ಹಾಗಿಲ್ಲ. ಏನಿದ್ದರೂ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಲೇಬೇಕು. ಇಲಾಖಾ ಸಮಿತಿಯ ವರದಿಗಳು ಬಂದಾದ ಮೇಲೆ

ಅಧಿವೇಶನದಲ್ಲಿ ಚರ್ಚೆ ಆದ ಮೇಲೆ ಅಂತಿಮವಾದಂತಹ ಆಯವ್ಯಯವನ್ನು ಪಾಸ್ ಮಾಡಿಕೊಳ್ಳಬೇಕು. ಈ ವ್ಯವಸ್ಥೆ ಇರುವುದರಿಂದ ಹಾಗೆ ಇರುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ವಿಷಯ ಸಮಿತಿಗಳು ಇರುವುದರಿಂದಾಗಿ 31ನೇ ತಾರೀಖು ಕೊನೆಯ ದಿನವಾಗಿರುವುದರಿಂದ ಕೌನ್ಸಿಲ್‌ನಲ್ಲೂ ಪಾಸ್ ಆಗಬೇಕು. 29ನೇ ತಾರೀಖು ನೀವು ಎಲ್ಲವನ್ನೂ ಪಾಸ್ ಮಾಡಿಕೊಳ್ಳಿ. ಚರ್ಚೆಯೇ ಬೇಕಾಗಿಲ್ಲ. ವಿಷಯ ಸಮಿತಿಗಳು ಚರ್ಚೆ ಮಾಡಿಕೊಳ್ಳುತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ: ಹಾಗಾಗಿಯೇ 21ನೇ ತಾರೀಖು ಬಜೆಟ್ ಮಂಡನೆ ಆಗುತ್ತಿರುವುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನೀವು ಹತ್ತು ವರ್ಷದ ಲೆಕ್ಕ ತೆಗೆದುಕೊಂಡರೂ ಸಹಿತ 6 ದಿನ, 8 ದಿನ ನಾವು ಚರ್ಚೆ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ: ನಾನೂ ನೋಡಿದ್ದೇನೆ. ಇಡೀ ಬಜೆಟ್ ಸೆಷನ್‌ನ್ನು 15, 16 ದಿವಸಗಳಲ್ಲಿ ಪೂರೈಸಿರತಕ್ಕ ಪ್ರಕರಣ ಕೂಡ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ಸಾರಿ ಅದೂ ಇಲ್ಲವಲ್ಲಾ ಬಜೆಟ್ ಅನ್ನು ಚರ್ಚೆ ಮಾಡಲಿಕ್ಕೆ ವಿಚಾರ ಇಟ್ಟುಕೊಂಡರೂ ಸಹ 21ನೇ ತಾರೀಖು ಬಜೆಟ್ ಮಂಡನೆ ಆಗುತ್ತದೆ. 22ರಂದು ನಾನ್ ಅಫಿಷಿಯಲ್ ಡೇ, ಶುಕ್ರವಾರ ಮತ್ತು 26ನೇ ತಾರೀಖಿನ ದಿವಸ ಒಂದು ದಿವಸ ಚರ್ಚೆ ಮಾಡಬೇಕಾಗುತ್ತದೆ. 27ನೇ ತಾರೀಖಿನಂದು ರಾಜ್ಯ ಸಭಾ ಚುನಾವಣೆ ಇದೆ. ನಾವು ಎಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಇದೆ? 224 ಜನ ಚರ್ಚೆ ಮಾಡಲು ಅವಕಾಶ ಎಲ್ಲಿದೆ? ಯಾವುದಾದರೂ ಒಂದು ಇಲಾಖೆ ಬಗ್ಗೆ ನಾವು ಮಾತನಾಡಲಿಕ್ಕೆ ಆಗುತ್ತದೆಯೇ? ತಾವು ಇದನ್ನು ವಿಚಾರ ಮಾಡಬೇಕಾಗುತ್ತದೆ. ಈಗಲೂ ಸಹಿತ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ಕೊನೆಯಪಕ್ಷ ತಾವು ಇನ್ನು ಎರಡು ಬಜೆಟನ್ನು ಮಂಡನೆ ಮಾಡುವವರು ಇದ್ದೀರಿ. ಒಂದು ದಿನಾಂಕವನ್ನು ನಿಗದಿ ಮಾಡಿ. ಮಾರ್ಚ್ 10, ಮಾರ್ಚ್ 15, ಮಾರ್ಚ್ 20 ಎಂದು ನಿಗದಿ ಮಾಡಿ ಈಗ ಬೇರೆ ಬೇರೆ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಬಜೆಟನ್ನು ನೋಡಿರಲಿಲ್ಲ. ನಿಮ್ಮ ಪ್ರಾಬ್ಲಮ್ ನಮಗೆ ಅರ್ಥ ಆಗುತ್ತದೆ. ಬಹುಶಃ ನೀವು ಹಣಕಾಸಿನ ಕೊರತೆ ಜಾಸ್ತಿ ಆಗಿರುವುದರಿಂದಾಗಿ ಅದನ್ನು ಬೇರೆ ಬೇರೆ ಮೂಲಗಳಿಂದ ಕ್ರೋಢೀಕರಿಸಿಕೊಳ್ಳಲು 21ನೇ ತಾರೀಖು ಬಜೆಟ್ ಮಂಡನೆ ಮಾಡಲು ನಿರ್ಧರಿಸಿರಬಹುದು. ನಾನು ಅದನ್ನು ತಪ್ಪು ಎಂದು ಹೇಳುವುದಿಲ್ಲ. ಆದರೆ ನಮಗೆ ಚರ್ಚೆಗೆ ಅವಕಾಶ ಎಲ್ಲಿದೆ ಎಂದು ನಾನು ಕೇಳತಕ್ಕದ್ದು. ನಾವು ಯಾವುದೇ ಒಂದು ಇಲಾಖೆಯ ಬಗ್ಗೆ ಸಲಹೆಯನ್ನು ಕೊಡಬೇಕಾದರೆ, ಮತ್ತೊಂದು ಕೊಡಬೇಕಾದರೆ ನಮಗೆ ಸಮಯವಾದರೂ ಎಲ್ಲಿದೆ? ಬಹಳ ಜಾಸ್ತಿ ಎಂದರೆ ನಾಲ್ಕು ಜನ ಸದಸ್ಯರು ಮಾತನಾಡಬಹುದು ಅಷ್ಟೇ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ವಿಷಯ ಸಮಿತಿ ಬಗ್ಗೆ ಹೇಳಿದರು. ಬಹುಶಃ ನನಗೆ ಅನ್ನಿಸುತ್ತದೆ, ನಾವು ಅದನ್ನು ಸಪೋರ್ಟ್ ಮಾಡಿದ್ದೆವು. ನಮಗೆ ಸರ್ಕಾರದ ನೀತಿಯನ್ನು ನೋಡಿದರೆ ಏಕೋ ಆ ವಿಷಯ ಸಮಿತಿಯೇ ಬೇಡ ಎಂದು ಅನ್ನಿಸುತ್ತಿದೆ. ಮಾನ್ಯ ಸಿಂಧ್ಯಾರವರು ಇದೆಲ್ಲಾ ಪ್ರಯೋಜನ ಇಲ್ಲ ಎಂದು ಹೇಳಿದರು. ನಮಗೂ ಹಾಗೆಯೇ ಅನ್ನಿಸುತ್ತಿದೆ. ಸುಮ್ಮನೇ ಎಲ್ಲಾ ವಿಷಯ ಸಮಿತಿಯಲ್ಲಿ ಡಿಸ್ಕಷನ್ ಆಗುತ್ತದೆ. ಅಲ್ಲಿ ಹೋಗಿ ಡಿಸ್ಕಷನ್ ಮಾಡಿ ಹೋಗಿ ಬಿಡಿರಿ ಎಂದು ಹೇಳಿ ಈ ರೀತಿ ಅದರ ಬಗ್ಗೆ ಸದನದಲ್ಲಿ ಚರ್ಚೆ ನಡೆಸುವಂತಹದ್ದೂ ಇಲ್ಲ. ಆ ವಿಷಯ ಸಮಿತಿ ಬಂದ ಮೇಲೆ ಹೀಗಾಗಬಾರದು ಎನ್ನುವಂತಹದು ನನ್ನ ಇಚ್ಛೆ.

ಅಧ್ಯಕ್ಷರು: ನೀವು ವಿಷಯಕ್ಕೆ ಬನ್ನಿ.

ಶ್ರೀ ಜಗದೀಶ್ ಶೆಟ್ಟರ್: ಇಲ್ಲಿ ಇದ್ದಾವೆ ವಿಷಯಗಳು. ಅವರು ಬಜೆಟ್ ಬಗ್ಗೆ ಹೇಳಿದರು 8 ದಿವಸ, 10 ದಿವಸ, 14 ದಿವಸ ನಡೆದಂತಹ ಲಿಸ್ಟ್ ನನ್ನ ಹತ್ತಿರ ಇದೆ. ಲೋಯೆಸ್ಟ್ ಸಹ ಇದೆ. ಹೈಯೆಸ್ಟ್ ಸ್ಟೂ ಸಹ ಇದೆ. ಹೈಯೆಸ್ಟ್ ಇರುವುದನ್ನು ನಾವು ಫಾಲೋ ಮಾಡೋಣ. 14 ದಿವಸ 15 ದಿವಸ ಚರ್ಚೆ ಆದಂತಹ ಪ್ರಕರಣವೂ ಇದೆ. ನನ್ನ ಹತ್ತಿರ ಲಿಸ್ಟ್ ಇದೆ, ಎಲ್ಲಾ ತೆಗೆದುಕೊಂಡು ಬಂದಿದ್ದೇನೆ.

ಅಧ್ಯಕ್ಷರು: ಅದೆಲ್ಲಾ ಜನರಲ್ ಡಿಸ್ಕಷನ್.

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಮುಂದೆ ಈ ರೀತಿ ಆಗಬಾರದು ಎಂಬುದು ನನ್ನ ಕಳಕಳಿ ಇದೆ. ಇವತ್ತೇನು ನಾವು ನಿಲುವಳಿ ಸೂಚನೆಯನ್ನು ಮುಂದನೆ ಮಾಡಿದ್ದೇವೆ, ಇಡೀ ರಾಜ್ಯದಲ್ಲಿ ಬಹಳಷ್ಟು ತಾಲ್ಲೂಕುಗಳಲ್ಲಿ ಇವತ್ತು ಬರಗಾಲದ ಒಂದು ಗಂಭೀರವಾದಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಮುಂಗಾರು ಮಳೆ ಹೋಯಿತು. ನಂತರ ಹಿಂಗಾರು ಸಹಿತ ಫೇಲ್ ಆಗಿದೆ. ಹಿಂದೆ ಮುಂಗಾರು ಫೇಲ್ ಆದಂತಹ ಸಂದರ್ಭದಲ್ಲಿ ಸರ್ಕಾರ ಬರಗಾಲದ ಕಾಮಗಾರಿಯನ್ನು ಕೆಲವು ಕಡೆ ಪ್ರಾರಂಭ ಮಾಡಿತ್ತು. ಆದರೆ ಕೆಲವು ಭಾಗದಲ್ಲಿ ಒಂದಿಷ್ಟು ಮಳೆ ಆಗಿದ್ದರಿಂದ, ಮಳೆಗಾಲ ಪ್ರಾರಂಭ ಆಯಿತು, ಮಳೆ ಬಿತ್ತು ಯಾವುದೇ ಪ್ರದೇಶದಲ್ಲಿ ಬರಗಾಲ ಇಲ್ಲ; ಅದಕ್ಕಾಗಿ ಬರಗಾಲ ಕಾಮಗಾರಿಗಳನ್ನು ಮುಂದುವರಿಸಬಾರದು ಎಂದು ಹೇಳಿ ಬರಗಾಲ ಕಾಮಗಾರಿಗಳನ್ನು ಸರ್ಕಾರದವರು ನಿಲ್ಲಿಸಿಬಿಟ್ಟರು. ಆದರೆ ನಿಜವಾದ ಪರಿಸ್ಥಿತಿಯನ್ನು ಸರ್ಕಾರ ಅಧ್ಯಯನ ಮಾಡಲಿಲ್ಲ. ಇವತ್ತು ಜಿಲ್ಲಾಧಿಕಾರಿಗಳು ಇರಬಹುದು, ಇನ್ನಿತರ ಅಧಿಕಾರಿಗಳು ಇರಬಹುದು, ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ವಸ್ತುಸ್ಥಿತಿ ಏನು ಇದೆ ಇದನ್ನು ಅರ್ಥ ಮಾಡಿಕೊಳ್ಳುವಂತಹವರು ಯಾರೂ ಇಲ್ಲ. ಜನರ ಒಂದು ನಿಜವಾದ ಪರಿಸ್ಥಿತಿ ಏನು ಎಂದು ತಿಳಿದುಕೊಳ್ಳುವಂತಹ ಇಚ್ಛಾಶಕ್ತಿ ಅಧಿಕಾರಿಗಳಲ್ಲಿ ಇವತ್ತು ಇಲ್ಲದಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಪತ್ರಿಕೆಗಳಲ್ಲಿ

ಇವತ್ತು ಎಲ್ಲೆಲ್ಲಿ ಬರಗಾಲ ಇದೆ, ಎಲ್ಲೆಲ್ಲಿ ನೀರಿಗೆ ಹಾಹಾಕಾರ ಇದೆ ಎನ್ನುವ ಬಗ್ಗೆ ಸಾಕಷ್ಟು ವರದಿಗಳು ಬರುತ್ತಿವೆ. ಆ ವರದಿಗಳನ್ನಾದರೂ ನೋಡಿ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ಇವತ್ತು ಏನೂ ಕ್ರಮ ಕೈಗೊಳ್ಳುತ್ತಾ ಇಲ್ಲ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಬರಗಾಲ ಬರುತ್ತಿದೆ, ನೀರಿನ ಹಾಹಾಕಾರ ಇದೆ, ವಿದ್ಯುತ್ತಿನ ಅಭಾವ ಇದೆ, ಇದರ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಏನು ಕೈಗೊಳ್ಳಬೇಕೋ ಇದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿಲ್ಲ ಎಂದು ನನಗೆ ಅನ್ನಿಸುತ್ತಿದೆ. ಯಾವುದೇ ಒಂದು ತುರ್ತು ಪರಿಸ್ಥಿತಿ ಬಂದಾಗ ತಕ್ಷಣವೇ ಏನಾದರೂ ಒಂದು ಕ್ರಮ ಕೈಗೊಳ್ಳುವಂತಹದು ಆಗಬೇಕು. ನಮ್ಮ ಕಡೆಗೆ ಒಂದು ಗಾದೆ ಮಾತು ಇದೆ. ''ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿಯನ್ನು ತೋಡುವುದು'' ಎಂದು. ಆದರೆ, ಇವತ್ತು ಏನು ಪರಿಸ್ಥಿತಿ ಆಗಿದೆ ಎಂದರೆ, ಗಡ್ಡಕ್ಕೆ ಬೆಂಕಿ ಹತ್ತಿದಾಗಲೂ ಬಾವಿಯನ್ನು ತೋಡಲಾರದಂತಹ ಸರ್ಕಾರ ಇದು ಎಂದು ಹೇಳಬೇಕಾಗುತ್ತದೆ. ಇವತ್ತು ಇಷ್ಟೊಂದು ತುರ್ತಾದಂತಹ, ಗಂಭೀರವಾದಂತಹ ಪರಿಸ್ಥಿತಿ ಇದೆ. ಇಷ್ಟಾದರೂ ಸಹಿತ ಸರ್ಕಾರ ಇವತ್ತು ಯಾವುದೇ ಒಂದು ಕ್ರಮವನ್ನು ಮಾಡಿಲ್ಲ. ಬರಗಾಲ ಕಾಮಗಾರಿಗಳನ್ನು ಮಾಡುವಂತಹದು ಅಥವಾ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಹುಡುಕುವಂತಹದು ವಿದ್ಯುತ್ತಿನ ಅಭಾವದ ಬಗ್ಗೆ, ಅದರ ಪರಿಹಾರದ ಬಗ್ಗೆ ಚಿಂತನೆ ಮಾಡುವಂತಹದು ಇವತ್ತು ಸರ್ಕಾರದ ಕಡೆಯಿಂದ ಆಗುತ್ತಿಲ್ಲ.

(ಮಾನ್ಯ ಉಪಸಭಾಧ್ಯಕ್ಷರಾದ ಶ್ರೀ ಮನೋಹರ್ ಹೆಚ್.ತಹಶೀಲ್ದಾರ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದು ಏಕೆ ಆಗುತ್ತಿದೆ ಎನ್ನುವಂತಹದ್ದರ ಬಗ್ಗೆ ನಾವು ಇವತ್ತು ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಬಹುಶಃ ಈ ವಿಷಯದಲ್ಲಿ ಸರ್ಕಾರ ಗಾಢವಾದ ನಿದ್ರೆಯನ್ನು ಮಾಡುತ್ತಿದೆ ಎಂದು ನನಗೆ ಅನ್ನಿಸುತ್ತಿದೆ. ಈ ರೀತಿಯಾದಂತಹ ಗಾಢವಾದ ನಿದ್ರೆಯನ್ನು ಈ ವಿಷಯಕ್ಕೆ ಸರ್ಕಾರ ಮಾಡಿದರೆ ಬಹುಶಃ ಜನಸಾಮಾನ್ಯರ ಪರಿಸ್ಥಿತಿ, ಯಾವ ಮಟ್ಟಕ್ಕೆ ಹೋಗಬಹುದು ಎನ್ನುವಂತಹ ಚಿಂತನೆಯನ್ನು ನಾವು ಮಾಡಬೇಕಾಗುತ್ತದೆ. ಅದರ ಸಲುವಾಗಿ ಇವತ್ತು ರಾಜ್ಯದಲ್ಲಿ ಒಂದು ಕಡೆ ಈ ವಿದ್ಯುತ್ತಿನ ಅಭಾವದ ಪರಿಸ್ಥಿತಿ; ಈ ವಿದ್ಯುತ್ತಿನ ಕೊರತೆಯಿಂದ ವಿದ್ಯುತ್ತಿನ ಕ್ಷಾಮದಿಂದ, ಅದರಿಂದ ಪರಿಣಾಮ ಏನಾಗುತ್ತದೆ ಎಂದರೆ ಇವತ್ತು ಕುಡಿಯುವ ನೀರಿನ ಯೋಜನೆಗಳೆಲ್ಲಾ ಮಣ್ಣುಪಾಲು ಆಗಿವೆ. ಆ ಕುಡಿಯುವ ನೀರಿನ ಯೋಜನೆಗಳಿಗೆ ಇವತ್ತು ವಿದ್ಯುತ್ ಬೇಕು. ವಿದ್ಯುತ್ತಿನ ನಿರಂತರ ಸರಬರಾಜು ಇಲ್ಲದೇ ಇದ್ದರೆ ತೊಂದರೆ ಆಗುತ್ತದೆ. ಎಷ್ಟೋ ಗ್ರಾಮಗಳಲ್ಲಿ ಇವತ್ತು ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅದೇ ರೀತಿಯಲ್ಲಿ ಇವತ್ತು ರೈತರಿಗೆ ತಮ್ಮ ಹೊಲಗಳಿಗೆ ವಿದ್ಯುಚ್ಛಕ್ತಿಯಿಂದ ಪಂಪುಸೆಟ್ಟು ಮುಖಾಂತರ ನೀರನ್ನು ಹೊಲಗಳಿಗೆ ಬಿಡುವಂತಹದು; ಆ ವಿದ್ಯುತ್ತಿನ ಅಭಾವದಿಂದ ಅಲ್ಲಿಯೂ ಧಕ್ಕೆ ಆಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ನಿರಂತರವಾಗಿ 12 ತಾಸು ವಿದ್ಯುತ್ತನ್ನು ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹಿಂದಿನ ತಮ್ಮ ಬಜೆಟ್ ಭಾಷಣದಲ್ಲಿ

ಹೇಳಿದ್ದರು. ಆ ಭರವಸೆ ಎಲ್ಲಿಗೆ ಹೋಯಿತು ಎಂದು ಇವತ್ತು ನಾನು ಕೇಳಬೇಕಾಗುತ್ತದೆ. 12 ತಾಸು ವಿದ್ಯುತ್ತನ್ನು ನಿಮಗೆ ಕೊಡಲು ಏಕೆ ಆಗುತ್ತಿಲ್ಲ? ಅದಕ್ಕೆ ಕಾರಣಗಳು ಏನು? ಇದರ ಬಗ್ಗೆ ಇವತ್ತು ಸಾರ್ವಜನಿಕವಾಗಿ ಸ್ಪಷ್ಟೀಕರಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕಾಗುತ್ತದೆ ಮತ್ತು ಒಂದು ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಯವರೆಗೆ ಹೇಳಿದ್ದರು ಎಂದರೆ ಈ ಗ್ರಾಮೀಣ ಪ್ರದೇಶದಲ್ಲಿ ನಿರಂತರವಾಗಿ 12 ತಾಸು ವಿದ್ಯುತ್ತನ್ನು ಕೊಡದೇ ಇದ್ದರೆ ಕೆಪಿಟಿಸಿಎಲ್ ಅಧಿಕಾರಿಗಳ ತಲೆದಂಡವನ್ನು ತೆಗೆದುಕೊಳ್ಳಬೇಕಾಗುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದರು. 6 ತಿಂಗಳಲ್ಲಿ ಸುಧಾರಣೆ ಆಗಬೇಕು, ಸುಧಾರಣೆ ಆಗದಿದ್ದರೆ ಕೆಪಿಟಿಸಿಎಲ್ ಅಧಿಕಾರಿಗಳ ತಲೆದಂಡ ಹೋಗುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದರು.

೧.೦೦ ಪಿ.ಎಂ

ಹಾಗಾದರೆ, ಯಾವ ಅಧಿಕಾರಿಗಳ ಮೇಲೆ ಕ್ರಮವನ್ನು ಕೈಗೊಂಡಿದ್ದಾರೆ? ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಯಾಗಿದೆಯೇ? ಸುಧಾರಣೆಯಾಗದಿದ್ದರೆ ಯಾವ ಅಧಿಕಾರಿಗಳ ತಲೆದಂಡ ತೆಗೆದುಕೊಳ್ಳಲಾಗಿದೆ? ಇದಕ್ಕೆ ಸರ್ಕಾರ ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಅದು ಕೇವಲ ಮಾತಿನ ಹೇಳಿಕೆ ಮುಖಾಂತರ, ಹಲವಾರು ವಚನಗಳನ್ನು ಕೊಡುವ ಮೂಲಕ ಜನರನ್ನು ಮರುಳು ಮಾಡುವುದು ಬೇಡ. ನಿಜವಾಗಿಯೂ ಗ್ರಾಮೀಣ ಜನರಿಗೆ ಅನುಕೂಲವಾಗುವ ದಿಸೆಯಲ್ಲಿ ಸರ್ಕಾರ ಚಿಂತನೆ ಮಾಡಬೇಕಾಗಿದೆ. ದಿನದಲ್ಲಿ ಸುಮಾರು 12 ತಾಸುಗಳ ಕಾಲ ವಿದ್ಯುತ್ ಅನ್ನು ನಿರಂತರವಾಗಿ ಕೊಡುವ ಸರ್ಕಾರದ ನೀತಿ ಎಲ್ಲಿ ಹೋಯಿತು? ಇಂದು ಗ್ರಾಮೀಣ ಪ್ರದೇಶದಲ್ಲಿ ಕೇವಲ 3-4 ಗಂಟೆಗಳಷ್ಟು ಮಾತ್ರ ವಿದ್ಯುತ್ ಸರಬರಾಜಾಗುತ್ತಿದೆ. ಹೆಚ್ಚೆಂದರೆ ಒಮ್ಮೊಮ್ಮೆ 6 ಗಂಟೆಗಳಷ್ಟು, ಅದೂ ಕೂಡ ಲೋ ವೋಲ್ಟೇಜ್‌ನಲ್ಲಿ ಸರಬರಾಜಾಗುತ್ತಿದೆ. ಇದು ಸರಿಯಿಲ್ಲ. ದಿನಕ್ಕೆ ಕೇವಲ 4ರಿಂದ 6 ಗಂಟೆಗಳಷ್ಟು ಕಾಲ ವಿದ್ಯುತ್ ಕೊಟ್ಟರೆ ರೈತ ಹೇಗೆ ಬದುಕಲು ಸಾಧ್ಯ? ಆತ ಹೇಗೆ ಉಳುಮೆ ಮಾಡಲು ಸಾಧ್ಯ? ಆತ ಹೇಗೆ ಒಳ್ಳೆಯ ಬೆಳೆ ತೆಗೆಯಲು ಸಾಧ್ಯ? ಹೀಗೆ ಒಂದಕ್ಕೊಂದು ಸಂಬಂಧವಿದೆ. ಸರ್ಕಾರ ಇದರ ಬಗ್ಗೆ ಏಕೆ ಚಿಂತನೆ ಮಾಡಲಿಲ್ಲ? ಸರ್ಕಾರ ಜನರಿಗೆ ಉತ್ತರಿಸಬೇಕಾಗುತ್ತದೆ. ಇಲ್ಲದಿದ್ದರೆ ಇದೇ ರೀತಿಯ ಪರಿಸ್ಥಿತಿ ಮುಂದುವರೆದರೆ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಾಳೆ ಕಾನೂನು ಮತ್ತು ಸುವ್ಯವಸ್ಥೆ ಮೇಲೆ ಪರಿಣಾಮವುಂಟಾಗಬಹುದು. ಇದರ ಬಗ್ಗೆ ಪತ್ರಿಕೆಗಳಲ್ಲಿ ನೋಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಇನ್ನಿತರ ಮಂತ್ರಿಗಳು ಬೇರೆ ಬೇರೆ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಪಾಲ್ಗೊಂಡಾಗ ಅಲ್ಲಿ ನೆರೆಯುವ ರೈತಾಪಿ ಜನರು ''ಸ್ವಾಮಿ, ನಮಗೆ ಕರೆಂಟ್ ಕೊಡಿ'' ಎಂದು ಒಕ್ಕೊರಲಿನಿಂದ ಕೇಳುತ್ತಿರುವುದನ್ನು ಕಂಡಿದ್ದೇವೆ. ಜನರಿಗಾದ ಕಷ್ಟ-ನಷ್ಟಗಳು ಈ ರೀತಿಯ ಭಾವನೆಗಳನ್ನು ವ್ಯಕ್ತಪಡಿಸುವ ಮೂಲಕ ತೋಡಿಕೊಳ್ಳುತ್ತಿರುವಾಗ ಸರ್ಕಾರ ಏನು ಚಿಂತನೆ ನಡೆಸಿದೆ? ಇವೊತ್ತು ಕೆಪಿಟಿಸಿಎಲ್ ಸುಧಾರಣೆ ಒಂದೆಡೆಯಾದರೆ,

ವಿದ್ಯುತ್ ಅಭಾವ ನೀಗಿಸುವುದು ಮುಖ್ಯೋದ್ದೇಶವಾಗಿದೆ ಹಾಗೂ ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಸೌಲಭ್ಯ ಒದಗಿಸುವುದೂ ಸಹ ಇದೆ. ಆದುದರಿಂದ, ಇದರ ಬಗ್ಗೆ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಕೇಳಬಯಸುತ್ತೇನೆ. ಸರ್ಕಾರದಲ್ಲಿ ನಾನು ಒಂದು ಪ್ರಶ್ನೆ ಕೇಳುತ್ತಿರುವುದೇನೆಂದರೆ, ನಮ್ಮ ರಾಜ್ಯದಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಮತ್ತು ವಿದ್ಯುತ್ ಕಳುವು ನಮ್ಮ ರಾಜ್ಯದಲ್ಲಿ ಶೇಕಡ 38ರಷ್ಟಿದೆ. ನಮ್ಮ ರಾಷ್ಟ್ರದ ಸರಾಸರಿ ತೆಗೆದುಕೊಂಡಾಗ ಶೇಕಡ 14ರಿಂದ 18ರಷ್ಟಿದೆ. ಈ ನಷ್ಟವನ್ನು ನಾವು ಗಣನೆಗೆ ತೆಗೆದುಕೊಂಡರೆ ಪ್ರತಿವರ್ಷವೂ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಾನಿ ಕೆಪಿಟಿಸಿಎಲ್‌ಗೆ ಆಗುತ್ತಿದೆ. ನ್ಯಾಷನಲ್ ಆವರೇಜ್ ಶೇಕಡ 14ರಿಂದ 18ರಷ್ಟಿರುವ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿನ ಟ್ರಾನ್ಸ್‌ಮಿಷನ್ ಲಾಸ್, ಡಿಸ್ಟ್ರಿಬ್ಯೂಷನ್ ಲಾಸ್ ಮತ್ತು ವಿದ್ಯುತ್ ಕಳುವು ಶೇಕಡ 38ರಿಂದ 40ರಷ್ಟಿದೆಯೆಂದು ಹಾಗೂ ಅದಕ್ಕಿಂತಲೂ ಅಧಿಕವಾಗಿದೆಯೆಂದು ನಾವು ಕೇಳಿದ್ದೇವೆ. ಹಾಗಾದರೆ, ಇವತ್ತು ಇಷ್ಟೊಂದು ಪ್ರಮಾಣದಲ್ಲಿ ಲಾಸ್ ಇರುವಾಗ ಇದನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ? ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ರೀತಿಯ ಲಾಸ್ ಇರಬಹುದು. ಅದೇ ರೀತಿ ಇಂಟರ್‌ನ್ಯಾಷನಲ್ ಆವರೇಜ್ ತೆಗೆದುಕೊಂಡಾಗ ಶೇಕಡ 6-8ರಷ್ಟು ನಷ್ಟವಾಗುತ್ತಿದೆ. ಹೀಗಾಗಿ ನಮ್ಮ ರಾಜ್ಯವೂ ಸೇರಿದಂತೆ ಕೆಲವೊಂದು ರಾಜ್ಯಗಳಿರಬಹುದು. ಆದರೆ, ಲಾಸ್ ಕಡಿಮೆ ಇರುವಂತಹ ರಾಜ್ಯಗಳಿಗೆ ನಾವು ಹೋಲಿಸಬೇಕಾಗುತ್ತದೆ. ನ್ಯಾಷನಲ್ ಆವರೇಜ್ ಮತ್ತು ಇಂಟರ್‌ನ್ಯಾಷನಲ್ ಆವರೇಜ್‌ಗಳನ್ನು ಹೋಲಿಸಬೇಕಾಗುತ್ತದೆ. ಆಗ ಶೇಕಡ 38ರಷ್ಟು ನಷ್ಟ ಏಕೆ ಉಂಟಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ಇವತ್ತು ವಿದ್ಯುತ್ ಸುಧಾರಣೆ ಹಾಗೂ ಆಗುತ್ತಿರುವ ವಿದ್ಯುತ್ ಕಳ್ಳತನದ ಬಗ್ಗೆ ಅಭಿಯಾನ ಸೇರಿದಂತೆ ಹಲವಾರು ಕ್ರಮಗಳನ್ನು ಕೆಪಿಟಿಸಿಎಲ್‌ನವರು ಕೈಗೊಂಡಿರುವುದಾಗಿ ತಿಳಿಸಿದ್ದಾರೆ. ಹಾಗಾಗಿ, ಮೊದಲೇ ಇದರ ಬಗ್ಗೆ ಏಕೆ ಚಿಂತಿಸಲಿಲ್ಲ? ಏಪ್ರಿಲ್ 6ನೇ ತಾರೀಖಿನವರೆಗೆ ಗಡುವು ನೀಡಿದ್ದಾರೆ. ಇದರ ಪ್ರೋಗ್ರೆಸ್ ಅನ್ನು ನಮ್ಮ ಮುಂದೆ ಹೇಳಬೇಕಾಗುತ್ತದೆ. ಯಾರಿಗೆ ಯಾವ ರೀತಿಯ ಕನ್‌ಸೆಷನ್, ಎಕ್ಸೆಂಪ್‌ಷನ್ ನೀಡಲಾಗಿದೆ? ವಿದ್ಯುತ್ ಕಳುವಿನ ಎಷ್ಟು ಪ್ರಕರಣಗಳಲ್ಲಿ ದಂಡ ವಸೂಲು ಮಾಡಿ ಶಿಕ್ಷಿಸಲಾಗಿದೆ? ಲಾಸ್ ಕಡಿಮೆ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ ಮುಂತಾದವುಗಳನ್ನೆಲ್ಲಾ ನಮ್ಮ ಮುಂದೆ ಹೇಳಬೇಕಾಗುತ್ತದೆ. ಇವತ್ತು ವಿದ್ಯುತ್ ದರ ಏರಿಕೆ ಕುರಿತಂತೆ ಚಿಂತಿಸುತ್ತಿದ್ದೇವೆ. ದರ ಏರಿಕೆ ಕುರಿತು ನನಗನ್ನಿಸುವುದೇನೆಂದರೆ, ಆಗುತ್ತಿರುವ ಲಾಸ್ ಏನಿದೆ, ಇದನ್ನು ಕಡಿಮೆ ಮಾಡಿದರೆ ಬಹುಶಃ ವಿದ್ಯುತ್ ದರ ಏರಿಸುವ ಪ್ರಸಂಗವೇ ಬರುವುದಿಲ್ಲ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸಬೇಕಾಗುತ್ತದೆ. ಗ್ರಾಮೀಣ ಭಾಗದ ರೈತರು ವಿದ್ಯುತ್ ಬಳಸದೆ ವ್ಯವಸಾಯ ಮಾಡುವುದು ಸಾಧ್ಯವಿಲ್ಲದಂತಾಗಿದೆ. ವಿದ್ಯುತ್ ಮೇಲೆ ಅನಿವಾರ್ಯವಾಗಿ ಅವಲಂಬಿಸುವ ಪರಿಸ್ಥಿತಿ ಇದೆ. ರೈತರಿಗೆ ಭೂಮಿ ಮತ್ತು ನೀರಿನ ಮೇಲೆ ಹೇಗೆ ಹಕ್ಕು ಇದೆಯೋ ಅದೇ ರೀತಿಯ ಹಕ್ಕು ವಿದ್ಯುತ್ತಿನ ಮೇಲೂ ಇದೆ. ಇವತ್ತು ಪ್ರತಿಯೊಂದು ಹಂತದಲ್ಲಿಯೂ ರೈತರಿಗೂ ಹಾಗೂ ನಿಗಮಕ್ಕೂ ಸಂಘರ್ಷಗಳು ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕೆಪಿಟಿಸಿಎಲ್ ಕಛೇರಿಗೆ ಮುತ್ತಿಗೆ ಹಾಕುವುದು,

ಅಧಿಕಾರಿಗಳಿಗೆ ದಿಗ್ಬಂಧನ ಹಾಕುವುದೆಲ್ಲವೂ ಏಕೆ ಆಗುತ್ತಿದೆ? ಕಾರಣ ಸ್ಪಷ್ಟವಾಗಿದೆ. ಇಲ್ಲಿ ಪರಸ್ಪರ ವಿಶ್ವಾಸವಿಲ್ಲ. ಸರ್ಕಾರ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಿದ್ಯುತ್‌ನ ಪರಿಸ್ಥಿತಿ ಈ ರೀತಿ ಇದೆಯೆಂದು ಸಾರ್ವಜನಿಕವಾಗಿ ಹೇಳುವಂತಹ ವಸ್ತುಸ್ಥಿತಿ ನಿರ್ಮಾಣವಾಗಿಲ್ಲ. ಹಾಗಾಗಿ, ಇವತ್ತೂ ರೈತ ಬಾಂಧವರಲ್ಲಿ ಕೆಪಿಟಿಸಿಎಲ್ ಹಾಗೂ ಸರ್ಕಾರದ ಬಗ್ಗೆ ಅಪನಂಬಿಕೆ ಹುಟ್ಟಲು ಸಾಧ್ಯವಾಗಿದೆ ಮತ್ತು ಪರಸ್ಪರ ವಿಶ್ವಾಸವಿಲ್ಲದ ಕಾರಣ ಸಂಘರ್ಷಗಳು ಜರುಗುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಂದು ಕಡೆ ರೈತರು ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಹೀಗಾಗಿ ಸಹಕಾರಿ ಬ್ಯಾಂಕುಗಳಿಂದ ಪಡೆದ ಸಾಲವನ್ನು, ವಿದ್ಯುತ್ ದರ ಏರಿಕೆಯ ಬೆಲೆಯನ್ನು ಕಟ್ಟುವಂಥ ಪರಿಸ್ಥಿತಿಯಲ್ಲಿ ರೈತರು ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಪಂಪ್‌ಸೆಟ್‌ಗಳಿಗೆ ಅನಧಿಕೃತವಾಗಿ ವಿದ್ಯುತ ಸೌಕರ್ಯ ತೆಗೆದುಕೊಂಡಿರುವುದಕ್ಕೆ ದಂಡ ಕಟ್ಟಿ ಎಂದು ಸರ್ಕಾರ ಹೇಳುವ ಮೂಲಕ ಅವರ ಮೇಲೆ ದೌರ್ಜನ್ಯ ನಡೆಸುತ್ತಿದೆಯೆಂದು ಅನ್ನಿಸುತ್ತದೆ. ಇದರ ಬಗ್ಗೆ ಏನಾದರೂ ಮಾರ್ಗೋಪಾಯ ಹುಡುಕಬೇಕಾಗುತ್ತದೆ. ಈ ಕುರಿತಂತೆ ಉದಾಹರಣೆ ನೀಡುವುದಾದರೆ, ನಮ್ಮ ರಾಜ್ಯದಲ್ಲಿ ಸುಮಾರು 16 ಲಕ್ಷದಷ್ಟು ಪಂಪ್‌ಸೆಟ್‌ಗಳಿದ್ದು, ಇದರ ಮುಖಾಂತರ 80 ಲಕ್ಷ ಎಕರೆ ಪ್ರದೇಶಗಳಿಗೆ ನೀರಾವರಿಯಾಗುತ್ತಿದೆ. ಅಂದರೆ, ಶೇಕಡ 20ರಷ್ಟು ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಕರ್ಯ ಸಿಗುತ್ತಿದೆ. ರೈತ ಇವತ್ತು ಕೊಳವೆಬಾವಿ ತೋಡಿಸಿ ಪಂಪ್‌ಸೆಟ್ ಅಳವಡಿಸಿಕೊಳ್ಳಬೇಕಾದರೆ ಸುಮಾರು ಒಂದು ಲಕ್ಷ ರೂಪಾಯಿಗಳಷ್ಟು ಹಣವನ್ನು ವಿನಿಯೋಗ ಮಾಡಬೇಕಾಗುತ್ತದೆ. ಮತ್ತು 12 ಸಾವಿರ ರೂಪಾಯಿಗಳಷ್ಟು ಬಡ್ಡಿ ಹಣವನ್ನು ತುಂಬಬೇಕಾಗುತ್ತದೆ. ಇಷ್ಟೊಂದು ಹಣವನ್ನು ಅತ ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಹಣವನ್ನು ಇನ್‌ವೆಸ್ಟ್ ಮಾಡಿದ ನಂತರವೂ ಐದು ಎಕರೆಗಳಷ್ಟು ಪ್ರದೇಶದಲ್ಲಿ ಒಬ್ಬ ರೈತ 5 ರಿಂದ 10 ಹೆಚ್.ಪಿಯಷ್ಟು ಸಾಮರ್ಥ್ಯದ ಪಂಪ್‌ಸೆಟ್ ಬಳಸಿ ನೀರು ಹಾಯಿಸಿ ಅನಾನಸ್ ಬೆಳೆ ಬೆಳೆದರೆ ಅತನಿಗೆ ಸುಮಾರು 63 ಸಾವಿರ ರೂ.ಗಳಷ್ಟು ವಿದ್ಯುತ್ ಬಿಲ್ ಬರುತ್ತದೆ! ನಂತರ, ಈ ಬೆಳೆಯನ್ನು ಸರಿಯಾದ ಬೆಲೆಗೆ ಮಾರಾಟ ಮಾಡಿದರೂ ಸಹ ಇಷ್ಟೊಂದು ಮೊತ್ತದ ವಿದ್ಯುತ್ ಬಿಲ್ ಅನ್ನು ಕಟ್ಟುವುದಕ್ಕಾಗುವುದಿಲ್ಲ. ಇದು ರೈತರ ಪರಿಸ್ಥಿತಿ. ಆದುದರಿಂದ, ವಿದ್ಯುತ್ ದರವನ್ನು ಹೇಗೆ ತುಂಬಲು ಸಾಧ್ಯ? ಒಂದು ಹೆಚ್.ಪಿ.ಗೆ ನೂರು ರೂಪಾಯಿಗಳಿರುವುದನ್ನು 900 ರೂಪಾಯಿಗಳಿಗೆ ಹೆಚ್ಚಿಸುವ ಪ್ರಯತ್ನ ಸಾಗುತ್ತಿದೆ. ಅಷ್ಟೇ ಅಲ್ಲ, ಇವತ್ತು ಯಾವ ರೈತ ಟೆಲಿಫೋನ್, ಟ್ರಾಕ್ಟರ್ ಮತ್ತು ಮೊಬೈಲ್ ಇಟ್ಟುಕೊಂಡಿದ್ದಾನೋ ಅಂತಹವರಿಗೆ ವಿದ್ಯುತ್ ದರ ಏರಿಕೆಯು ತೀವ್ರ ಪರಿಣಾಮವುಂಟಾಗುತ್ತಿದೆ. ಹಾಗಾದರೆ, ಯಾವುದೇ ರೈತ ಟೆಲಿಫೋನ್, ಟ್ರಾಕ್ಟರ್, ದ್ವಿಚಕ್ರ ವಾಹನಗಳನ್ನು ಇಟ್ಟುಕೊಳ್ಳದೆ ಕಳೆದ 10-20 ವರ್ಷಗಳಿಂದ ಯಾವ ಪರಿಸ್ಥಿತಿಯಲ್ಲಿದ್ದಾನೋ, ಹೇಗೆ ಬಡತನದಲ್ಲಿ ಬೆಂದಿದ್ದಾನೋ ಅದೇ ರೀತಿ ಮುಂದುವರೆಯಬೇಕೆಂಬುದು ಬಹುಶಃ ಸರ್ಕಾರದ ನೀತಿಯಾಗಿದೆಯೆಂದು ನನಗನ್ನಿಸುತ್ತದೆ! ಈ ರೀತಿ ಭೇದ ಮಾಡಬಾರದು. ಇವತ್ತು 'ರೈತ' ಎಂದರೆ 'ಬಡವ' ಎನ್ನುವಂತಾಗಿದೆ. ರೈತ ಯಾವತ್ತೂ ಉದ್ಧಾರವಾಗಿಲ್ಲ. ಪ್ರತಿ ವರ್ಷವೂ ಒಂದಲ್ಲ ಒಂದು ತೊಂದರೆಗೆ

ಒಳಗಾಗುತ್ತಿದ್ದಾನೆ. ಒಮ್ಮೆ ಬರಗಾಲ ಬಂದರೆ ಮತ್ತೊಮ್ಮೆ ಅತಿವೃಷ್ಟಿಯಾಗುತ್ತದೆ. ಮಳೆ ಬಂದು ಬೆಳೆ ಬೆಳೆದರೂ ಅದಕ್ಕೆ ಸರಿಯಾದ ಧಾರಣೆ ಸಿಗದಿರುವಂತಾದ್ದನ್ನು ನೋಡುತ್ತಿದ್ದೇವೆ. ಹೀಗೆ ಪ್ರತಿಯೊಂದು ಹಂತದಲ್ಲೂ ರೈತ ತೊಂದರೆಗೊಳಗಾಗುತ್ತಿರುವುದನ್ನು ಇವೊತ್ತು ಸರ್ಕಾರ ಗಂಭೀರವಾಗಿ ಚಿಂತಿಸಬೇಕಾಗುತ್ತದೆ. ಆ ರೀತಿಯಾದ ವಿದ್ಯುತ್ ದರವನ್ನು ಕೊಡುವುದಕ್ಕೆ ಸಾಧ್ಯವಿದೆಯೇ ಎನ್ನುವ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಇವತ್ತು ಪಂಪ್‌ಸೆಟ್‌ಗೆ ಮೀಟರ್‌ಗಳನ್ನು ಹಚ್ಚುವಂತಹ ಕೆಲಸ ಮಾಡುತ್ತಿದ್ದೀರಿ, ಅದನ್ನು ಈಗಾಗಲೇ ರೈತ ಸಮೂಹ ವಿರೋಧ ಮಾಡುತ್ತಿದೆ. ಪಂಪ್‌ಸೆಟ್‌ಗಳಿಗೆ ಮೀಟರ್‌ಗಳನ್ನು ಹಚ್ಚುವ ಮೂಲಕ ನಾಳೆ ನೀವು ವಿದ್ಯುತ್ ದರವನ್ನು ನಿಗಧಿ ಮಾಡುವಂಥಾದ್ದು, ಮತ್ತು ಹೆಚ್ಚಿನ ದರವನ್ನು ಹಾಕುವಂಥಾದ್ದು, ಇವತ್ತು ನಡೆಯುತ್ತಿದೆ. ಹೀಗಾಗಿ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂತಹ ಕೆಲಸವನ್ನು ತಾವು ಮಾಡುತ್ತಿಲ್ಲ. ಅದು ಆಗದಿದ್ದರಿಂದಲೇ ಇವತ್ತು ರಾಜ್ಯದಲ್ಲಿ ಸಂಘರ್ಷ ನಡೆಯುತ್ತಿದೆ. ಇದರಿಂದ ಸಾಮಾಜಿಕ ರಂಗದಲ್ಲಿ ಮತ್ತು ಆರ್ಥಿಕ ರಂಗದಲ್ಲಿ ಒಂದು ದೊಡ್ಡದಾದ ಪರಿಣಾಮ ಬೀರುವಂತೆ ಆಗುತ್ತದೆ. ಇದರ ಬಗ್ಗೆ ಈಗಲೇ ರಾಜ್ಯ ಸರ್ಕಾರ ಏನಾದರೂ ಒಂದು ಕ್ರಮವನ್ನು ಕೈಗೊಂಡರೆ ಮುಂದೆ ಆಗುವಂತಹ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬೇರೆ ರಾಜ್ಯಗಳಲ್ಲಿ ಈ ಒಂದು ವ್ಯವಸ್ಥೆ ಹೇಗೆ ಇದೆ ಎನ್ನುವುದನ್ನು ನೋಡಿಕೊಂಡು ಬರಲು ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳನ್ನು ಕಳುಹಿಸಿ ಕೊಡಲಿ. ಉದಾಹರಣೆಗೆ ಹೇಳುವುದಾದರೆ, ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ರೈತರಿಗೆ ನಿರಂತರವಾದ ವಿದ್ಯುತ್ ಸರಬರಾಜು ಇದೆ ಮತ್ತು ಒಳ್ಳೆಯ ಗುಣಮಟ್ಟವಿರುವ ವಿದ್ಯುತ್ ಸರಬರಾಜು ಮಾಡುವಂತಹ ಒಂದು ವ್ಯವಸ್ಥೆ ಇದೆ. ಅದನ್ನು ನಾವು ಏಕೆ ಅನುಕರಣೆ ಮಾಡಬಾರದು? ಇದರ ಬಗ್ಗೆ ಸರ್ಕಾರ ಗಂಭೀರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಚಿಂತನೆ ಮಾಡಬೇಕು. ನಗರ ಪ್ರದೇಶಗಳಲ್ಲಿ ಯಾರು ಕೈಗಾರಿಕೆಗಳನ್ನು ನಡೆಸುತ್ತಾರೆ, ಯಾರು ಅಲ್ಲಿ ಸೇವೆಯನ್ನು ಮಾಡುತ್ತಾರೆ, ಅವರಿಗೆ ನಾವು ಬೆಳಿಗ್ಗೆ ವಿದ್ಯುತ್ ಕೊಡುತ್ತೇವೆ. ಆದರೆ ರೈತ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಹೊಲದಲ್ಲಿ ದುಡಿಯುವಂತಹವರು, ಅವರಿಗೆ ನಾವು ರಾತ್ರಿ ವೇಳೆ ವಿದ್ಯುತ್ ಕೊಡುವಂಥಾದ್ದು, ಕೇವಲ 4-5 ಗಂಟೆಗಳು ಮಾತ್ರ. ಇವತ್ತು ಹೊಲಗಳಲ್ಲಿ ಕರಡಿ ಇರಬಹುದು, ಚಿರತೆ ಇರಬಹುದು, ಹಾವುಗಳ ಕಾಟ ಇರಬಹುದು. ಇಂಥಾದ್ದರಲ್ಲಿ ರೈತ ರಾತ್ರಿ ತನ್ನ ಹೊಲಕ್ಕೆ ಹೋಗಿ ನೀರು ಬಿಡುವಂತಹ ವ್ಯವಸ್ಥೆ, ಅದೂ ಈ ರೀತಿಯಾದರೆ ರೈತ ಹೇಗೆ ಬದುಕುವುದಕ್ಕೆ ಸಾಧ್ಯ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ತುಂಬಾ ಗಂಭೀರವಾಗಿ ಚಿಂತನೆಯನ್ನು ಮಾಡಬೇಕಾಗಿದೆ. ಈ ಪರಿಸ್ಥಿತಿಯ ನಿರ್ಮಾಣದಿಂದ, ಈ ಬರಗಾಲದ ಪರಿಸ್ಥಿತಿಯ ನಿರ್ಮಾಣದಿಂದ ಹಲವಾರು ತಾಲ್ಲೂಕುಗಳಲ್ಲಿ, ನಾನು ಆ ತಾಲ್ಲೂಕುಗಳ ಹೆಸರುಗಳನ್ನು ಬೇಕಾದರೆ ಹೇಳುತ್ತೇನೆ. ನೀರಿನ ಅಭಾವ ಪೂರ್ತಿ ಗಂಭೀರವಾಗಿದೆ. ಜನ ಕುಡಿಯುವ ನೀರಿಗಾಗಿ ಸುಮಾರು 4-5 ಕಿಲೋಮೀಟರ್ ನಡೆದುಕೊಂಡು ಹೋಗಿ ನೀರು ತರುವಂತಹ

ಪರಿಸ್ಥಿತಿ ಉಂಟಾಗಿದೆ. ಈಗಾಗಲೇ ನಾನು ಹೇಳಿದ ಹಾಗೆ ನೀರಿನ ಹಾಹಾಕಾರವಿದೆ. ಈ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳದಿದ್ದರೆ ತುಂಬಾ ಗಂಭೀರವಾದ ಪರಿಸ್ಥಿತಿ ಉಂಟಾಗುತ್ತದೆ. ನಾನು ಕೆಲವೊಂದು ತಾಲ್ಲೂಕುಗಳನ್ನು ಉದಾಹರಣೆಯಾಗಿ ಹೇಳುತ್ತೇನೆ. ಬೆಂಗಳೂರು ಗ್ರಾಮಾಂತರ ತಾಲ್ಲೂಕಿನಲ್ಲಿ ಕನಕಪುರ ಇರಬಹುದು, ಕೋಲಾರ ಜಿಲ್ಲೆಯ ಬಾಗೇಪಲ್ಲಿ ಮತ್ತು ಗುಡಿಬಂಡೆ, ಚಿಕ್ಕನಾಯಕನಹಳ್ಳಿ, ಹೊಳಲ್ಕೆರೆ, ಮೊಳಕಾಲ್ಮೂರು ಜಗಳೂರು, ಯಲ್ಬುರ್ಗ, ಗುಲ್ಬರ್ಗ ಜಿಲ್ಲೆಯಲ್ಲಿ ಅಫ್ಜಲ್‌ಪುರ, ಚಿಂಚೋಳಿ, ಕಲ್ಬುರ್ಗಿ ತಾಲ್ಲೂಕಿನಲ್ಲಿ ಶಹಾಪುರ್ ಮತ್ತು ಸೋಲಾಪುರ್, ಬೀದರ್ ಜಿಲ್ಲೆಯಲ್ಲಿ ಭಾಲ್ಕಿ, ಬಸವಕಲ್ಯಾಣ, ಅದೇ ರೀತಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಮುಧೋಳ್, ಮುದ್ದೇಬಿಹಾಳ್, ಸಿಂಧಗಿ, ಶಿಗ್ಗಾಂವ್, ರೋಣ, ಶಿರಹಟ್ಟಿ, ಬ್ಯಾಡಗಿ, ಹಾನಗಲ್, ಹುಬ್ಬಳ್ಳಿ ತಾಲ್ಲೂಕು, ಕಲಘಟಗಿ, ಹಾವೇರಿ, ಹಿರೇಕೆರೂರು, ಕುಂದಗೋಳ್, ಸಾಗರ, ಶಿಕಾರಿಪುರ್, ತೀರ್ಥಹಳ್ಳಿ, ಸಕಲೇಶಪುರ, ಆಲೂರು, ಚಿಕ್ಕಮಗಳೂರು, ಕಡೂರು, ಕೊಪ್ಪ, ಮೂಡಿಗೆರೆ, ಎನ್.ಆರ್.ಪುರ್, ವೀರಾಜಪೇಟೆ, ಅಂಕೋಲ, ಹಳಿಯಾಳ, ಕಾರವಾರ, ಕುಮಟ, ಮುಂಡಗೋಡ, ಸಿದ್ದಾಪುರ್, ಶಿರಸಿ, ಸೂಪಾ ಮತ್ತು ಯಲ್ಲಾಪುರ್ ಹೀಗೆ ಸುಮಾರು 44 ತಾಲ್ಲೂಕುಗಳಲ್ಲಿ ತೀರಾ ಗಂಭೀರವಾದ ಪರಿಸ್ಥಿತಿ ಇದೆ. ಬಹುಶಃ ಸರ್ಕಾರ ಇದೇ ರೀತಿಯಲ್ಲಿ ಮುಂದುವರಿದರೆ ಈ ತಾಲ್ಲೂಕುಗಳಲ್ಲಿ ಜನ ದೊಡ್ಡ ಪ್ರಮಾಣದಲ್ಲಿ ದಂಗೆ ಎಳುವಂತಹ ಪರಿಸ್ಥಿತಿ ಉಂಟಾಗುತ್ತದೆ. ಇನ್ನು ಸಂಪೂರ್ಣವಾಗಿ ಅಂತರ್‌ಜಲ ಕಡಿಮೆಯಾದಂತಹ ತಾಲ್ಲೂಕುಗಳು ಅಂದರೆ ಹೆಚ್.ಬಿ.ಹಳ್ಳಿ, ಕುಷ್ಟಗಿ, ಬೀದರ್, ಅಥಣಿ, ಬೈಲಹೊಂಗಲ, ಚಿಕ್ಕೋಡಿ, ಹುಕ್ಕೇರಿ, ಬಾಗೇವಾಡಿ, ಬಿಜಾಪುರ್, ಇಂಡಿ, ಅರಸೀಕೆರೆ, ಚನ್ನರಾಯಪಟ್ಟಣ, ಬೆಳ್ತಂಗಡಿ, ಬಂಟ್ವಾಳ್, ಸೂಳ್ಯ, ಈ ತಾಲ್ಲೂಕುಗಳಲ್ಲಿ ಅಂತರ್‌ಜಲಮಟ್ಟ ಬಹಳ ಕಡಿಮೆಯಾಗಿದೆ. ನಾಳೆ ಕುಡಿಯುವ ನೀರನ್ನು ಬೇರೆ ಕಡೆಯಿಂದ ತರುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಇದರ ಬಗ್ಗೆ ಸರ್ಕಾರ ಈಗಾಗಲೇ ಚಿಂತನೆಯನ್ನು ಮಾಡಬೇಕಲ್ಲಾ! ಅದು ಸರ್ಕಾರದ ಕಡೆಯಿಂದ ಆಗುತ್ತಿಲ್ಲ. ಅಧಿಕಾರಿಗಳು ಈ ಬಗ್ಗೆ ಏನೂ ಚಿಂತನೆ ಮಾಡುತ್ತಿಲ್ಲ. ಮತ್ತೊಂದು ಪ್ರಮುಖವಾದ ಅಂಶವೆಂದರೆ ದನಕರುಗಳಿಗೆ ಮೇವು ಇಲ್ಲ. ಜನ ಆ ಮೇವನ್ನು ಬೇರೆ ತಾಲ್ಲೂಕುಗಳಿಂದ ತರುವಂತಹ ಪ್ರಯತ್ನ ನಡೆಯುತ್ತಿದೆ. ಆದರೆ ಬೇರೆ ತಾಲ್ಲೂಕುಗಳಲ್ಲಿ ಮೇವು ಸಿಗುತ್ತಿಲ್ಲ. ಮೇವಿನ ಕೊರತೆಯಿಂದ ಜಾನುವಾರುಗಳಿಗೆ ತೊಂದರೆಯಾಗಿರುವ ತಾಲ್ಲೂಕುಗಳೂ ಸಹ ಇವೆ. ಹೊಳಲ್ಕೆರೆ ಇರಬಹುದು, ಮೊಳಕಾಲ್ಮೂರು ಇರಬಹುದು ಜಗಳೂರು ಇರಬಹುದು, ಚಾಮರಾಜನಗರ ಇರಬಹುದು, ಕೊಳ್ಳೇಗಾಲ, ಕುಷ್ಟಗಿ, ಸವದತ್ತಿ ಗೋಕಾಕ್, ಬೈಲಹೊಂಗಲ್, ಶಿರಹಟ್ಟಿ, ರಾಣೆಬೆನ್ನೂರು, ಧಾರವಾಡ, ಹುಬ್ಬಳ್ಳಿ, ಕುಂದಗೋಳ್, ನವಲಗುಂದ, ಅರಸೀಕೆರೆ, ಕಡೂರು ಇಲ್ಲಿ ಮೇವಿನ ಕೊರತೆಯಾಗಿದೆ. ನಾನು ಮೊನ್ನೆ ಒಂದು ತಾಲ್ಲೂಕಿಗೆ ಹೋಗಿದ್ದೆ. ಅಲ್ಲಿ ಆಕಸ್ಮಿಕವಾಗಿ ಒಂದು ಬೆಂಕಿ ದುರಂತ ನಡೆದಿದೆ. ಅಲ್ಲಿ ಇಡೀ ಮೇವಿನ ಬಣವೆ ಸುಟ್ಟು ಹೋಗಿದೆ. 4-5 ಜನ ರೈತರು ಇದ್ದಂತಹ ಒಂದು ಏರಿಯಾದಲ್ಲಿ ಹುಲ್ಲಿನ ಬಣವೆ ಸಂಪೂರ್ಣವಾಗಿ ಸುಟ್ಟು ಹೋಗಿದೆ. ಇದರಿಂದ ಸುಮಾರು 50 ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೂ ನಷ್ಟವಾಗಿದೆ. ನಾನು ಅಲ್ಲಿಗೆ ಹೋಗಿ

ವಿಚಾರಣೆ ಮಾಡಿದಾಗ ಆ ರೈತ ಹೇಳಿದ ಸ್ವಾಮಿ, ನನಗೆ ಸರ್ಕಾರ 5 ಸಾವಿರ, 10 ಸಾವಿರ ರೂಪಾಯಿಗಳ ಪರಿಹಾರ ಕೊಡಬಹುದು. ಆದರೆ ಆ ಮೇವನ್ನು ನಾನು ಮತ್ತೆ ಎಲ್ಲಿಯಾದರೂ ಖರೀದಿ ಮಾಡುತ್ತೇನೆ ಎನ್ನುವ ಪರಿಸ್ಥಿತಿಯಲ್ಲಿ ಇಲ್ಲ ಎನ್ನುವ ಮಾತು ಹೇಳಿದ. ಆದ್ದರಿಂದ ಯಾವ ತಾಲ್ಲೂಕಿನಲ್ಲಿ ಮೇವಿನ ಕೊರತೆ ಇದೆ ಅಲ್ಲಿಗೆ ಮೇವನ್ನು ಸಾಗಿಸುವುದಕ್ಕೆ ಅಥವಾ ಮೇವನ್ನು ಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗಿತ್ತು, ಅದನ್ನು ಮಾಡಲಿಲ್ಲ. ಹೀಗಾಗಿ ಈ ತಾಲ್ಲೂಕಿನಲ್ಲಿ ಮೇವಿನ ಕೊರತೆಯಿಂದ ಜಾನುವಾರುಗಳಿಗೆ ತೊಂದರೆಯುಂಟಾಗಿದೆ ಮತ್ತು ಉತ್ತರ ಕರ್ನಾಟಕದ ಎಷ್ಟೋ ತಾಲ್ಲೂಕುಗಳಲ್ಲಿ ಇವತ್ತು ರೈತರು, ಕೃಷಿ ಕಾರ್ಮಿಕರು ತಮ್ಮ ಜಾನುವಾರುಗಳನ್ನು ಕರೆದುಕೊಂಡು ಬೇರೆ ಬೇರೆ ರಾಜ್ಯಗಳಿಗೆ ಗುಳೇ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಎಷ್ಟೋ ಕಡೆ ಜನ ಗುಳೇ ಹೋಗುತ್ತಿದ್ದಾರೆ. ಇದನ್ನು ಹತೋಟಿಗೆ ತರುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕಾಗಿತ್ತು. ಅದು ಸರ್ಕಾರದ ಕಡೆಯಿಂದ ಆಗುತ್ತಿಲ್ಲ. ಕೆಲವು ಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ನೋಡಿದರೆ ಮೈಸೂರು ಜಿಲ್ಲೆಯಲ್ಲಿ ರಣ ರಣ ಬಿಸಿಲು, ಕುಡಿಯುವ ನೀರಿನ ಹಾಹಾಕಾರ ಎನ್ನುವುದು ಪತ್ರಿಕೆಗಳಲ್ಲಿ ಬಂದಿದೆ. ಅದರಲ್ಲೂ ಕೆಲವು ತಾಲ್ಲೂಕುಗಳಲ್ಲಿ ಬಹಳ ಗಂಭೀರ ಪರಿಸ್ಥಿತಿ ಉಂಟಾಗಿದೆ. ಹೆಚ್.ಡಿಕೋಟೆ, ಟಿ.ನರಸೀಪುರ ಮತ್ತು ಮೈಸೂರು ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ, ನಂಜನಗೂಡು ತಾಲ್ಲೂಕಿನ ದೊಡ್ಡಕವಲಗುಂದೆ ಹೋಬಳಿ, ಹುಣಸೂರಿನ ಕೆಲವು ಆಯ್ದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಎದ್ದಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದೀರಿ? ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಹುಬ್ಬಳ್ಳಿ ಧಾರವಾಡದ ಬಗ್ಗೆ ನಾನು ಹೇಳುತ್ತಿದ್ದೇನೆ. ಆ ಬಗ್ಗೆ ಹೇಳತೀರದು. ಅದೊಂದು ದೊಡ್ಡ ಕಥೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಅತ್ಯಂತ ದೊಡ್ಡದಾದ ಮಹಾನಗರ ಅಂದರೆ ಹುಬ್ಬಳ್ಳಿ-ಧಾರವಾಡ ಮಹಾನಗರ. ಆದರೆ ಅಲ್ಲಿ ಪರಿಸ್ಥಿತಿ ಏನಾಗಿದೆ? ನಾನು 3-4 ಸಲ ಎಲ್ಲಾ ಪಕ್ಷದ ಮುಖಂಡರುಗಳನ್ನು ಕರೆದುಕೊಂಡು ಮಹಾಪೌರರನ್ನು ಕರೆದುಕೊಂಡು ಮುಖ್ಯಮಂತ್ರಿಗಳ ಬಳಿ ನಿಯೋಗ ಹೋಗಿದ್ದೆ ಈ ನೀರಿನ ಸಮಸ್ಯೆಯ ಸಲುವಾಗಿ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಇದು ಬಂದಿದೆ. ಧಾರವಾಡ ಜಿಲ್ಲೆಯಿಂದ ಬಂದಂತಹ ನಮ್ಮ ಮಂತ್ರಿ ಮಹನೀಯರು, ಶ್ರೀ ಹೆಚ್.ಕೆ.ಪಾಟೀಲರು, ಶ್ರೀ ಹಿಂಡಸಗೇರಿಯವರು ಅವರು ಮೊನ್ನೆ ವಿಜಿಟ್ ಮಾಡಿದ್ದಾರೆ. ಅಲ್ಲಿ ಇವತ್ತು ಪರಿಸ್ಥಿತಿ ಏನಾಗಿದೆ ಅಂದರೆ 15 ದಿವಸಗಳಿಗೆ ಒಮ್ಮೆ ನೀರು ಸಿಗುತ್ತಿದೆ. ಅಷ್ಟೊಂದು ಗಂಭೀರವಾದ ಪರಿಸ್ಥಿತಿ ಇದೆ. ಹುಬ್ಬಳ್ಳಿ-ಧಾರವಾಡದಲ್ಲಿ ಕಳೆದ 3-4 ತಿಂಗಳುಗಳಿಂದ 10 ದಿವಸಗಳಿಗೆ ಒಮ್ಮೆ 15 ದಿವಸಗಳಿಗೆ ಒಮ್ಮೆ ನೀರು ಸರಬರಾಜು ಆಗುತ್ತಿದೆ. ಇಲ್ಲಿಯೇ ಈ ಪರಿಸ್ಥಿತಿಯಾದರೆ ಇನ್ನು ಅಕ್ಕಪಕ್ಕದ ನಗರ ಪ್ರದೇಶಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಯಾವ ರೀತಿಯ ಪರಿಸ್ಥಿತಿ ಉಂಟಾಗಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ ಮತ್ತು ಇವತ್ತು ಮಾನ್ಯ ಮಂತ್ರಿಗಳಾದ ಹೆಚ್.ಕೆ.ಪಾಟೀಲರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಮಾರ್ಚಿ 30ರಿಂದ 5 ದಿವಸಗಳಿಗೆ ಒಂದು ಸಲ ನೀರು ಕೊಡುತ್ತೇವೆಂದು. ಅಂದರೆ 15 ದಿವಸಗಳಿಗೆ ಒಂದು ಸಲ ಬರುತ್ತಿದ್ದ

ನೀರು 5 ದಿವಸಗಳಿಗೆ ಒಂದು ಸಲ ಬರುತ್ತದೆ. ಆದರೆ ಅವರ ಸ್ಟೇಟ್‌ಮೆಂಟ್ ನೋಡಿದರೆ ಈ ಕೆಲಸ ಆಗುವುದಿಲ್ಲ. ಏಕೆಂದರೆ ಹಣದ ಒಂದು ವ್ಯವಸ್ಥೆಯನ್ನೂ ಸಹ ತಾವು ಮಾಡಿಕೊಡಬೇಕಾಗುತ್ತದೆ. ಅಲ್ಲಿ ಮತ್ತೊಂದು ರಾಜಕೀಯ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನೂ ಸಹ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಅಲ್ಲಿನ ರಾಜಕೀಯ ಒಳಗುಂಪಿನಿಂದ, ಮಂತ್ರಿಗಳ ಗುಂಪು ಒಂದು, ಶಾಸಕರ ಗುಂಪು ಒಂದು, ಇದರಲ್ಲಿ ಮಹಾಪೌರರು ಮತ್ತು ಇಡೀ ಜನ ಸಿಲುಕಿಕೊಂಡಿದ್ದಾರೆ. ರಾಜ್ಯ ಸರ್ಕಾರದಿಂದ ಅಲ್ಲಿಗೆ ಏನು ನೆರವು ಸಿಗಬೇಕಾಗಿತ್ತೋ ತಕ್ಷಣವೇ ಅದು ಸಿಗುತ್ತಿಲ್ಲ. ನಾನು ಗಂಭೀರವಾಗಿ ಆರೋಪ ಮಾಡುತ್ತಿದ್ದೇನೆ. ಹುಬ್ಬಳ್ಳಿ ಧಾರವಾಡ ಮಹಾ ಜನತೆಗೆ ಇದು ಗೊತ್ತಿದೆ. ಆಡಳಿತ ಪಕ್ಷದ ಎರಡು ಒಳ ಗುಂಪುಗಳಿಂದ, ಅವರಲ್ಲಿ ನಡೆಯುವಂತಹ ಹಣಾಹಣಿಯಿಂದ ಮಹಾನಗರದ ಜನತೆ ನೀರಿಗಾಗಿ ಪರಿತಪಿಸುತ್ತಿದ್ದಾರೆ. 44 ಕೋಟಿ ರೂಪಾಯಿಗಳ ಹುಡ್ಕೋ ಲೋನ್ ಕೊಟ್ಟರು. ಅದಕ್ಕೆ ರಾಜ್ಯ ಸರ್ಕಾರ 29 ಕೋಟಿ ರೂಪಾಯಿಗಳ ಗ್ಯಾರಂಟಿ ಕೊಡಬೇಕಾಗಿತ್ತು. ಆ ಗ್ಯಾರೆಂಟಿ ಪಡೆದುಕೊಳ್ಳುವುದಕ್ಕೆ 2-3 ತಿಂಗಳ ಗುದ್ದಾಟ ನಡೆದಿದೆ. ಸರ್ಕಾರದವರು ಅವಕ್ಕೆ ಗ್ಯಾರೆಂಟಿ ಕೊಡಲಿಲ್ಲ. ಇದಕ್ಕೆ ಸಂಬಂಧಪಟ್ಟ ಪ್ರಸ್ತಾವನೆ ಆರ್ಥಿಕ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗಳಿಗೆ ಹೋದರೂ ಕೂಡ ಸರ್ಕಾರದವರು ಗ್ಯಾರಂಟಿ ಕೊಡಲಿಲ್ಲ. ಇತ್ತೀಚೆಗೆ ಗ್ಯಾರೆಂಟಿ ನೀಡಲಾಗಿದೆ ಎಂದು ಮಾನ್ಯ ಹಿಂಡಸಗೇರಿಯವರು ಹೇಳಿದ್ದಾರೆ. ಆದರೆ ನನಗೆ ಬಂದಿರುವ ಮಾಹಿತಿಗಳ ಪ್ರಕಾರ ಇದುವರೆಗೂ ಕೂಡ ಹುಡ್ಕೋದಿಂದ ಪಡೆಯಲಾಗುವ ಲೋನ್‌ಗೆ ರಾಜ್ಯ ಸರ್ಕಾರದವರು ಯಾವುದೇ ಗ್ಯಾರೆಂಟಿಯನ್ನು ನೀಡಿರುವುದಿಲ್ಲ. ಎಲ್. ಅಂಡ್ ಟಿ.ಯವರು ಈಗಾಗಲೇ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಮಲಪ್ರಭಾ ನದಿಯಿಂದ ಹುಬ್ಬಳ್ಳಿ-ಧಾರವಾಡ ನಗರಕ್ಕೆ 26 ಕಿ.ಮೀ. ದೂರದಿಂದ ನೀರು ಬರುತ್ತದೆ. ಅಲ್ಲಿ ಹಿಂದೆ ಹಾಕಿದಂತಹ ಪೈಪುಗಳಿಂದ ನೀರು ಸೋರಿ ಹೋಗುತ್ತಿದೆ. ಸವದತ್ತಿಯಿಂದ ಧಾರವಾಡಕ್ಕೆ ಬರುವಷ್ಟರಲ್ಲಿ 3 ಎಂಜಿಡಿಯಷ್ಟು ನೀರು ಸೋರಿ ಹೋಗುತ್ತಿದೆ. ಇದರಿಂದಾಗಿಯೇ ಈ ವಿಷಯದ ಗಂಭೀರತೆಯನ್ನು ತಾವು ಅರ್ಥ ಮಾಡಿಕೊಳ್ಳಬಹುದಾಗಿದೆ. ಈ ರೀತಿ 3. ಎಂಜಿಡಿಯಷ್ಟು ನೀರು ಸೋರುವುದನ್ನು ತಡೆಗಟ್ಟಿದರೆ ಅದರಿಂದ ದಿನಕ್ಕೊಮ್ಮೆ ನೀರು ಪೂರೈಸುವುದು ಸಾಧ್ಯವಾಗಬಹುದು. ಆ ಕೆಲಸ ಇವತ್ತು ಆಗಿಲ್ಲ. ಈಗ 44 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪೈಪ್‌ಗಳ ರೀ-ಪ್ಲೇಸ್‌ಮೆಂಟ್ ಕೆಲಸ ನಡೆಯುತ್ತಿದೆ. ಹುಡ್ಕೋದಿಂದ ಪಡೆಯಲಾಗುವ ಈ ಲೋನ್‌ಗೆ ಸರ್ಕಾರದ ಗ್ಯಾರಂಟಿ ಇಲ್ಲ. ಸರ್ಕಾರ ಸರಿಯಾದ ಸಮಯದಲ್ಲಿ ಸ್ಪಂದಿಸಿ ಹಣವನ್ನು ಒದಗಿಸಿದ್ದರೆ, ಗ್ಯಾರೆಂಟಿ ನೀಡಿದ್ದರೆ ಎಲ್ ಅಂಡ್ ಟಿ ಯವರು ಕಳೆದ ವರ್ಷ ಡಿಸೆಂಬರ್ ಅಥವಾ ಈ ವರ್ಷದ ಜನವರಿ ತಿಂಗಳೊಳಗಾಗಿ ಎಲ್ಲಾ ಕೆಲಸವನ್ನೂ ಸಂಪೂರ್ಣವಾಗಿ ಮಾಡಿ ಮುಗಿಸುತ್ತಿದ್ದರು. ಇವತ್ತಿನ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಆಗ ಉದ್ಭವಿಸುತ್ತಲೇ ಇರಲಿಲ್ಲ. ಸರ್ಕಾರದ ನಿರ್ಲಕ್ಷ್ಯತನದಿಂದ, ತಪ್ಪು ಧೋರಣೆಯಿಂದ, ಅಲ್ಲಿರುವಂತಹ ಗುಂಪುಗಾರಿಕೆಯಿಂದ ಹುಬ್ಬಳ್ಳಿ-ಧಾರವಾಡದ ಜನತೆ ಇಂದು ನೀರಿಗಾಗಿ ಹಾಹಾಕಾರದಿಂದ ಪರಿತಪಿಸುವಂತಾಗಿದೆ 15 ದಿನಕ್ಕೊಮ್ಮೆ ನೀರು ಪೂರೈಸುವಂತಹ ಪರಿಸ್ಥಿತಿ

ಈಗ ನಿರ್ಮಾಣವಾಗಿದೆ. ಎಲ್ಲಿಯೂ ನಾನು ಕೇಳದಂತಹ ಪರಿಸ್ಥಿತಿ ಇವತ್ತು ಅಲ್ಲಿ ನಿರ್ಮಾಣವಾಗಿದೆ. ಇಲ್ಲಿನ ಸಮಸ್ಯೆ ಬಗ್ಗೆ ಹಲವಾರು ಬಾರಿ ಸರ್ಕಾರದ ಗಮನವನ್ನು ಸೆಳೆಯಲಾಗಿದೆ. ಹುಬ್ಬಳ್ಳಿ-ಧಾರವಾಡ ನಗರದಲ್ಲಿ ನೀರನ್ನು ಸಂಗ್ರಹಿಸುವ ಕೆಲಸವನ್ನು ಮಂಡಳಿ ಮಾಡಿದರೆ, ಅದನ್ನು ಡಿಸ್ಟ್ರಿಬ್ಯೂಷನ್ ಮಾಡುವ ಕೆಲಸವನ್ನು ಕಾರ್ಪೊರೇಷನ್ ಮಾಡುತ್ತಿದೆ. ಎರಡು ಬೇರೆ ಬೇರೆ ಏಜೆನ್ಸಿಗಳು ಇಲ್ಲಿ ಕೆಲಸ ನಿರ್ವಹಿಸುತ್ತಿವೆ. ಇಲ್ಲಿ ಒಂದೇ ಏಜೆನ್ಸಿ ಕಾರ್ಯ ನಿರ್ವಹಿಸುವಂತೆ ಮಾಡಿ ಎಂದು ಸಾಕಷ್ಟು ಬಾರಿ ಸರ್ಕಾರವನ್ನು ಒತ್ತಾಯಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಅಲ್ಲಿಯ ಕಾರ್ಪೊರೇಷನ್‌ನಲ್ಲಿ ರೆಸಲ್ಯೂಷನ್ ಒಂದನ್ನೂ ಸಹಾ ಅಂಗೀಕರಿಸಲಾಗಿದೆ. ಬೆಂಗಳೂರು ನಗರದಲ್ಲಿ ಇರುವಂತೆ ನೀರು ಸಂಗ್ರಹ ಮತ್ತು ಪೂರೈಕೆ ಎರಡನ್ನೂ ಒಂದೇ ಏಜೆನ್ಸಿ ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಮಾಡುವಂತೆ ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಹಲವಾರು ಮನವಿಗಳನ್ನು ಸಲ್ಲಿಸಲಾಗಿದೆ. ಇದರ ಜೊತೆಗೆ ಈ ದಿಸೆಯಲ್ಲಿ ಲೇಟೆಸ್ಟ್ ಆಗಿ ಅಲ್ಲಿಯ ಕಾರ್ಪೊರೇಷನ್ ಸಹ ರೆಸಲ್ಯೂಷನ್ ಒಂದನ್ನು ಅಂಗೀಕರಿಸಿ ಸರ್ಕಾರಕ್ಕೆ ಕಳುಹಿಸಿದೆ. ಆದರೂ ಕೂಡ ಸರ್ಕಾರ ಇದಕ್ಕೆ ಸ್ಪಂದಿಸುತ್ತಿಲ್ಲ. ಹೀಗಾಗಿ ಈ ಅವಳಿ ನಗರದ ನೀರಿನ ಸಮಸ್ಯೆಗೆ ಪರಿಹಾರ ದೊರಕಿಲ್ಲ. ಕಾಳಿ ನದಿಯಿಂದ ಅಥವಾ ಘಟಪ್ರಭಾ ನದಿಯಿಂದ ಅಥವಾ ಆಲಮಟ್ಟಿಯಿಂದ ನೀರು ಪೂರೈಕೆ ಮಾಡುವ ಬಗ್ಗೆ ವಿಚಾರ ಮಾಡಿ ಎಂದು ನಾವು ಪರ್ಯಾಯ ಸಲಹೆಗಳನ್ನು ನೀಡಿದರೂ ಸಹ ಅದರ ಬಗ್ಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಮಾನ್ಯ ಚಿಮ್ಮನಕಟ್ಟಿಯವರಿಗೆ ಈ ವಿಚಾರಗಳೂ ಸಹ ತಿಳಿದಿವೆ. ಆದರೂ ಸರ್ಕಾರ ಇಲ್ಲಿಯ ಸಮಸ್ಯೆಗೆ ಏಕೆ ಸ್ಪಂದಿಸುತ್ತಿಲ್ಲ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಒಮ್ಮೆ ಅಲ್ಲಿಗೆ ವಿಸಿಟ್ ಮಾಡಿ ರಿವ್ಯೂ ಮಾಡಿ. ಒಬ್ಬ ಮಂತ್ರಿಗಳೂ ಸಹ ಅಲ್ಲಿಗೆ ಬಂದಿಲ್ಲ. ಹುಬ್ಬಳ್ಳಿ-ಧಾರವಾಡ ನಗರದ ವೋಟರ್ಸ್‌ಗಳಿಂದ ಆರಿಸಿ ಬಂದಿರುವಂತಹ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಕೇವಲ ಎರಡು ದಿವಸಗಳ ಹಿಂದೆ ಅಲ್ಲಿಗೆ ವಿಸಿಟ್ ಮಾಡಿದ್ದಾರೆ. ಕಳೆದ ಮೂರು ತಿಂಗಳುಗಳಿಂದ ಪರಿಸ್ಥಿತಿ ಗಂಭೀರವಾಗಿದ್ದರೂ ಸಹಾ ಮಾನ್ಯ ಹೆಚ್.ಕೆ.ಪಾಟೀಲರಿಗೆ ಇಲ್ಲಿಯವರೆಗೂ ವಿಸಿಟ್ ಮಾಡಲು ಏಕೆ ಸಾಧ್ಯವಾಗಲಿಲ್ಲ? ಮಾನ್ಯ ಹಿಂಡಸಗೇರಿಯವರು ಏಕೆ ಇದರ ಬಗ್ಗೆ ಇಲ್ಲಿಯವರೆಗೆ ನಿರ್ಲಕ್ಷ್ಯತನ ತೋರಿಸಿದ್ದಾರೆ? ಮಾನ್ಯ ಚಿಮ್ಮನಕಟ್ಟಿಯವರು ಇದರ ಬಗ್ಗೆ ರಿವ್ಯೂ ಮಾಡಲು ಇಲ್ಲಿಗೆ ಬರಬೇಕಾಗಿತ್ತು. ಯಾರೂ ಕೂಡ ಇಲ್ಲಿಗೆ ಬಂದಿಲ್ಲ ಮತ್ತು ಬರುತ್ತಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಹುಬ್ಬಳ್ಳಿ-ಧಾರವಾಡದ ಜನತೆ ದಂಗೆ ಏಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ದೊಡ್ಡ ನಗರದ ಪರಿಸ್ಥಿತಿಯೇ ಹೀಗಾದರೆ ಇನ್ನು ರಾಜ್ಯದ ಉಳಿದ ಪ್ರದೇಶಗಳಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎನ್ನುವುದರ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ಸರ್ಕಾರದವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂಬ ಬಗ್ಗೆ ಆಯಾ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸಿದ್ದಾರೆ. ಅವರು ಕೆಲವೊಂದು ಪ್ರಪೋಸಲ್‌ಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರೆ

ಅದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಒಂದು ವಿಷಯವನ್ನು ನಾನು ಇಲ್ಲಿ ಸದನದ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಕಂದಾಯ ಸಚಿವರಾದ ಶ್ರೀಕಂಠಯ್ಯನವರು 'ಬರದ ಪರಿಸ್ಥಿತಿ ಈಗ ರಾಜ್ಯದಲ್ಲಿ ಇಲ್ಲ' ಎಂದು ಹೇಳಿಕೆ ನೀಡಿರುವುದು ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಇದಲ್ಲದೇ 2-3 ತಿಂಗಳ ಹಿಂದೆ 'ಬರ ಪರಿಹಾರ ಕಾರ್ಯವಿಲ್ಲ' ಎಂದು ಮಾನ್ಯ ಶ್ರೀಕಂಠಯ್ಯನವರು ಪತ್ರಿಕೆಗೆ ನೀಡಿದ ಮತ್ತೊಂದು ಹೇಳಿಕೆಯನ್ನೂ ಸಹ ನಾನು ನೋಡಿದ್ದೇನೆ. ಮಾನ್ಯ ಶ್ರೀಕಂಠಯ್ಯನವರು ತಮ್ಮ ಹೇಳಿಕೆಯಲ್ಲಿ 'ಇತ್ತೀಚೆ ಬಿದ್ದ ಭಾರೀ ಮಳೆಯಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಅಭಾವ ನೀಗಿದ್ದು ತಕ್ಷಣದಿಂದಲೇ ಬರ ಪರಿಹಾರ ಕಾರ್ಯ ನಿಲ್ಲಿಸಲಾಗಿದೆ. ಬರ ಪರಿಹಾರಕ್ಕಾಗಿ ಇಟ್ಟಿರುವ ಹಣವನ್ನು ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ಬಳಸಲು ಸರ್ಕಾರ ನಿರ್ಧರಿಸಿದೆ' ಎಂದು ಹೇಳಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳೇ ಈ ರೀತಿಯ ಸ್ಟೇಟ್‌ಮೆಂಟ್ ಕೊಟ್ಟರೆ ಕಂದಾಯಾಧಿಕಾರಿಗಳು ಮತ್ತು ಜಿಲ್ಲಾಧಿ ಕಾರಿಗಳು ಏನು ಮಾಡಲು ಸಾಧ್ಯವಿದೆ? ಮಾನ್ಯ ಸಚಿವರು ತಮ್ಮ ಸ್ಟೇಟ್‌ಮೆಂಟ್ ಅನುಸಾರವಾಗಿ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಚನೆಗಳನ್ನೂ ಸಹ ನೀಡಿರಬಹುದು. ಎಲ್ಲಾ ಜಿಲ್ಲೆಗಳಲ್ಲಿ ಬರಗಾಲದ ಕಾಮಗಾರಿಗಳು ನಿಂತಿವೆ. ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಅರ್ಧಂಬರ್ಧವಾದಂತಹ ಕೆಲಸಗಳೂ ಸಹ ನಿಂತಿವೆ. ಇವತ್ತಿಗೂ ಕೂಡ ಹಲವಾರು ತಾಲ್ಲೂಕುಗಳು ಮತ್ತು ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಮತ್ತು ಬರಗಾಲ ಪರಿಸ್ಥಿತಿ ಇರುವುದನ್ನು ನನ್ನೊಡನೆ ಬಂದರೆ ನಾನು ತಮಗೆ ತೋರಿಸುತ್ತೇನೆ. ಮಾನ್ಯ ಶ್ರೀಕಂಠಯ್ಯನವರು ಮುಂದುವರೆದು ತಮ್ಮ ಹೇಳಿಕೆಯಲ್ಲಿ 'ಬರ ಪರಿಹಾರಕ್ಕಾಗಿ ಬಿಡುಗಡೆ ಮಾಡಿದ 96 ಕೋಟಿ ರೂಪಾಯಿಗಳ ಪೈಕಿ 44 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. ಇದಕ್ಕೆ ಕಾರಣ ಕೂಲಿ-ಕಾಳು ಯೋಜನೆ ಅಡಿ ಕೆಲಸ ಮಾಡಿದವರಿಗೆ ಅರ್ಧ ಹಣ ಮತ್ತು ಉಳಿದ ಭಾಗವನ್ನು ಆಹಾರ ಧಾನ್ಯದ ರೂಪದಲ್ಲಿ ನೀಡಲಾಗುತ್ತಿತ್ತು. ಹಾಗಾಗಿ ಹಣ ಖರ್ಚಾಗಿಲ್ಲ. ಕೆಲಸ ಮಾಡಿದವರಿಗೆ 12 ಕೋಟಿ ರೂಪಾಯಿಗಳ ಬಿಲ್ ಪಾವತಿ ಮಾಡಬೇಕಾಗಿದೆ. ಬರ ಪರಿಹಾರ ಕಾರ್ಯಕ್ಕೆ ಬಳಕೆಯಾಗದೇ ಉಳಿದಿರುವ ಹಣವನ್ನು ರಸ್ತೆ ಅಭಿವೃದ್ಧಿಗೆ ಬಳಸಲು ತೀರ್ಮಾನಿಸಲಾಗಿದೆ' ಎಂದು ತಿಳಿಸಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಎಲ್ಲೋ ಒಂದೆರಡು ಕಡೆ ಮಳೆಯಾಯಿತು ಎಂಬ ಕಾರಣ ನೀಡಿ ಬರಗಾಲ ಪರಿಹಾರ ಕಾಮಗಾರಿಗಳನ್ನು ನಿಲ್ಲಿಸಿ, ಅದಕ್ಕಾಗಿ ಖರ್ಚು ಮಾಡಬೇಕಾಗಿದ್ದ ಹಣವನ್ನು ರಸ್ತೆ ಕಾಮಗಾರಿ ಸಲುವಾಗಿ ಉಪಯೋಗ ಮಾಡುತ್ತೇನೆಂದು ಹೇಳಿದರೆ, ಇದರಿಂದ ಏನು ಅರ್ಥವಾಗುತ್ತದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಬರ ಪರಿಹಾರ ಕಾಮಗಾರಿಗಳಿಗಾಗಿ ಅಗತ್ಯ ಇರುವಷ್ಟು ಹಣ ನಮ್ಮಲ್ಲಿಲ್ಲ ಎಂದು ಹೇಳುತ್ತಿದ್ದ ಸರ್ಕಾರ ಆ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದಂತಹ 96 ಕೋಟಿ ರೂಪಾಯಿಗಳನ್ನು ಪೂರ್ತಿಯಾಗಿ ಖರ್ಚು ಮಾಡಲು ಬಿಡಲೇ ಇಲ್ಲ. ಹೀಗಾದರೆ ಬರಗಾಲ ಕಾಮಗಾರಿಗಳು ಹೇಗೆ ನಡೆಯಬೇಕು? ಜನರಿಗೆ ಯಾವ ರೀತಿ ಅನುಕೂಲವಾಗಬೇಕು? ಕುಡಿಯುವ ನೀರಿನ ವ್ಯವಸ್ಥೆ ಹೇಗೆ ಸುಧಾರಣೆಯಾಗಬೇಕು? ಈ ದಿಸೆಯಲ್ಲಿ ಸರ್ಕಾರ ಬಹಳ ತಪ್ಪು ಮಾಡುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ

ಹೇಳಬಯಸುತ್ತೇನೆ. ಬರದಿಂದಾಗಿ ಹಿಂಗಾರು ಮತ್ತು ಮುಂಗಾರು ಬೆಳೆಗಳು ಕೈಗೆಟುಕದೇ ಇವತ್ತು ಸುಮಾರು 2,000 ಕೋಟಿ ರೂಪಾಯಿಗಳಷ್ಟು ಬೆಳೆ ನಾಶವಾಗಿದೆ. ಜಿಲ್ಲಾಧಿಕಾರಿಗಳು ಕೊಡುವ ವರದಿಗೆ ಸರ್ಕಾರ ಯಾವ ರೀತಿ ಸ್ಪಂದಿಸುತ್ತದೆ. ಎಂಬ ಬಗ್ಗೆ ನಾನು ಇಲ್ಲಿ ಉದಾಹರಣೆಯೊಂದನ್ನು ಕೊಡಬಯಸುತ್ತೇನೆ. ಧಾರವಾಡ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಫೆಬ್ರವರಿ 8ರಂದು ಪತ್ರ ಬರೆದು 'ಪ್ರಸ್ತುತ ಪರಿಸ್ಥಿತಿ ಸಮೀಕ್ಷೆ ಮಾಡಲಾಗಿ, ಪೂರ್ಣ ಜಿಲ್ಲೆ ಪುನಃ ಬರಗಾಲದ ಛಾಯೆಗೆ ಸಿಲುಕಿದ್ದನ್ನು ಗಮನಿಸಿ ಈಗ ಹಿಂಗಾರು ಋತುವಿಗೆ ಬರಗಾಲ ಪ್ರದೇಶದಿಂದ ಕೈ ಬಿಟ್ಟಿದ್ದ ನವಲಗುಂದ ಮತ್ತು ಕಲಘಟಗಿ ತಾಲ್ಲೂಕುಗಳನ್ನೂ ಸಹ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಸರ್ಕಾರಕ್ಕೆ ಈಗಾಗಲೇ ವಿವರವಾದ ವರದಿಯೊಂದಿಗೆ ವಿನಂತಿಸಿದ್ದೇನೆ' ಎಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯನ್ನು ನಾನು ಇಲ್ಲಿ ಉದಾಹರಿಸಿ ಮಾತನಾಡುತ್ತಿದ್ದೇನೆ. ನವಲಗುಂದ ಮತ್ತು ಕಲಘಟಗಿ ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶ ಎಂದು ಮೊದಲು ಡಿಕ್ಲೇರ್ ಮಾಡಿ ನಂತರ ಕೈಬಿಡಲಾಗಿತ್ತು. ಧಾರವಾಡದ ಜಿಲ್ಲಾಧಿಕಾರಿಗಳು ಅಲ್ಲಿಯ ಪರಿಸ್ಥಿತಿಯನ್ನು ಮತ್ತೊಮ್ಮೆ ಅವಲೋಕಿಸಿ ಆವೆರಡೂ ತಾಲ್ಲೂಕುಗಳನ್ನು ಪುನಃ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಫೆಬ್ರವರಿ ತಿಂಗಳು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಕಂದಾಯ ಇಲಾಖೆಯನ್ನು ಕೋರಿದ್ದಾರೆ. ಸರ್ಕಾರ ಇದುವರೆಗೂ ಆ ರೀತಿ ಘೋಷಣೆಯನ್ನು ಮಾಡಿಲ್ಲ. ಸರ್ಕಾರಕ್ಕೆ ಈ ಬಗ್ಗೆ ಸ್ಪಂದಿಸಲು ಏಕೆ ಸಾಧ್ಯವಾಗಿಲ್ಲ ಎನ್ನುವಂತಹ ಪ್ರಶ್ನೆ ಇಲ್ಲಿ ಬರುತ್ತದೆ. ಉದಾಹರಣೆಯೊಂದನ್ನು ನೀಡುವುದಾದರೆ, ಧಾರವಾಡ ತಾಲ್ಲೂಕಿನ ಉಪ್ಪಿನಬೆಟಗೇರಿ ಎಂಬಲ್ಲಿ ಸುಮಾರು 5 ಕಿ.ಮೀ. ದೂರದಿಂದ ಜನರು ನೀರನ್ನು ತರುತ್ತಿದ್ದಾರೆ. ಅಲ್ಲಿಯ ಮಹಿಳಾ ಜಿಲ್ಲಾ ಪಂಚಾಯತ್ ಸದಸ್ಯರನ್ನು ಜನರು ಮೊನ್ನೆ ಘೇರಾವ್ ಮಾಡಿದ್ದರು. ಅವರು ಅಲ್ಲಿ ಇದ್ದ ಅಧಿಕಾರಿಗಳ ಹತ್ತಿರ ಹೋಗಿ ಒಂದು ಬೋರ್‌ವೆಲ್ ಹಾಕಿ ಅದಕ್ಕೆ ಒಂದು ಎಲೆಕ್ಟ್ರಿಕಲ್ ಪಂಪ್‌ಸೆಟ್ ಹಾಕಿ ಎಂದು ಹೇಳಿದರೆ, ರೂಲ್ಸ್, ರೆಗ್ಯುಲೇಷನ್ಸ್ ಹೇಳಿ, ಇದು ನಮ್ಮ ಕಡೆಯಿಂದ ಆಗುವುದಿಲ್ಲವೆಂದು ಹೇಳಿದರು. ಕುಡಿಯುವ ನೀರಿನ ಯೋಜನೆಗೆ ನಾವು ಪ್ರೈಯಾರಿಟಿ ಕೊಡಬೇಕಾಗುತ್ತದೆ. ಯಾವುದೇ ನಿಯಮಗಳು ಇರಲಿ ಅದನ್ನು ಮೀರಿ ಕೆಲಸ ಮಾಡಬೇಕಾಗುತ್ತದೆ. ಒಬ್ಬ ಮಹಿಳಾ ಪ್ರತಿನಿಧಿ ಹೋಗಿ ಅಧಿಕಾರಿಗಳಿಗೆ ಕೇಳಿದರೆ ನಿಯಮಾವಳಿಗಳನ್ನು ಹೇಳುತ್ತಾರೆ. ಆ ಗ್ರಾಮದ ಜನ ಎಲ್ಲಿಗೆ ಹೋಗಬೇಕು? ಕುಡಿಯುವ ನೀರಿನ ಸಮಸ್ಯೆ ಗಂಭೀರವಾದಾಗ ಜನ ಪ್ರತಿನಿಧಿಗಳಿಗೆ ಘೇರಾವು ಮಾಡುವ ಕೆಲಸ ಪ್ರಾರಂಭವಾಗುತ್ತದೆ. ಎಲ್ಲ ತಾಲ್ಲೂಕುಗಳಲ್ಲಿ ಈ ಪರಿಸ್ಥಿತಿ ಇದೆ. ಧಾರವಾಡ ಜಿಲ್ಲಾಧಿಕಾರಿಗಳು ಹೇಳಿದ ಮತ್ತೊಂದು ಮಾತನ್ನು ಹೇಳುತ್ತಿದ್ದೇನೆ. ಮಳೆ ಬಾರದೆ ಬೆಳೆ ಹಾನಿಯಾದರೆ ಪರಿಹಾರ ನೀಡಲು ಮಾರ್ಗಸೂಚಿಗಳಲ್ಲಿ ಅವಕಾಶವಿರುವುದಿಲ್ಲ. ಆದರೆ ಬೆಳೆ ಆಣೆವಾರಿ ಶೇಕಡ 25ರ ಒಳಗೆ ಬಂದರೆ ಪೂರ್ಣ ಭೂ ಕಂದಾಯ ಮನ್ನಾ ಮಾಡಲು, ಸಾಲ ಪರಿವರ್ತನೆ ಹಾಗೂ ಬೆಳೆ ವಿಮಾ ಕಂತುದಾರರಿಗೆ ಬೆಳೆ ವಿಮೆ ಪರಿಹಾರ ಸೌಲಭ್ಯ ದೊರಕುತ್ತದೆ. ಪ್ರಸ್ತುತ ವರ್ಷ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿದೆ. ಇದು ಬಹಳ ಮಹತ್ವವಾದುದು. ಮಾನ್ಯ ಕಂದಾಯ ಸಚಿವರು

ಹಾಗೂ ಮಾನ್ಯ ಕೃಷಿ ಸಚಿವರು ಗಮನ ಹರಿಸಬೇಕು. ಪ್ರಸ್ತುತ ವರ್ಷ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಮುಂಗಾರು ಬೆಳೆ ಆಣೆವಾರಿ ಶೇಕಡ 25ರೊಳಗೆ ಬಂದಿದ್ದು, ಭೂ ಕಂದಾಯವನ್ನು ಪೂರ್ಣ ಮನ್ನಾ ಮಾಡಲಾಗಿದೆ. ಆದರೆ ಮುಂದೆ ಇದರ ಪ್ರಕಾರ ಸಾಲ ಪರಿವರ್ತನೆ ಮುಂತಾದ ಸೌಲಭ್ಯಗಳನ್ನು ಒದಗಿಸಲು ಆಣೆವಾರಿ ಪ್ರತಿಗಳನ್ನು ಸಲ್ಲಿಸಿದವರಿಗೆ ಕಳುಹಿಸಿ ಶೀಘ್ರ ಕ್ರಮವನ್ನು ಜರುಗಿಸುವಂತೆ ತಿಳಿಸಿದೆ. ಬೆಳೆ ವಿಮಾ ಪರಿಹಾರವನ್ನು ತೀವ್ರ ಇತ್ಯರ್ಥಪಡಿಸುವಂತೆ ಜಿಐಸಿ ಆಫ್ ಇಂಡಿಯಾ ಮತ್ತು ಸರ್ಕಾರಕ್ಕೆ ಈಗಾಗಲೇ ಕೃಷಿ ಇಲಾಖೆ ಮುಖಾಂತರ ವಿನಂತಿಸಲಾಗಿದೆ. ಈ ರೀತಿ ಪರಿಸ್ಥಿತಿ ಇರುವಾಗ ನಾವು ಸಾಲದ ಮೇಲೆ ಬಡ್ಡಿ ಮನ್ನಾ ಕೇಳಿದ್ದೇವೆ. ಹಿಂದಿನ ಎರಡು ಅಧಿವೇಶನಗಳಲ್ಲಿ ಇದರ ಬಗ್ಗೆ ಸಾಕಷ್ಟು ಒತ್ತಡವನ್ನು ಸರ್ಕಾರದ ಮೇಲೆ ತಂದರೂ ಈ ಬಡ್ಡಿ ಮನ್ನಾ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು.

ಉಪಾಧ್ಯಕ್ಷರು: ಈಗ ಸದನವನ್ನು 2.30ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ೧.೩.೨ಕ್ಕೆ ಮುಂದೂಡಲ್ಪಟ್ಟು ಪುನಃ ೨.೩೦ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಸದನವು ಮಧ್ಯಾಹ್ನ ೩.೦೦ಕ್ಕೆ ಸಮಾವೇಶಗೊಂಡಿತು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

ವಿಷಯ: ರಾಜ್ಯದಲ್ಲಿರುವ ಬರ ಪರಿಸ್ಥಿತಿ ಹಾಗೂ ಕುಡಿಯುವ ನೀರಿನ ಸಮಸ್ಯೆ ಬಗ್ಗೆ. (ಮುಂದುವರಿದ ಚರ್ಚೆ)

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಆಗಲೇ ನಾನು ಜಿಲ್ಲಾಧಿಕಾರಿಗಳ ವರದಿಯನ್ನು ಉಲ್ಲೇಖ ಮಾಡುತ್ತಿದ್ದೆ. ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಕಳುಹಿಸಿರುವಂಥ ವರದಿಯಲ್ಲಿ ಬಹಳ ಮಹತ್ವವಾಗಿರತಕ್ಕಂಥ ಒಂದು ವಿಷಯವಿದೆ. 'ಬೆಳೆ ಆಣೇವಾರಿ ಶೇಕಡ ಇಪ್ಪತ್ತೈದರೊಳಗೆ ಬಂದರೆ, ಪೂರ್ಣ ಭೂ ಕಂದಾಯ ಮನ್ನಾ ಮಾಡಲು ಮತ್ತು ಸಾಲ ಪರಿವರ್ತನೆ ಹಾಗೂ ಬೆಳೆ ವಿಮಾ ಚಂದಾದಾರರಿಗೆ ಬೆಳೆ ವಿಮೆ ಪರಿಹಾರ ಸೌಲಭ್ಯ ದೊರೆಯುತ್ತದೆ. ಪ್ರಸ್ತುತ ವರ್ಷ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಮುಂಗಾರು ಬೆಳೆ ಆಣೇವಾರಿ ಶೇಕಡ ಇಪ್ಪತ್ತೈದರೊಳಗೆ ಬಂದಿದ್ದು ಭೂ ಕಂದಾಯವನ್ನು ಪೂರ್ಣ ಮನ್ನಾ ಮಾಡಲಾಗಿದೆ. ಇದರ ಪ್ರಕಾರ ಸಾಲ ಪರಿವರ್ತನೆ ಮುಂತಾದ ಸೌಲಭ್ಯ ಒದಗಿಸಲು ಆಣೇವಾರಿ ಪ್ರತಿಗಳನ್ನು ಸಂಬಂಧಿಸಿದವರಿಗೆ ಕಳುಹಿಸಿ ತೀವ್ರ ಕ್ರಮ ಜರುಗಿಸುವಂತೆ ತಿಳಿಸಿದೆ' ಇದು ಜಿಲ್ಲಾಧಿಕಾರಿಗಳು ಕೊಟ್ಟಂಥ ವರದಿ. ಅಂದರೆ ಬೆಳೆ ಆಣೇವಾರಿ ಶೇಕಡ ಇಪ್ಪತ್ತೈದರೊಳಗೆ ಬಂದರೆ ಇದು ಬೆಳೆ ವಿಮೆಗೂ ಅನ್ವಯವಾಗುತ್ತದೆ. ಹಾಗೂ ಪೂರ್ಣ

ಕಂದಾಯ ಮನ್ನಾ ಮಾಡಲೂ ಅನ್ವಯವಾಗುತ್ತದೆ ಮತ್ತು ಬಹು ಮುಖ್ಯವಾಗಿ, ಸಾಲದ ಅವಧಿಯನ್ನು ಪರಿವರ್ತನೆ ಮಾಡಲು ನಿಯಮದ ಅಡಿಯಲ್ಲಿ ಬರಲು ಸಾಧ್ಯವಾಗುತ್ತದೆ. ಡಿ.ಸಿ.ಯವರು ಅದನ್ನು ತಿಳಿಸಿದ್ದಾರೆ. ಇದು ಧಾರವಾಡ ಜಿಲ್ಲೆಯಲ್ಲಷ್ಟೇ ಅಲ್ಲ, ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲೂ ಈ ರೀತಿಯ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಅಂದರೆ ಬೆಳೆ ಆಣೇವಾರಿ ಶೇಕಡ ಇಪ್ಪತ್ತೈದಕ್ಕೂ ಕಡಿಮೆ ಬಂದಂಥ ಸಂದರ್ಭದಲ್ಲಿ ಆಗ ತಕ್ಷಣವೇ ಬೆಳೆ ವಿಮೆ ಕೊಡುವಂಥಾದ್ದಾಗಬೇಕು ಮತ್ತು ರೈತರಿಂದ ಸಾಲ ವಸೂಲಾತಿಯನ್ನು ತಕ್ಷಣ ನಿಲ್ಲಿಸಿ, ಆ ಸಾಲದ ಅವಧಿಯನ್ನು ಪರಿವರ್ತನೆ ಮಾಡಬೇಕು. ಮಧ್ಯಾವಧಿ ಸಾಲವಿದ್ದರೆ ದೀರ್ಘಾವಧಿ ಸಾಲವನ್ನಾಗಿ, ಅಲ್ಪಾವಧಿ ಸಾಲವನ್ನು ಮಧ್ಯಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವಂಥಾದ್ದು ತಕ್ಷಣವೇ ಆಗಬೇಕು. ಆದರೆ ಇವತ್ತು ಅದು ಗೊತ್ತಿಲ್ಲ. ಇವತ್ತು ನಾವು ಯಾವುದೇ ತಾಲ್ಲೂಕಿಗೆ ಹೋಗಿ ನೋಡಿದರೂ, ಸಾಲ ವಸೂಲಾತಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವುದನ್ನು ನೋಡಬಹುದು. ಬ್ಯಾಂಕುಗಳು, ಸಹಕಾರಿ ಸಂಘಗಳು, ಸೊಸೈಟಿಗಳು, ಗ್ರಾಮೀಣ ಬ್ಯಾಂಕುಗಳಿಂದ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ರೈತರಿಗೆ ಸಾಲ ವಸೂಲಾತಿಗಾಗಿ ನೋಟೀಸ್‌ಗಳನ್ನು ಕೊಡುವಂಥಾದ್ದು, ಸಾಲ ವಸೂಲಾತಿ ಮಾಡುವಂಥಾದ್ದು, ಅವರ ಆಸ್ತಿಗಳನ್ನು ಜಫ್ತಿ ಮಾಡುವಂಥಾದ್ದು, ಅವರ ಹೊಲ ಮನೆಗಳನ್ನು ಮಾರುವುದು ನಡೆಯುತ್ತಿದೆ. ಕೋರ್ಟ್‌ನಿಂದ ವಾರೆಂಟ್ ಇಷ್ಯೂ ಆಗಿ ರೈತರು ಸಾಲ ತೀರಿಸಲಾರದೆ ಜೈಲಿನಲ್ಲಿ ಇರುವುದನ್ನೂ ನಾವು ನೋಡುತ್ತಿದ್ದೇವೆ. ರೈತರ ಬಂಧನವಾಗುತ್ತಿದೆ. ಈ ಬರಗಾಲದ ಪರಿಸ್ಥಿತಿಯಲ್ಲಿ ರೈತರು ಸಾಲವನ್ನು ತೀರಿಸಲಾರದ ಪರಿಸ್ಥಿತಿ ಇದೆ. ಆತನು ಬೆಳೆದಂತಹ ಬೆಳೆಗೆ ಸರಿಯಾದಂಥ ಬೆಲೆ ಇಲ್ಲದಂಥ ಈ ಸಂದರ್ಭದಲ್ಲಿ ರೈತ ಒಂದು ದೊಡ್ಡ ಬಾಧೆಯನ್ನು ಪಡುತ್ತಿದ್ದಾನೆ. ಡಿ.ಸಿ.ಯವರ ವರದಿಯ ಆಧಾರದ ಮೇಲೆ ಸರ್ಕಾರ ತಕ್ಷಣವೇ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು, ಸಾಲ ವಸೂಲಾತಿಯನ್ನು ನಿಲ್ಲಿಸಬೇಕಾಗಿತ್ತು, ಸಾಲದ ಅವಧಿಯನ್ನು ಪುನರ್ ವಿಮರ್ಶೆ ಮಾಡಬೇಕಾಗಿತ್ತು, ಅದು ಆಗುತ್ತಿಲ್ಲ. ಕೃಷಿ ಬೆಳೆ ವಿಮೆಯನ್ನು ರೈತರಿಗೆ ಕೊಡಲು ಏನು ತೊಂದರೆಯಾಗಿದೆ ಎನ್ನುವುದಕ್ಕೆ ರಾಜ್ಯ ಸರ್ಕಾರ ಸ್ಪಷ್ಟನೆ ನೀಡಬೇಕಾಗಿದೆ. ಜನರಲ್ ಇನ್‌ಷ್ಯೂರೆನ್ಸ್ ಕಂಪನಿಗಳಿಂದ ತೊಂದರೆಯಾಗಿದೆಯೇ ಅಥವಾ ನಮ್ಮ ಕೃಷಿ ಅಧಿಕಾರಿಗಳು ಸರಿಯಾದ ಮಾಹಿತಿ ಕೊಡುತ್ತಿಲ್ಲವೇ ಅಥವಾ ಸರಿಯಾದ ಅಂಕಿಸಂಖ್ಯೆಗಳನ್ನು ಕೊಡುತ್ತಿಲ್ಲವೇ ಅಥವಾ ಯಾವ ರೀತಿಯಿಂದ ಕೃಷಿ ವಿಮೆಯನ್ನು ರೈತರಿಗೆ ಕೊಡಲು ಅನಾನುಕೂಲವಾಗಿದೆ ಎನ್ನುವುದನ್ನು ರಾಜ್ಯ ಸರ್ಕಾರ ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ಒಂದು ಮಂದಗತಿಯ ಕಾರ್ಯ ಚಟುವಟಿಕೆ ನಡೆಯುತ್ತಿದೆ. ಕೃಷಿ ಬೆಳೆ ವಿಮೆಗೆ ರೈತರು ಬಹಳಷ್ಟು ಪ್ರೀಮಿಯಂ ಅನ್ನು ತುಂಬಿದ್ದಾರೆ. ಇದುವರೆಗೆ ಕೃಷಿ ವಿಮೆ ಏಕೆ ಜಾರಿಯಾಗಿಲ್ಲ? ಇದುವರೆಗೆ ನಮಗೆ ಏಕೆ ಹಣ ಮುಟ್ಟುತ್ತಿಲ್ಲ ಎಂದು ನಾವು ರಾಜ್ಯದಲ್ಲಿ ಎಲ್ಲೇ ಪ್ರವಾಸ ಮಾಡಿದರೂ ರೈತರು ನಮ್ಮನ್ನು ಕೇಳುತ್ತಿದ್ದಾರೆ. ಆದ್ದರಿಂದ, ರಾಜ್ಯಸರ್ಕಾರ ತಕ್ಷಣವೇ ಕ್ರಮಗಳನ್ನು ಕೈಗೊಂಡು ಬೆಳೆ ವಿಮೆಯನ್ನು ಜಾರಿ ಮಾಡತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಮಾನ್ಯ ಕೃಷಿ ಸಚಿವರ ಒಂದು ಹೇಳಿಕೆಯನ್ನು ನಾನು ನೋಡಿದೆ. 'ರಾಜ್ಯ

ಸರ್ಕಾರ ಹತ್ತು ಕೋಟಿ ರೂಪಾಯಿಗಳನ್ನು ಬೆಳೆ ವಿಮೆಯ ಸಲುವಾಗಿ ಬಿಡುಗಡೆ ಮಾಡುತ್ತದೆ' ಎಂದು ಹೇಳಿದ್ದಾರೆ. ಬಜೆಟ್ ಭಾಷಣದ ಸಂದರ್ಭದಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಬೆಳೆ ವಿಮೆ ಸಲುವಾಗಿ ನಾವು ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಅದು ಇದುವರೆಗೂ ಅನುಷ್ಠಾನವಾಗಲಿಲ್ಲ. ಆದರೆ ಕೃಷಿ ಸಚಿವರಾದ ಮಾನ್ಯ ಜಯಚಂದ್ರರವರು ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇನೆ ಎಂದು ಹೇಳಿದ್ದಾರೆ. ಈ ಹತ್ತು ಕೋಟಿ ರೂಪಾಯಿಗಳು ಯಾವುದಕ್ಕೂ ಸಾಲುವುದಿಲ್ಲ. ಹೀಗಾಗಿ ಇದಕ್ಕೆ ರಾಜ್ಯ ಸರ್ಕಾರದ ಕಾಂಟ್ರಿಬ್ಯೂಷನ್ ಏನು? ಇನ್‌ಷ್ಯೂರೆನ್ಸ್ ಕಂಪನಿಯ ಕಾಂಟ್ರಿಬ್ಯೂಷನ್ ಏನು? ಎನ್ನುವುದನ್ನು ಹೇಳಬೇಕಾಗಿದೆ. ರೈತರು ತುಂಬಿದಂಥ ಬೆಳೆ ವಿಮೆ ಪ್ರೀಮಿಯಂಗೆ ಸರಿಯಾದಂಥ ಪ್ರತಿಫಲ ಸಿಗಬೇಕಾಗಿದೆ. ಇದರ ಅನುಷ್ಠಾನ ಸರಿಯಾಗಿ ಆಗದಿದ್ದರೆ, ಬೆಳೆ ವಿಮೆ ವ್ಯವಸ್ಥೆಯಲ್ಲಿ ಇರುವಂಥ ನಂಬಿಕೆಯನ್ನು ರೈತರು ಕಳೆದುಕೊಳ್ಳುವ ಪರಿಸ್ಥಿತಿ ಬರಬಹುದು. ಆದ್ದರಿಂದ, ಬರಗಾಲದಿಂದ ತೊಂದರೆಯಾದಂಥ ರೈತರಿಗೆ ಮತ್ತು ಆಣೇವಾರಿ ಲೆಕ್ಕದಲ್ಲಿ ಬೆಳೆ ವಿಮೆ ಯಾರಿಗೆ ಕೊಡಬೇಕು ಎನ್ನುವ ಬಗ್ಗೆ ಗೈಡ್‌ಲೈನ್ಸ್‌ನ ಚೌಕಟ್ಟಿನಲ್ಲಿ ಬರುವ ರೈತರಿಗೆ ತಕ್ಷಣವೇ ಬೆಳೆ ವಿಮೆಯನ್ನು ಕೊಡುವಂಥ ಕೆಲಸ ಆಗಬೇಕಾಗಿದೆ. ಆಗ ಮಾತ್ರ ನಾವು ರೈತರಿಗೆ ಒಂದು ರೀತಿಯ ರಿಲೀಫ್ ಅನ್ನು ಕೊಡಲು ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತಿದ್ದೇನೆ. ನವಲಗುಂದ ಮತ್ತು ಕಲಘಟಗಿ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ ಎಂದು ಡಿ.ಸಿ.ಯವರು ಫೆಬ್ರವರಿಯಲ್ಲಿ ವರದಿ ಕೊಟ್ಟಿದ್ದರೂ, ಇದುವರೆಗೆ ಏಕೆ ಘೋಷಣೆ ಮಾಡಿಲ್ಲ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ರಾಜ್ಯದಲ್ಲಿ ಬಹಳಷ್ಟು ಕಡೆಗಳಲ್ಲಿ ಇದೇ ಪರಿಸ್ಥಿತಿ ಇದೆ. ಇದನ್ನು ನಾನು ಕೇವಲ ಒಂದು ಉದಾಹರಣೆಯನ್ನಾಗಿ ಹೇಳುತ್ತಿದ್ದೇನೆ. ಆದ್ದರಿಂದ, ಬರಪೀಡಿತವಾಗಿರುವ ತಾಲ್ಲೂಕುಗಳನ್ನು ತಕ್ಷಣವೇ ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿ ಬರ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡುವಂಥ ಕೆಲಸವಾಗಬೇಕು. ಬೇರೆಬೇರೆ ಜಿಲ್ಲೆಗಳಿಂದಲೂ ನಾನು ವರದಿಗಳನ್ನು ತರಿಸಿಕೊಂಡಿದ್ದೇನೆ. ಅಲ್ಲಿಯೂ ಸಹ ಸಮಸ್ಯೆಗಳು ಒಂದೇ ತೆರನಾಗಿ ಇರುವುದನ್ನು ನಾವು ಕಾಣಬಹುದು. ಚಿತ್ರದುರ್ಗದ ಡಿ.ಸಿ.ಯವರಿಂದ ಬಂದಂಥ ಮಾಹಿತಿಯನ್ನು ಹೇಳುತ್ತಿದ್ದೇನೆ. 'ಪ್ರಸಕ್ತ ಬೇಸಿಗೆ ಕಾಲದಲ್ಲಿ ಜಿಲ್ಲೆಯ ಗ್ರಾಮಾಂತರ ಹಾಗೂ ಪಟ್ಟಣ, ನಗರ ಪ್ರದೇಶಗಳಲ್ಲಿ ಕೊಳವೆ ಬಾವಿಗಳಲ್ಲಿ ಅಂತರ್‌ಜಲಮಟ್ಟ ಕುಸಿದು ಕುಡಿಯುವ ನೀರಿನ ಅಭಾವ ತಲೆದೋರಿರುತ್ತದೆ' ಅಂದರೆ ಚಿತ್ರದುರ್ಗ ಜಿಲ್ಲೆಯಲ್ಲಿಯೂ ಸಹ ಈ ರೀತಿಯಾದ ಒಂದು ವಾತಾವರಣವಿದೆ ಮತ್ತು 'ಅಭಾವ ಹಾಗೂ ತೀವ್ರ ಅಭಾವಕ್ಕೆ ಒಳಗಾಗಿರುವ ಗ್ರಾಮ, ಪಟ್ಟಣ, ನಗರ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸಲು ಕ್ರಿಯಾ ಯೋಜನೆ ತಯಾರಿಸಲಾಗುತ್ತಿದೆ. ಸಧ್ಯಕ್ಕೆ ಐವತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವನ್ನು ಕೋರಲಾಗಿದೆ. ಈ ರೀತಿಯಾದಂಥ ಬೇಡಿಕೆಯನ್ನು ಅವರು ಸರ್ಕಾರದ ಮುಂದಿಟ್ಟಿದ್ದಾರೆ. ಅದೇ ರೀತಿ ಬಾಗಲಕೋಟೆ ಡಿ.ಸಿ.ಯವರಿಂದ ಬಂದಂಥ ವರದಿಯನ್ನು ಹೇಳುತ್ತಿದ್ದೇನೆ. ಅವರು

ಹೇಳುತ್ತಾರೆ, 'ಬಾಗಲಕೋಟೆ ಜಿಲ್ಲೆಯ ಕುಡಿಯುವ ನೀರಿನ ಗಂಭೀರ ಸಮಸ್ಯೆ ಬಗ್ಗೆ ನದಿ ಪ್ರದೇಶದ ದಂಡೆಗಳಲ್ಲಿ ಇರುವ ಗ್ರಾಮಗಳಾದ ಜಮಖಂಡಿ ತಾಲ್ಲೂಕಿನ ಮುತ್ತೂರು, ಕಂಕನವಾಡಿ ಗ್ರಾಮಗಳಲ್ಲಿ ನದಿ ನೀರಿನ ಕೊರತೆ ಇರುವುದರಿಂದ ತಾತ್ಕಾಲಿಕ ಸಮಸ್ಯೆಯಾಗಿದ್ದು ಅಲಭಾ ನೀರು ಯೋಜನೆಯಿಂದ ಪೂರೈಕೆ ಮಾಡಲಾಗುತ್ತದೆ ಮತ್ತು ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಸಂಭವನೀಯ ಸಮಸ್ಯೆಗಳ ಬಗ್ಗೆ ಒಂದು ಕ್ರಿಯಾ ಯೋಜನೆಯನ್ನು ತಯಾರಿಸಿದ್ದು, ಅದರನ್ವಯ ನಗರ ಪ್ರದೇಶದ ಸಮಸ್ಯೆಯನ್ನು ಹೋಗಲಾಡಿಸಲು ಎಂಬತ್ತನಾಲ್ಕು ಲಕ್ಷ ಹಾಗೂ ಗ್ರಾಮೀಣ ಪ್ರದೇಶದ ಸಲುವಾಗಿ ಎಪ್ಪತ್ತು ಲಕ್ಷ ಒಟ್ಟು ಒಂದುನೂರ ಹದಿನೈದು ಲಕ್ಷ ರೂಪಾಯಿಗಳ ಅನುದಾನದ ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ಫೆಬ್ರವರಿ 28ರಂದು ವರದಿ ಸಲ್ಲಿಸಲಾಗಿದೆ' ಎಂದು ಹೇಳಿದ್ದಾರೆ. ಮತ್ತು 'ಕುಡಿಯುವ ನೀರು ಉಪ ಶೀರ್ಷಿಕೆಯಲ್ಲಿ ನಲವತ್ತೊಂಬತ್ತು ಲಕ್ಷ ರೂಪಾಯಿಗಳನ್ನು ತೆಗೆದಿರಸಲಾಗಿದ್ದು, ಸಿ.ಆರ್.ಎಫ್. ಫಂಡಿನಿಂದ ಉದ್ಯೋಗ ಸೃಜನ ಕಾರ್ಯಕ್ರಮದಡಿಯಲ್ಲಿ ಒಂದು ನೂರ ಐವತ್ತು ಲಕ್ಷ ರೂಪಾಯಿಗಳ ಶಿಲ್ಕು ಬಾಕಿ ಇದ್ದು ಅದನ್ನೂ ಕೂಡ ಕುಡಿಯುವ ನೀರಿನ ತುರ್ತು ಕಾಮಗಾರಿಗೆ ಬಳಸಲು ಪರವಾನಗಿ ನೀಡಲು ಸರ್ಕಾರಕ್ಕೆ ವಿನಂತಿಸಲಾಗಿದೆ' ಎಂದೂ ಹೇಳಿದ್ದಾರೆ. ಅಂದರೆ ಡಿ.ಸಿ.ಯವರು ಫೆಬ್ರವರಿ ತಿಂಗಳಲ್ಲಿ ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಕಳುಹಿಸಿದ್ದಾರೆ. ಆದರೆ ರಾಜ್ಯ ಸರ್ಕಾರ ಇದುವರೆಗೂ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಅದು ಹಣ ಬಿಡುಗಡೆ ಮಾಡುವುದಿರಬಹುದು ಅಥವಾ ಡಿ.ಸಿ.ಯವರಿಗೆ ಅಧಿಕಾರ ಕೊಡುವುದು ಇರಬಹುದು, ಇವುಗಳ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಈ ರೀತಿಯಾದಂಥ ಪರಿಸ್ಥಿತಿ ಇರುವ ಬಗ್ಗೆ ಬೇರೆ ಬೇರೆ ಜಿಲ್ಲೆಗಳಿಂದಲೂ ವರದಿಗಳು ಬರುತ್ತಿವೆ. ಈ ಸಮಸ್ಯೆಗಳಿಗೆ ನಾವು ತಕ್ಷಣವೇ ಒಂದು ಪರಿಹಾರವನ್ನು ಹುಡುಕದಿದ್ದರೆ ಪರಿಸ್ಥಿತಿ ಕಠಿಣವಾಗುತ್ತದೆ. 'ಬರದ ದವಡೆಯಲ್ಲಿ ಶಿವಮೊಗ್ಗ ಜಿಲ್ಲೆ' ಎಂದು ಶಿವಮೊಗ್ಗ ಜಿಲ್ಲೆ ಬಗ್ಗೆಯೂ ಪತ್ರಿಕೆಗಳಲ್ಲಿ ಬಂದಿದೆ. ಮುಂದೆ ಈ ಬರಗಾಲ ಕಾಮಗಾರಿಯನ್ನು ಕೈಗೊಂಡಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೋದಾಗ ಇರಬಹುದು, ಅಥವಾ ಬೇರೆ ಸಚಿವರು ಹೋದಂಥ ಸಂದರ್ಭದಲ್ಲಿ ಇರಬಹುದು, ಆ ಸಂದರ್ಭದಲ್ಲಿ ಅಲ್ಲಿ ಇದ್ದಂಥ ಅಧಿಕಾರಿಗಳು ಇರಬಹುದು, ಅದನ್ನು ಕೆಲಸ ಮಾಡುವಂಥವರು ಇರಬಹುದು, ಅವರು ಬಂದಾಗ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಕೂಲಿಗಳನ್ನು ನಿಲ್ಲಿಸಿ ಆ ಮಂತ್ರಿಗಳ ಮುಂದೆ, ಮುಖ್ಯಮಂತ್ರಿಗಳ ಮುಂದೆ ಮತ್ತು ಹಿರಿಯ ನಾಯಕರುಗಳು ಬಂದಂಥ ಸಂದರ್ಭದಲ್ಲಿ ಸಾಕಷ್ಟು ಕೆಲಸ ನಡೆದಿದೆ ಎಂದು ತೋರಿಸುವಂಥಾದ್ದು ಆಗುತ್ತಿದೆ. ಆದರೆ ಆ ನಾಯಕರುಗಳು ಅಲ್ಲಿಂದ ಮರೆಯಾದ ತಕ್ಷಣ ಆ ಕೆಲಸವನ್ನು ನಿಲ್ಲಿಸಿರುವುದನ್ನು ನಾವು ನೋಡಿದ್ದೇವೆ. ಲೋಕಸಭೆಯ ಮಾನ್ಯ ವಿರೋಧ ಪಕ್ಷದ ನಾಯಕಿ ಆದಂಥ ಶ್ರೀಮತಿ ಸೋನಿಯಾ ಗಾಂಧಿ ಅವರು ಹಿಂದೆ ಬಿಜಾಪುರ ಜಿಲ್ಲೆಗೆ ಬಂದಿದ್ದಾಗ, ಅವರ ಜೊತೆ ಆವತ್ತು ಮಾನ್ಯ ಮುಖ್ಯಮಂತ್ರಿಯವರು ಇದ್ದರು, ಸಾಕಷ್ಟು ಕೆಲಸ ನಡೆಯುತ್ತಿದೆ ಎಂದು ಅವರ ಮುಂದೆ ತೋರಿಸಿದರು. ಆ ಮೇಲೆ 'ಸೋನಿಯಾ ಗಾಂಧಿಯವರು ಹೋಗುತ್ತಿದ್ದಂತೆಯೇ ಕೆರೆ ಕೆಲಸ ನಿಂತುಬಿಡ್ತಾರೀ' ಎಂದು ಅಲ್ಲಿ ಜನ

ಹೇಳುವಂಥಾದ್ದು ಮರುದಿವಸ ಪತ್ರಿಕೆಯಲ್ಲಿ ಬಂತು. ಅಂದರೆ ನಾಯಕರು ಬಂದಾಗ, ಮಂತ್ರಿಗಳು ಬಂದಾಗ, ಹಾಗೂ ಮುಖ್ಯಮಂತ್ರಿಗಳು ಬಂದಾಗ ಬರಗಾಲ ಕಾಮಗಾರಿ ಕೆಲಸ ನಡೆದಿದೆ ಎಂದು ಆ ಒಂದು ನಾಟಕವನ್ನು ಆಡುವಂಥಾದ್ದನ್ನು ಮಾಡುತ್ತಾರೆ. ಗಣ್ಯ ವ್ಯಕ್ತಿಗಳು ಬರುವಾಗ ನೂರಾರು ಕೂಲಿ ಕಾರ್ಮಿಕರನ್ನು ನಿಲ್ಲಿಸಿ ಬಿಡುವುದು, ಮತ್ತು ಅಲ್ಲಿ ಕೆಲಸ ಆಗಿದೆ ಎಂದು ಏನಾದರೂ ಸ್ವಲ್ಪ ತೋರಿಸುವಂಥಾದ್ದು, ನಂತರ ಅದರ ಮರುದಿವಸವೇ ಎಲ್ಲಾ ಕೆಲಸ ಬಂದ್ ಆಗುವಂಥಾದ್ದು. ಹಾಗೆಯೇ ಇವತ್ತು ದೊಡ್ಡವರು ಬಂದಾಗ ಗೋಶಾಲೆ ತೆಗೆದಿದ್ದೇವೆಂದು ಹೇಳುವಂಥಾದ್ದು, ನೂರಾರು ದನಕರುಗಳನ್ನು ಅಲ್ಲಿ ಇಡುವಂಥಾದ್ದು, ನಂತರ ಮರುದಿವಸ ಆ ಗೋಶಾಲೆ ನಾಪತ್ತೆ. ನಾನೇ ಸ್ವತಃ ಎರಡು ಮೂರು ಕಡೆ ಹೋದಾಗ ನೋಡಿದ್ದೇನೆ. ರೋಣ ತಾಲ್ಲೂಕಿನ ಕೆಲವೊಂದು ಪ್ರದೇಶಗಳಿಗೆ ನಾನು ಹೋಗಿದ್ದೆ. ನಂತರ ಕೊಪ್ಪಳದ ಕೆಲವು ಕಡೆ ಹೋಗಿದ್ದೆ. ಅಲ್ಲಿ ಗೋಶಾಲೆ ಇದೆಯೆಂದು ಹೇಳಿದರು. ನಾನು ಹೋಗಿ ನೋಡಿದಾಗ ಅಲ್ಲಿ ಗೋಶಾಲೆ ಇರಲಿಲ್ಲ. ಇದು ರಾಜ್ಯದಲ್ಲಿಯ ಪರಿಸ್ಥಿತಿ. ಅಂದರೆ ಇವತ್ತು ಎಲ್ಲಿಯೂ ಕೂಡ ಹಣ ಬಿಡುಗಡೆ ಮಾಡಿದರೂ ಅಲ್ಲಿ ಅದು ಸರಿಯಾಗಿ ಖರ್ಚು ಆಗುತ್ತಿದೆಯೋ ಇಲ್ಲವೋ, ಸದುಪಯೋಗವಾಗುತ್ತಿದೆಯೋ ಇಲ್ಲವೋ, ಯಾವ ಉದ್ದೇಶಕ್ಕಾಗಿ ಮಾಡಿದ್ದೇವೆಯೋ ಆ ಉದ್ದೇಶಕ್ಕಾಗಿ ಸದ್ವಿನಿಯೋಗ ಆಗುತ್ತದೋ ಇಲ್ಲವೋ ಎನ್ನುವುದು ಇವತ್ತು ತಿಳಿಯುತ್ತಿಲ್ಲ. ಆ ಬರ ಕಾಮಗಾರಿಯಲ್ಲಿ ಭ್ರಷ್ಟಾಚಾರ ಆಗಿರುವಂಥಾದ್ದು, ಅದನ್ನು ನಾವು ನೋಡುತ್ತಿದ್ದೇವೆ. ಈ ರೀತಿ ಆಗಬಾರದು. ಹೀಗಾಗಿ ಇದರ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಬೇಕಾಗುತ್ತದೆ. ಇಲ್ಲದಿದ್ದರೆ ಬಹುಶಃ ನಾವು ಏನೋ ಹಣ ಬಿಡುಗಡೆ ಮಾಡಿ, ಏನೋ ಕೆಲಸ ಮಾಡುವುದಕ್ಕೆ ಹೋದರೆ ಆ ಬಡಜನರಿಗೆ, ರೈತರಿಗೆ, ಕೂಲಿ ಕಾರ್ಮಿಕರಿಗೆ ಅದು ಮುಟ್ಟುವುದಿಲ್ಲ. ಈ ಬರಗಾಲ ಕಾಮಗಾರಿ ಎನ್ನುವಂಥಾದ್ದು ಕೇವಲ ನಾಟಕ ಆಗುತ್ತದೆ. ಆ ನಾಟಕ ಆಗಬಾರದು. ಅದಕ್ಕಾಗಿ ದಯವಿಟ್ಟು ಈ ಬಗ್ಗೆ ಚಿಂತನೆಯನ್ನು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಹಾಗೆಯೇ ಸರ್ಕಾರ ಕೆಲವೊಂದು ಸ್ಪಷ್ಟೀಕರಣವನ್ನು ತಕ್ಷಣವೇ ಕೊಡಬೇಕಾಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸರ್ಕಾರ ಇಲ್ಲಿಯವರೆಗೆ ಕೈಗೊಂಡ ಕ್ರಮಗಳು ಏನು? ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಇತ್ಯಾದಿ ವಿವರಗಳು ಇವತ್ತು ಜನತೆಗೆ ಗೊತ್ತಾಗಬೇಕಾಗುತ್ತದೆ. ನನ್ನ ಹತ್ತಿರ ಒಂದು ಲಿಸ್ಟ್ ಇದ್ದು, ಅದು ಜನವರಿ ತಿಂಗಳವರೆಗೆ ಬಿಡುಗಡೆಯಾದ ಹಣದ ಬಗ್ಗೆ ವಿವರ ಇರುವಂಥ ಲಿಸ್ಟ್ ಆಗಿರುತ್ತದೆ. ಇತ್ತೀಚೆಗೆ ಕೇವಲ ಮೂರು ಜಿಲ್ಲೆಗಳಿಗೆ ಮಾತ್ರ ಹಣ ಬಿಡುಗಡೆ ಮಾಡಿರುವಂಥಾದ್ದನ್ನು ನಾವು ನೋಡುತ್ತಿದ್ದೇವೆ. Statement showing the funds released under Calamity Relief Fund for the year 2001-02 from 1-4-2001 to 25-1-2002. ಅಂದರೆ ಜನವರಿ 25ರವರೆಗೆ ಇದ್ದಂಥ ರಿಕಾರ್ಡ್. ಅದರ ನಂತರದ ರಿಕಾರ್ಡ್‌ನ್ನು ನಾವು ನೋಡಿದಾಗ ಕೇವಲ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಒಂದಿಷ್ಟು ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ. ದಾವಣಗೆರೆ, ಶಿವಮೊಗ್ಗ, ಮಂಡ್ಯ ಮತ್ತು ದಕ್ಷಿಣ ಕನ್ನಡ ಹೀಗೆ ಈ ನಾಲ್ಕು ಜಿಲ್ಲೆಗಳಿಗೆ ಜನವರಿ 25ರವರೆಗೆ ಏನು ಹಣ ಕೊಟ್ಟಿದ್ದಾರೆ, ಅದರ ನಂತರ ಒಂದು ಪೈಸೆ ಹಣವನ್ನು ಸಹ ಕೊಟ್ಟಿಲ್ಲ. ಇಲ್ಲಿಯವರೆಗೆ 9060

ಲಕ್ಷ ರೂಪಾಯಿಗಳ ಹಣವನ್ನು ಕೆಲಾಮಿಟಿ ಫಂಡ್‌ನಲ್ಲಿ ಕೊಟ್ಟಿದ್ದಾರೆ. ಇನ್ ದಿ ಮಿಾನ್‌ಟೈಮ್ ನ್ಯಾಚುರಲ್ ಪ್ರೋಸೆಸ್‌ನಲ್ಲಿ ಕೊಡುವಂಥಾದ್ದು. ಈ ಬರದ ಪರಿಸ್ಥಿತಿ ಗಂಭೀರವಾಗುತ್ತಿರುವಂಥ ಕಳೆದ 2-3 ತಿಂಗಳಿನಲ್ಲಿ ಕುಡಿಯುವ ನೀರಿನ ಹಾಹಾಕಾರ ಆಗುತ್ತಿದೆ, ಇಂಥ ಸಂದರ್ಭದಲ್ಲಿ ಈ ನಾಲ್ಕು ಜಿಲ್ಲೆಗಳನ್ನು ಹೊರತುಪಡಿಸಿದರೆ ರಾಜ್ಯ ಸರ್ಕಾರದ ಕಡೆಯಿಂದ ಬೇರೆ ಯಾವುದೇ ಜಿಲ್ಲೆಗಳಿಗೆ ಹಣ ಬಿಡುಗಡೆಯಾಗಿಲ್ಲ. ಇದು ಹೀಗೇಕೆ ಎನ್ನುವ ಪ್ರಶ್ನೆಯನ್ನು ಇವತ್ತಿನ ದಿವಸ ನಾವು ಸರ್ಕಾರವನ್ನು ಕೇಳಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ಏನು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ? ಇಲ್ಲಿಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? ಯಾವ ಕಾಮಗಾರಿಯನ್ನು ಮಾಡಿಸಲಾಗುತ್ತಿದೆ? ಇದರ ಬಗ್ಗೆ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ. ಹಾಗೆಯೇ, ಬೇರೆ ಬೇರೆ ಜಿಲ್ಲಾಧಿಕಾರಿಗಳು ಕೊಟ್ಟಂಥ ವರದಿ ಏನು? ಅವರು ಎಷ್ಟು ಹಣವನ್ನು ಕೇಳಿದ್ದಾರೆ? ಏನು ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದಾರೆ? ಅದರ ಬಗ್ಗೆ ಸಹ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ. ಈ ಸಂಬಂಧ ಸರ್ಕಾರ ತಕ್ಷಣವೇ ಮಾಡಬೇಕಾದಂಥ ಕೆಲಸಗಳು ಮತ್ತು ಕೆ.ಪಿ.ಟಿ.ಸಿ.ಎಲ್. ವಿದ್ಯುಚ್ಛಕ್ತಿ ಕಳವು ಬಗ್ಗೆ ನಾನು ಆಗಲೇ ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಮೀಟರ್ ಹಾಕಿಸುವ ಬಗ್ಗೆ ಕೆಲವೊಂದು ರಿಸ್ಟ್ರಿಕ್ಷನ್ಸ್ ಹಾಕಿದ್ದಾರೆ. ಅನಧಿಕೃತವಾದ ಪಂಪ್‌ಸೆಟ್ಟುಗಳಿಗೆ ಅಧಿಕೃತವಾಗಿ ವಿದ್ಯುಚ್ಛಕ್ತಿ ದೊರೆಯುವಂತೆ ಮಾಡುವುದು ಮತ್ತು ಬಹಳ ಮುಖ್ಯವಾಗಿ ಇರುವಂಥಾದ್ದು ಏನೆಂದರೆ, ಎಲ್ಲಿ ಕಪ್ಪು ಮಿಶ್ರಿತ ಭೂಮಿ ಇದೆ ಅಲ್ಲಿ ಈ ಪಂಪುಸೆಟ್ಟುಗಳನ್ನು ಹಾಕಲಿಕ್ಕೆ ಪರವಾನಗಿ ಕೊಡುವುದಿಲ್ಲವೆನ್ನುವ ರಿಸ್ಟ್ರಿಕ್ಷನ್ ಕೆ.ಪಿ.ಟಿ.ಸಿ.ಎಲ್.ನಿಂದ ಏನಿದೆ ಅದು ಹೋಗಬೇಕು. ಇದನ್ನು ಎಲ್ಲಾ ಕಡೆ ಸಮಾನವಾಗಿ ನೋಡುವಂಥಾದ್ದು ಆಗಬೇಕಾಗುತ್ತದೆ. ಕಪ್ಪು ಮಿಶ್ರಿತ ಭೂಮಿ ಇದ್ದಂಥ ರೈತರು ಅಲ್ಲಿ ಪಂಪ್‌ಸೆಟ್ಟುಗಳನ್ನು ಹಾಕಿಕೊಂಡು ತಮ್ಮ ಹೊಲಗಳಿಗೆ ನೀರು ಬಿಡಬಾರದು ಎನ್ನುವಂಥಾದ್ದು ಸರಿಯಲ್ಲ. ಆದ್ದರಿಂದ ಆ ರಿಸ್ಟ್ರಿಕ್ಷನ್‌ನ್ನು ತೆಗೆದುಹಾಕುವುದಕ್ಕೆ ಏನು ತೊಂದರೆ ಇದೆ ಎನ್ನುವುದನ್ನು ಸರ್ಕಾರ ಹೇಳಬೇಕಾಗುತ್ತದೆ. ಆ ರೈತರಿಗೆ ಏಕೆ ಅನ್ಯಾಯ ಮಾಡುತ್ತಿದೆ ಎನ್ನುವುದನ್ನು ಸರ್ಕಾರ ಹೇಳಬೇಕಾಗುತ್ತದೆ. ಜೊತೆಗೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೆಲವೊಂದು ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಈಗಾಗಲೇ ಶಾಸಕರಿಗೆ ಅನುದಾನವನ್ನು ಕೊಟ್ಟಿದ್ದಾರೆ. ಏಕೆಂದರೆ ಶಾಸಕರುಗಳಿಗೆ ತಮ್ಮ ಕ್ಷೇತ್ರದಲ್ಲಿ ಏನಾದರೂ ತುರ್ತು ಕೆಲಸ ಮಾಡಬೇಕಾದರೆ ಅದಕ್ಕೆ ಅನುದಾನವನ್ನು ಕೊಡುವಂಥ ಯಾವುದೇ ಅಧಿಕಾರ ಇಲ್ಲ. ಇವತ್ತು ಅಧಿಕಾರ ವಿಕೇಂದ್ರಿಕರಣದ ವ್ಯವಸ್ಥೆಯಲ್ಲಿ ಇದ್ದೇವೆ. ಹೀಗಾಗಿ ಅದಕ್ಕೆ ನಾವು ಯಾರನ್ನೂ ಬ್ಲೇಮ್ ಮಾಡುವ ಹಾಗಿಲ್ಲ. ಇವತ್ತು ಜಿಲ್ಲಾ ಪಂಚಾಯತ್ ಸದಸ್ಯರಿಗೆ, ತಾಲ್ಲೂಕು ಪಂಚಾಯತ್ ಸದಸ್ಯರಿಗೆ, ಗ್ರಾಮ ಪಂಚಾಯತ್ ಸದಸ್ಯರಿಗೆ ಎಷ್ಟೊಂದು ಅಧಿಕಾರ ಇದೆ, ಮತ್ತು ಯಾವ ರೀತಿ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಖರ್ಚು ಮಾಡುವುದಕ್ಕೆ ಅಧಿಕಾರ ಇದೆ, ಅದೇ ಶಾಸಕರಿಗೆ ಯಾವುದೇ ಒಂದು ಅಭಿವೃದ್ಧಿ ಕೆಲಸಗಳಿಗೆ ಒಂದು ಪೈಸೆಯಷ್ಟು ಸಹ ಹಣ ಖರ್ಚು ಮಾಡಲಾರದಂಥ ಪರಿಸ್ಥಿತಿ ಇದೆ. ಹೀಗಾಗಿ ಶಾಸಕರಿಗೆ ವರ್ಷಕ್ಕೆ 25 ಲಕ್ಷ ರೂಪಾಯಿಗಳನ್ನು ಅನುದಾನ ರೂಪದಲ್ಲಿ ಕೊಡುವಂಥಾದ್ದನ್ನು ಮಾನ್ಯ

ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಈಗಾಗಲೇ ಅರ್ಧದಷ್ಟು ಹಣ ಎಲ್ಲಾ ಕ್ಷೇತ್ರಗಳಿಗೆ ಬಂದಿದೆ. ಅದರಿಂದ ಕೆಲವೊಂದು ಸೂಕ್ತ ಕೆಲಸಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಜೊತೆಗೆ ಈ ಬರಗಾಲದ ಪರಿಸ್ಥಿತಿಯಲ್ಲಿ ಕೆಲವೊಂದು ಕೆರೆಗಳ ಹೂಳು ತೆಗೆಯುವಂಥಾದ್ದು ಇರಬಹುದು, ತಕ್ಷಣವೇ ಬೋರ್‌ವೆಲ್ ಹಾಕಿಸುವಂಥಾದ್ದು ಇರಬಹುದು, ಈ ಒಂದು ಪರಿಸ್ಥಿತಿಯಲ್ಲಿ ಶಾಸಕರಿಗೆ ಅನುದಾನ ಜಾಸ್ತಿ ಇದ್ದರೆ ಬಹುಶಃ ತುರ್ತು ಕೆಲಸಗಳನ್ನು ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ಏಕೆಂದರೆ, ನಾನು ಆಗಲೇ ಉಪ್ಪಿನಬೆಟಗೇರಿಯ ಒಂದು ಉದಾಹರಣೆಯನ್ನು ಕೊಟ್ಟೆ. ಅಲ್ಲಿ ಒಬ್ಬ ಮಹಿಳಾ ಜನಪ್ರತಿನಿಧಿ ಇದ್ದವರು ಅವರು ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗೆ ಅಲೆದಾಡಿದರೂ ಸಹಿತ ಇವತ್ತು ಒಂದು ಬೋರ್‌ವೆಲ್ ಹಾಕಿಸಲಿಕ್ಕೆ ಗತಿ ಇಲ್ಲ, ಒಂದು ಪಂಪ್‌ಸೆಟ್ ಹಾಕಿಸುವುದಕ್ಕೆ ಗತಿ ಇಲ್ಲ. ಹಾಗಾಗಿ ಇವತ್ತು ಶಾಸಕರ ಅನುದಾನದಿಂದ ಒಂದು ಲಕ್ಷ ರೂಪಾಯಿ ಹಣ ಮಂಜೂರು ಮಾಡಿದರೆ ತಕ್ಷಣವೇ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿದೆ. 25 ಲಕ್ಷ ರೂಪಾಯಿಗಳ ಅನುದಾನವನ್ನು ಕೊಡಲಾಗುವುದೆಂದು ಈಗಾಗಲೇ ಘೋಷಣೆ ಮಾಡಿರುವುದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಅಷ್ಟು ಹಣ ಶಾಸಕರಿಗೆ ಸಾಲುವುದಿಲ್ಲ, ಇವತ್ತು ಮಹಾರಾಷ್ಟ್ರ ಇರಬಹುದು, ದೆಹಲಿ ಇರಬಹುದು ಹೀಗೆ ಬೇರೆ ಬೇರೆ ರಾಜ್ಯಗಳಲ್ಲಿ 60 ರಿಂದ 70 ಲಕ್ಷ ರೂಪಾಯಿಗಳಷ್ಟು ಹಣವನ್ನು ಶಾಸಕರಿಗೆ ಅನುದಾನವಾಗಿ ಕೊಡುವಂಥ ವ್ಯವಸ್ಥೆ ಇದೆ.

ಅಧ್ಯಕ್ಷರು: ಮಹಾರಾಷ್ಟ್ರದಲ್ಲಿ ಶಾಸಕರಿಗೆ ಅನುದಾನವಾಗಿ 60 ಲಕ್ಷ ಹಣ ಕೊಡುತ್ತಾರೆ ಮತ್ತು ದೆಹಲಿಯ ಶಾಸಕರಿಗೆ ಒಂದು ಕೋಟಿ ರೂಪಾಯಿ ಹಣ ಕೊಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರು ಇವತ್ತು ನಮ್ಮ ಬೆಂಬಲಕ್ಕೆ ಬಂದಿದ್ದಾರೆ.

ಅಧ್ಯಕ್ಷರು: ಸದಸ್ಯರ ಪರವಾಗಿ ಹೇಳುತ್ತಿದ್ದೇನೆ ಅಷ್ಟೆ, ಬೆಂಬಲ ಅಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ತಮ್ಮ ಭಾವನೆಯನ್ನೂ ಸಹ ಇದರಲ್ಲಿ ವ್ಯಕ್ತಪಡಿಸಿದ್ದೀರಿ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ದೊಡ್ಡ ಮನಸ್ಸು ಮಾಡಬೇಕಷ್ಟೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ. ಈ ಹಣ ಒಳ್ಳೆಯ ಕೆಲಸಗಳಿಗೆ ಉಪಯೋಗ ಆಗುತ್ತದೆ. ಇವತ್ತು ಸರ್ಕಾರದಿಂದ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಸಾಕಷ್ಟು ಹಣವನ್ನು ಕೊಡುತ್ತಿದ್ದಾರೆ. ಅದು ಒಳ್ಳೆಯದು. ಅವರಿಗೆ ಇನ್ನೂ ಹೆಚ್ಚಿಗೆ ಹಣ ಕೊಡಿ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಆದರೆ ಇವತ್ತು ಶಾಸಕರಿಗೆ ತುರ್ತು ಕೆಲಸ ಮಾಡಿಸಲಿಕ್ಕೆ ಮತ್ತು

ಕೆಲವೊಂದು ಮಹತ್ವದ ಕೆಲಸ ಮಾಡಿಸಲಿಕ್ಕೆ ಇದು ಅನುಕೂಲವಾಗುತ್ತದೆ. ಈ 25 ಲಕ್ಷ ರೂ. ಹಣದಿಂದ ಕೆಲವೊಂದು ತುರ್ತು ಕಾಮಗಾರಿಯನ್ನು ಮಾಡಿಸಲಿಕ್ಕೆ ಅನುಕೂಲವಾಗಿದೆ. ಆದರೆ ನಿಜವಾಗಿ ಹೇಳುವುದಾದರೆ ಈ ಹಣ ಸಾಲುವುದಿಲ್ಲ. ಮಹಾರಾಷ್ಟ್ರದಲ್ಲಿ 60 ಲಕ್ಷ ರೂ. ದೆಹಲಿಯಲ್ಲಿ ಒಂದು ಕೋಟಿ ರೂ. ಕೊಡುತ್ತಿದ್ದಾರೆಂದು ಹೇಳುವಾಗ ಇಲ್ಲಿ ಕನಿಷ್ಠ 75 ಲಕ್ಷ ರೂ. ಹಣವನ್ನಾದರೂ ಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಅಲ್ಲಿ ಎರಡು ಕೋಟಿ ರೂ. ಹಣ ಕೊಡುತ್ತಾರೆಂದು ಹೇಳುವಾಗ, ನೀವು ಅದರಲ್ಲಿ ಏಕೆ ಚೌಕಾಸಿ ಮಾಡುತ್ತಿದ್ದೀರಿ? ನೀವೂ ಕೂಡ ಎರಡು ಕೋಟಿ ರೂ. ಹಣ ಕೇಳಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳೇ ಕ್ಷೇತ್ರಕ್ಕೆ ಒಂದೊಂದು ಕೋಟಿ ರೂ. ಕೊಡುತ್ತೇನೆ ಎನ್ನುವಂಥ ಹೇಳಿಕೆಯನ್ನು ಕೊಟ್ಟಿರುವಾಗ ಪುನಃ ನೀವು 75 ಲಕ್ಷ ರೂ.ಗಳಿಗೆ ಏಕೆ ಬರುತ್ತೀರಿ? ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಯಂತೆ ರಸ್ತೆಗೆ ಕೊಡುತ್ತೇವೆಂದು ಹೇಳಿರುವುದನ್ನು ನಾನು ಓದಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ: ಅದು ರಸ್ತೆಗೆ ಕೊಡುತ್ತೇನೆಂದು ಹೇಳಿರುವುದು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ 25 ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿದ್ದಾರೆ ಅದನ್ನು 75 ಲಕ್ಷ ರೂಪಾಯಿಗಳಿಗೆ ಹೆಚ್ಚಿಗೆ ಮಾಡಬೇಕೆಂದು ನಾನು ತಮ್ಮ ಮೂಲಕ ಡಿಮ್ಯಾಂಡ್ ಮಾಡುತ್ತಿದ್ದೇನೆ. 21ನೇ ತಾರೀಖು ಬಜೆಟ್ ಮಂಡನೆ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತೀವ್ರವಾದ ಗಮನ ಹರಿಸುತ್ತಾರೆ ಮತ್ತು ಈ ಹಣವನ್ನು ಮಂಜೂರು ಮಾಡುತ್ತಾರೆಂದು ನಂಬಿದ್ದೇನೆ ಹಾಗೂ ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಶಾಸಕರ ಪರವಾಗಿ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ: 25 ಲಕ್ಷ ರೂ. ಕೊಡುತ್ತೇವೆಂದು ಹೇಳಿ ಹನ್ನೆರಡೂವರೆ ಲಕ್ಷ ರೂ. ರಿಲೀಸ್ ಮಾಡಿದ್ದಾರೆ.

ಅಧ್ಯಕ್ಷರು: ಅವರು ಕೊಡುತ್ತಾರೆ, ಅದು ಎಲ್ಲಿಯೂ ಹೋಗುವುದಿಲ್ಲ. It will come.

ಶ್ರೀ ಅರಗ ಜ್ಞಾನೇಂದ್ರ: ಆಮೇಲೆ ಒಂದು ಲಕ್ಷ ರೂ. ಗಿಂತ ಕಡಿಮೆ ಕಾಮಗಾರಿ ತೆಗೆದುಕೊಳ್ಳಬಾರದು ಎಂದು ಹೇಳಿದರು. ನಮ್ಮ ಮಲೆನಾಡಿನಲ್ಲಿ 25 ಸಾವಿರ ರೂ. ಕೊಟ್ಟರೆ ಒಂದು ಬಾವಿಯಾಗಿ ಬಿಡುತ್ತದೆ. ನಾವು ಕೊಡೋಣ ಎಂದು ಹೇಳಿದರೆ ಅದನ್ನು ಸ್ಪ್ಲಿಟ್ ಮಾಡುವ ಹಾಗೆ ಇಲ್ಲ. ನಾವು ಈ ಬಗ್ಗೆ ಲೆಟರ್ ಬರೆದಿದ್ದೇವೆ.

ಅಧ್ಯಕ್ಷರು: ಕೆಲವು ಲೋಪದೋಷಗಳಿವೆ, ಸರ್ಕಾರದವರು ಅದನ್ನು ಸರಿಪಡಿಸುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ: ಮಂತ್ರಿಗಳು ಬಂದಾಗ ಅವರು ಅರ್ಜಿ ಕೊಟ್ಟು ಕೇಳುತ್ತಾರೆ, ಕೊಡದೇ ಇದ್ದರೆ ಹೇಗೆ? ನಮ್ಮನ್ನು ಕರೆದು ಹಾರ ಹಾಕುತ್ತಾರೆ.

ಅಧ್ಯಕ್ಷರು: ಮಾನ್ಯ ಖರ್ಗೆಯವರೆ, ರೂರಲ್ ಪಾರ್ಟ್‌ನಲ್ಲಿ ಬಸ್‌ಷೆಲ್ಟರ್ ಮಾಡಬೇಕೆಂದು ಹೇಳಿದ್ದಾರೆ, ಆದರೆ ಟೌನ್‌ನವರು ನಮಗೆ ಓಟು ಕೊಟ್ಟಿದ್ದಾರೆ, ಅದಕ್ಕೆ ಪ್ರಾಹಿಬಿಟ್ ಮಾಡಿದ್ದಾರೆ, ಅಂಥ ಚಿಕ್ಕಪುಟ್ಟ ಲೋಪದೋಷಗಳನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಟೌನ್‌ನವರೂ ಕೂಡ ನಮಗೆ ಓಟು ಕೊಟ್ಟಿರುವುದಿಲ್ಲವೆ? ಮಾನ್ಯ ಶೆಟ್ಟರ್‌ರವರೇ, ತಾವು ಬೇಗ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇವತ್ತು ಇಷ್ಟೊಂದು ತೀವ್ರ ಗತಿಯಲ್ಲಿ ಬರಗಾಲ ಇದ್ದಂಥ ಸಂದರ್ಭದಲ್ಲಿ ಕುಡಿಯುವ ನೀರಿನ ಹಾಹಾಕಾರ ಇದ್ದಂಥ ಸಂದರ್ಭದಲ್ಲಿ, ಸರಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿತ್ತು. ಗಂಭೀರವಾಗಿ ತೆಗೆದುಕೊಂಡಿಲ್ಲವೆಂದು ನಾನು ಬಹಳ ಖೇದದಿಂದ ಹೇಳಬೇಕಾಗುತ್ತದೆ. ನಾನು ಮೊದಲೇ ಹೇಳಿದ ಪ್ರಕಾರ ಸರ್ಕಾರ ಈ ವಿಷಯಕ್ಕೆ ಸಂಬಂಧಪಟ್ಟಂತೆ ಗಾಢವಾದಂಥ ನಿದ್ರೆಯನ್ನು ಮಾಡುತ್ತಿದ್ದು, ಯಾರೂ ಇದರ ಬಗ್ಗೆ ಎಚ್ಚರಗೊಂಡಿಲ್ಲ. ನಾಳೆ ಇದರಿಂದ ಬಹಳಷ್ಟು ತೊಂದರೆಯಾಗುತ್ತದೆ. ನಾಳೆ ಇಡೀ ರಾಜ್ಯದಲ್ಲಿ ಹಾಹಾಕಾರ ಮತ್ತು ಕಾನೂನು ಸುವ್ಯವಸ್ಥೆಗೆ ತೊಂದರೆಯಾಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ಹಿಂದೆ ಗಾಢವಾಗಿ ನಿದ್ದೆ ಮಾಡುತ್ತಿರುವವರನ್ನು ನೋಡಿ, ಅವರು ಹೇಗೆ ಇದ್ದಾರೆ! ಈ ಕಡೆ, ಆ ಕಡೆ ಏನೂ ಅಲುಗಾಡದೆ ನಿದ್ದೆ ಮಾಡುತ್ತಿದ್ದಾರೆ. ಅವರಿಗೆ ನೀವು ಹೇಳದೆ ಬೇರೆ ಯಾರಿಗೋ ಹೇಳುತ್ತಿದ್ದೀರಿ.

ಶ್ರೀ ಎಂ.ಮಹದೇವ್: ಅವರು ಚಿಂತನಾಮಗ್ನರಾಗಿದ್ದಾರೆ, ನಿದ್ದೆ ಮಾಡುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು: ತಮ್ಮ ಪಕ್ಷದ ಸದಸ್ಯರು ಇನ್ನೂ ಮಾತನಾಡುವವರು ಇದ್ದಾರೆ. ಆದಷ್ಟು ಬೇಗ ಮುಗಿಸಿ. ನೀವು ಮಾತನಾಡಿ ಸಂತೋಷ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ, ಇವತ್ತು ಬರ ಕಾಮಗಾರಿ ಹಾಗೂ ಕುಡಿಯುವ ನೀರಿನ ಸಲುವಾಗಿ ತುರ್ತಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಶಾಸಕರು ಇವತ್ತು ತಮ್ಮ ಕ್ಷೇತ್ರದಲ್ಲಿ ಪ್ರವಾಸ ಮಾಡುವಂಥ

ಸಂದರ್ಭದಲ್ಲಿ ಅವರ ಗಮನಕ್ಕೆ ಬಂದಂಥ ವಿಷಯಗಳು, ಎಲ್ಲೆಲ್ಲಿ ಯಾವ ಕಾಮಗಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಕುಡಿಯುವ ನೀರಿನ ತೊಂದರೆ ಎಲ್ಲಿದೆ ಎನ್ನುವಂಥಾದ್ದು, ವಿದ್ಯುತ್ತಿನ ಅಭಾವ ಎಲ್ಲಿದೆ ಎನ್ನುವಂಥಾದ್ದು, ಅದಕ್ಕಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರೆ, ಈ ಕಾರ್ಯಗಳ ಅನುಷ್ಠಾನವಾಗಲಿಕ್ಕೆ ಬಹಳ ಅನುಕೂಲವಾಗುವ ದಿಶೆಯಲ್ಲಿ ಈ ಸಮಿತಿಯನ್ನು ಮಾಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಬೇಸಿಗೆ ಕಾಲ ಮುಗಿಸುವವರೆಗೂ ಜಿಲ್ಲಾಧಿಕಾರಿಗಳ ಹತ್ತಿರ ಒಂದು ಕೋಟಿ ರೂಪಾಯಿಗಳಷ್ಟು ಹಣ ಇರಬೇಕಾಗುತ್ತದೆ, ಏಕೆಂದರೆ, ಏನಾದರೂ ತುರ್ತಾಗಿ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಈ ಹಣ ಅವರ ಹತ್ತಿರ ಬ್ಯಾಲೆನ್ಸ್ ಇರುವಂತೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನಾನು ಈಗಾಗಲೇ ಹೇಳಿದ ಹಾಗೆ ಅವರು ಫೆಬ್ರವರಿ ತಿಂಗಳಲ್ಲಿ ಪತ್ರ ಬರೆದರೆ ಇನುವರೆಪಿಗೂ ರಾಜ್ಯ ಸರ್ಕಾರದಿಂದ ಅದಕ್ಕೆ ಏನೂ ರೆಸ್ಪಾನ್ಸ್ ಇಲ್ಲ. ಇದು ಆಗಬಾರದು. ಹೀಗಾಗಿ ಬರಗಾಲ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಅವರಲ್ಲಿ ಒಂದು ಕೋಟಿ ರೂಪಾಯಿ ಹಣ ಬ್ಯಾಲೆನ್ಸ್ ಉಳಿಯುವಂತೆ ಮಾಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಮತ್ತೊಂದು ವಿಚಾರ ಏನೆಂದರೆ, ವಿದ್ಯುತ್ತಿನ ಅಭಾವದ ಬಗ್ಗೆ ನಾನು ಈಗಾಗಲೇ ಮಾತನಾಡಿದ್ದೇನೆ, ಇದರ ಬಗ್ಗೆ ಸರ್ಕಾರದವರು ಬೇರೆ ರಾಜ್ಯಗಳಿಂದ ಪರ್ಚೇಸ್ ಮಾಡುವಂಥಾದ್ದು ಬೇಗನೆ ಆಗಬೇಕು ಏಕೆಂದರೆ, ಮುಂಬರುವ ದಿನಗಳಲ್ಲಿ ಈ ಏಪ್ರಿಲ್-ಮೇ-ಜೂನ್ ತಿಂಗಳುಗಳಲ್ಲಿ ಇವತ್ತು ಇರುವ ಗಂಭೀರ ಪರಿಸ್ಥಿತಿಗಿಂತ ಬಹಳ ದೊಡ್ಡ ಗಂಭೀರ ಪರಿಸ್ಥಿತಿ ಬರುತ್ತದೆ. ಈ ವಿದ್ಯುತ್ತಿನ ಕ್ಷಾಮದಿಂದಾಗಿ ಕುಡಿಯುವ ನೀರಿನ ಯೋಜನೆಗಳು ವಿಫಲವಾಗುತ್ತವೆ. ನಾನು ಈಗಾಗಲೇ ಹುಬ್ಬಳ್ಳಿ-ಧಾರವಾಡದ ಬಗ್ಗೆ ಮೆನ್ಷನ್ ಮಾಡಿದ್ದೆ, ಈ ಅವಳಿ ನಗರಗಳಿಗೆ ಒಂದು ತಾಸು ಅಥವಾ ಎರಡು ತಾಸು ಕರೆಂಟ್ ಹೋಯಿತು ಎಂದರೆ ಪುನಃ 4 ದಿವಸ 8 ದಿವಸ ನೀರಿನ ಸರಬರಾಜು ನಿಂತು ಹೋಗುತ್ತದೆ. ಗ್ರಾಮೀಣ ಭಾಗದಲ್ಲಿ ಇವತ್ತು ಈ ವಿದ್ಯುತ್ತಿನ ಮೂಲಕ ನೀರು ಸರಬರಾಜು ಮಾಡುವ ವ್ಯವಸ್ಥೆಯಿದೆ. ಇಂಥ ಸನ್ನಿವೇಶದಲ್ಲಿ ಆ ವಿದ್ಯುತ್ ಕಟ್ ಆಯಿತು ಎಂದರೆ ಲೋಡ್ ಶೆಡ್ಡಿಂಗ್ ಆಯಿತು ಎಂದರೆ ಕತೆ ಮುಗಿಯಿತು. ಆ ಕುಡಿಯುವ ನೀರಿನ ಯೋಜನೆ ಎಲ್ಲವೂ ಹೋಗಿ ಬಿಡುತ್ತವೆ. ಹೀಗಾಗಿ ಇವೆಲ್ಲಕ್ಕೂ ಒಂದಕ್ಕೊಂದು ಸಂಬಂಧವಿದೆ, ಅದಕ್ಕಾಗಿ ಕೆಪಿಟಿಸಿಎಲ್-ನವರು ಮತ್ತು ರಾಜ್ಯ ಸರ್ಕಾರದವರು ಇದರ ಬಗ್ಗೆ ಚಿಂತನೆ ಮಾಡಿ ಬೇರೆ ರಾಜ್ಯಗಳಿಂದ ವಿದ್ಯುತ್ತನ್ನು ಖರೀದಿಸುವುದಕ್ಕೆ ಆಲೋಚಿಸಬೇಕು ಮತ್ತು ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ, ವಿದ್ಯುತ್ತಿನ ಕ್ಷಾಮ ಭಯಂಕರವಾಗಿದ್ದು ಇಡೀ ರಾಜ್ಯದಲ್ಲಿ ಬಹಳಷ್ಟು ತೊಂದರೆಯಾಗುತ್ತದೆ. ಇದರಿಂದಾಗಿ ಬಹಳಷ್ಟು ತೊಂದರೆಗಳನ್ನು ರಾಜ್ಯ ಅನುಭವಿಸುತ್ತದೆ. ನೀರಿನ ಟ್ಯಾಂಕರ್‌ಗಳ ಮೂಲಕ ನೀರನ್ನು ಸರಬರಾಜು ಮಾಡಬೇಕಾಗಿದೆ, ಏಕೆಂದರೆ, ಕೆಲವು ಗ್ರಾಮಗಳಲ್ಲಿ ಎರಡು, ಐದು, ಕಿಲೋ ಮೀಟರ್ ನಡೆದುಕೊಂಡು ನೀರು ತರುವಂಥ ಪರಿಸ್ಥಿತಿ ಇದೆ, ಇಂಥ ಕಡೆ ಟ್ಯಾಂಕರ್‌ಗಳ ಮೂಲಕ ನೀರು ಕೊಡುವ ವ್ಯವಸ್ಥೆ ಮತ್ತು ಎಲ್ಲೆಲ್ಲಿ ಮೇವಿನ ಅಭಾವ ಇದೆ ಆ ಕಡೆ ಮೇವು ಸರಬರಾಜು ಮಾಡಬೇಕಾಗಿದೆ. ಗೋಶಾಲೆಗಳನ್ನು ತೆರೆಯುವಂಥಾದ್ದು ಮತ್ತು ಬರ ಕಾಮಗಾರಿ ಕೆಲಸಗಳನ್ನು ತಕ್ಷಣವೇ

ಪ್ರಾರಂಭ ಮಾಡತಕ್ಕಂಥದ್ದು, ಈ ಬಗ್ಗೆ ತಕ್ಷಣವೇ ಸರ್ಕಾರ ನಿರ್ಧರಿಸಬೇಕಾಗುತ್ತದೆ. ಕೂಡಲೇ ಆ ಕೆಲಸಗಳನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಪ್ರತಿ ಜಿಲ್ಲೆಗೂ ತಕ್ಷಣವೇ ಆರು ಕೋಟಿ ರೂಪಾಯಿಗಳನ್ನು ಈ ಬರ ಕಾಮಗಾರಿಗಳ ಸಲುವಾಗಿ ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ರಾಜ್ಯ ಸರ್ಕಾರಕ್ಕೆ ನಾನು ಒತ್ತಾಯಿಸುತ್ತೇನೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು, ಇದು ಕೇವಲ ಯಾರೇ ರಾಜಕೀಯ ವ್ಯಕ್ತಿಗಳ ಅಥವಾ ಯಾವುದೇ ಒಂದು ಪಕ್ಷದ ಭಾವನೆಯಲ್ಲ, ಇಡೀ ರಾಜ್ಯದ ಭಾವನೆಯನ್ನು ತಮ್ಮ ಮುಖೇನ ರಾಜ್ಯ ಸರ್ಕಾರಕ್ಕೆ ಹೇಳಬಯಸುತ್ತೇನೆ. ರಾಜ್ಯ ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಮುಂದೆ ದೊಡ್ಡ ಪ್ರಮಾಣದಲ್ಲಿ ಗೊಂದಲಗಳು ಹಾಗೂ ಕಾನೂನು ಸುವ್ಯವಸ್ಥೆಯ ಬಗ್ಗೆ ಅಡಚಣೆಗಳು ಈ ರಾಜ್ಯದಲ್ಲಿ ಉಂಟಾಗುವ ಸಂಭವ ಇದೆ. ಇಷ್ಟೆಲ್ಲಾ ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಇವುಗಳನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಾರೆನ್ನುವ ಭಾವನೆಯನ್ನು ವ್ಯಕ್ತ ಮಾಡುತ್ತಾ, ಈ ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ನಿಲುವಳಿ ಸೂಚನೆಯ ಮೂಲಕ ನಾನು ಕೇಳಿಕೊಂಡಾಗ ತಾವು ಇದನ್ನು ರೂಲ್ 69ರ ಮೇರೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಹೀಗಾಗಿ ಈ ವಿಚಾರಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, ನಾವು ಈ ನಿಲುವಳಿ ಸೂಚನೆಯನ್ನು ಕೊಡಲಿಕ್ಕೆ ಕಾರಣ ಈ ವಿಷಯದ ಗಂಭೀರತೆ, ಅದನ್ನು ಅರಿತು ತಾವೂ ಸಹಿತ ಈ ವಿಷಯವನ್ನು ಚರ್ಚೆ ಮಾಡಲು ರೂಲ್ 69ರಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಬಗ್ಗೆ ಚರ್ಚೆಯಾಗಲಿ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ಇದು ಸ್ವಾಗತಾರ್ಹವಾದ ವಿಚಾರ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ವಿಷಯ ಗಂಭೀರತೆಯಿಂದ ಕೂಡಿದೆ ಎಂದು ನಾನು ಹೇಳಿದಾಗ, ಕೆಲವರಿಗೆ ಒಂದು ಚಟ ಇರುತ್ತದೆ, ನಾವು ಆಡಳಿತದಲ್ಲಿರುವಾಗ ಬರಗಾಲ ಇರುವುದಿಲ್ಲ, ಜನತಾದಳದವರು ಏನಾದರೂ ಒಂದು ಸಾರಿ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಬರಗಾಲ ಬಂದು ಬಿಡುತ್ತದೆ ಎಂದು ಬಹಳ ಜನ ಹೇಳಿಕೊಳ್ಳುತ್ತಿದ್ದರು. 1983 ಹಾಗೂ 1985ರಲ್ಲಿ ಈ ಮಾತನ್ನು ಹೇಳುತ್ತಿದ್ದರು. ಈಗ ಅವರ ಕಣ್ಣಿಗೆ ಅವರೇ ಬೆರಳನ್ನು ಚುಚ್ಚಿಕೊಳ್ಳುವಂಥ ಸನ್ನಿವೇಶ ಬಂದಿದೆ. ನಾವು ಅಧಿಕಾರದಲ್ಲಿದ್ದಾಗ ಬಹಳ ಜನ "ಇವರು ಅಧಿಕಾರಕ್ಕೆ ಬಂದು ಬಿಟ್ಟರೆ ಮಳೆ ಬರುವುದಿಲ್ಲ" ಎಂದು ಹೇಳುತ್ತಿದ್ದರು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾವು ಇದೇ ರೀತಿಯ ಮಳೆ ಬಾರದೆ ಇರತಕ್ಕಂಥ ಸನ್ನಿವೇಶದಲ್ಲಿ ರಾಜ್ಯದ ಜಲಾಶಯಗಳಲ್ಲಿ ನೀರು ಇಲ್ಲದೆ ಇರತಕ್ಕಂಥ ಸನ್ನಿವೇಶದಲ್ಲಿ, ವಿದ್ಯುತ್ತಿನ ಕೊರತೆ ಮತ್ತು ಅಭಾವ ರಾಜ್ಯಗಳಲ್ಲಿ ಕಂಡಂಥ ಸನ್ನಿವೇಶಗಳಲ್ಲಿ ನಮ್ಮ ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮಗಳನ್ನು ಇವತ್ತು ಆಡಳಿತ ನಡೆಸತಕ್ಕಂಥ ಮಹನೀಯರುಗಳು

ನೋಡಬೇಕು ಎಂಬುದು ನನ್ನ ಮೊದಲನೆ ಒತ್ತಾಯ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದ್ದು ಅವರು ಉತ್ತರ ಕರ್ನಾಟಕಕ್ಕೂ ಮೊನ್ನೆ ಹೋಗಿ ಬಂದಿದ್ದಾರೆ. ನನಗೆ ಗೊತ್ತಿರುವ ಹಾಗೆ ಹುಬ್ಬಳ್ಳಿಯಲ್ಲಿ ಹತ್ತು ದಿವಸಗಳಿಗೊಮ್ಮೆ ನೀರನ್ನು ಕೊಡುತ್ತಿದ್ದಾರೆ, ಬಹುಶಃ ಇನ್ನೊಂದು ಹದಿನೈದು ದಿನ ಹೋದರೆ ಮೈಸೂರು ನಗರದಲ್ಲಿ ದೊಡ್ಡ ಜಲಕ್ಷಾಮವನ್ನು ನಾವು ನೋಡುತ್ತೇವೆ. ಈ ವರ್ಷ ಕನ್ನಂಬಾಡಿ ಕಟ್ಟೆಯಲ್ಲಿ ನೀರು ಕಡಿಮೆ ಇದೆ ಎಂದು ನಮಗೆ ತಿಳಿದಿರುವ ವಿಚಾರ. ಬಹುತೇಕ ಪಟ್ಟಣ ಪ್ರದೇಶಗಳಲ್ಲಿ ಮೊದಲನೇ ಬಾರಿಗೆ ಬಿಜಾಪುರದಂಥ ನಗರಗಳಲ್ಲಿ ಹದಿನೈದು ದಿವಸಗಳಿಗೊಮ್ಮೆ, ವಿಶೇಷವಾಗಿ ಉತ್ತರ ಕರ್ನಾಟಕದ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಇವತ್ತು ಕುಡಿಯುವ ನೀರಿಗೆ ತೀವ್ರವಾದ ಅಭಾವ ಇರುವುದನ್ನು ನಾವು ನೋಡುತ್ತಿದ್ದೇವೆ. ನನಗೆ ಏನು ಭಯ ಇದೆ ಎಂದರೆ, ಇದೇ ಪರಿಸ್ಥಿತಿ ಮುಂದುವರೆದರೆ, ಈ ಜಲಕ್ಷಾಮ ಮುಂದುವರೆದರೆ ಬಹಳ ಹೆಚ್ಚಿನ ಪ್ರಮಾಣದಲ್ಲಿ ಸಾಂಕ್ರಾಮಿಕ ರೋಗಗಳು ಹಬ್ಬುವ ಸಾಧ್ಯತೆಯಿರುವುದರಿಂದ, ಸರ್ಕಾರ ಇದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳಬೇಕು, ಅದಕ್ಕೋಸ್ಕರವಾಗಿ ನಾನು ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಬೇರೆ ಬೇರೆ ರಾಜ್ಯಗಳಿಗೆ, ಪಟ್ಟಣ ಪ್ರದೇಶಗಳಿಗೆ ಜನ ಗುಳೇ ಹೋಗಿರುವಂಥಾದ್ದು, ಕಳೆದ ವರ್ಷ ಬರಗಾಲದ ಕೆಲಸಗಳಿಗೆ ಎಂದೇನು ಕಂದಾಯ ಸಚಿವರು ಹಣವನ್ನು ಬಿಡುಗಡೆ ಮಾಡಿದ್ದರೋ ಆ ಹಣವನ್ನು ಖರ್ಚು ಮಾಡಿಲ್ಲ. ಆ ಹಣ ಬಿಡುಗಡೆ ಸಹಿತ ಆಗಿಲ್ಲ. 2000-2001ನೇ ಸಾಲಿನಲ್ಲಿ ಬರ ಪರಿಹಾರದ ಕೆಲಸವಿರಬಹುದು ಅಥವಾ ಕೆಲವು ಕಡೆ ಹೆಚ್ಚು ಮಳೆ ಬಂದು ಕೆಲಸ ತೆಗೆದುಕೊಳ್ಳಿ ಎಂದು ಜಿಲ್ಲಾಧಿಕಾರಿಗಳು ಆದೇಶ ಕೊಟ್ಟ ಮೇಲೆ ಕೆಲಸ ಮಾಡಿದ್ದಾರೆ, ಆ ಕೆಲಸ ಮಾಡಿದಂಥ ಗುತ್ತಿಗೆದಾರರು ಇವತ್ತು ಈ ಸರ್ಕಾರಕ್ಕೆ ಶಾಪ ಹಾಕಿ ಸಾಲವನ್ನು ಮಾಡಿ ಬಡ್ಡಿ ಕಟ್ಟಿಕೊಂಡು ನೇಣು ಹಾಕಿಕೊಳ್ಳುವ ಸ್ಥಿತಿಗೆ ಇವತ್ತು ಹೋಗುತ್ತಿದ್ದಾರೆ.

೩.೪೦ ಪಿ.ಎಂ.

ಒಂದು ಕಡೆ ಕೆಲಸ ಮಾಡುತ್ತೇವೆಂದು ಇವರು ಹೇಳುತ್ತಾರೆ. ಆದರೆ, ಆ ಕೆಲಸಗಳೆಲ್ಲವನ್ನೂ ಅರ್ಧ ಮಾಡಿ ನಿಲ್ಲಿಸಿದ್ದಾರೆ. ಕಳೆದ ವರ್ಷ ಆಗಿರತಕ್ಕಂಥ ಕೆಲಸಗಳ ಬಗ್ಗೆ ಈಗ ಹೇಳುತ್ತಿದ್ದೇನೆ. ಈ ವರ್ಷ ಇಡೀ ರಾಜ್ಯದಲ್ಲಿ ಇರತಕ್ಕಂಥ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಸರ್ಕಾರ ಯಾವುದೇ ರೀತಿಯ ಸಿದ್ಧತೆಯನ್ನು ಮಾಡಿಕೊಂಡಿಲ್ಲ. ಇಂಥ ಪರಿಸ್ಥಿತಿ ಎಲ್ಲಾ ಕಡೆ ಇದ್ದರೂ ಕೂಡ ಇವತ್ತಿನ ದಿವಸ ಜಿಲ್ಲಾ ಮಂತ್ರಿಗಳು ಏನು ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಮ್ಮಲ್ಲಿ ಇವತ್ತಿನ ದಿವಸ 27 ಜನ ಜಿಲ್ಲಾ ಮಂತ್ರಿಗಳಿದ್ದಾರೆ. ಆದರೆ, ಇವತ್ತಿನ ದಿವಸ 27 ಜಿಲ್ಲೆಗಳಲ್ಲಿ ಜಿಲ್ಲಾ ಮಂತ್ರಿಗಳು ಇರತಕ್ಕಂಥ ತಾಲ್ಲೂಕು ಕೇಂದ್ರಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಯಾವರೀತಿ ಇದೆ ಎಂಬುದನ್ನು ಇದುವರೆಗೂ ಸಹಿತ ಒಬ್ಬ ಮಂತ್ರಿ ಕೂಡ ರಿವ್ಯೂ ಮಾಡಿರತಕ್ಕಂಥಾದ್ದನ್ನು ನಾನು ಪತ್ರಿಕೆಗಳಲ್ಲಿ ಗಮನಿಸಿಲ್ಲ. ಯಾರಾದರೂ ಪುಣ್ಯಾತ್ಮ ಗೌರವಾನ್ವಿತ ಮಂತ್ರಿಗಳು ಏನಾದರೂ ಈ ಕೆಲಸವನ್ನು ಮಾಡಿದ್ದರೆ, ನಾನು ಅವರಿಗೆ

ಖಂಡಿತವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಸಾರಾಸಗಟಾಗಿ ತಾವು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ಹಾವೇರಿ, ಬೆಳಗಾಂ ಮತ್ತು ಅರೆ ಮಲೆನಾಡು ಪ್ರದೇಶ ಹಾಗೂ ಖಾನಾಪುರ ಪ್ರದೇಶಗಳಲ್ಲಿ ಇವತ್ತಿನ ದಿವಸ ಮಳೆ ಕಡಿಮೆಯಾಗಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆ, ಚಿಕ್ಕಮಗಳೂರು ಪ್ರದೇಶ, ಮೂಡಿಗೆರೆ ಮತ್ತು ಮಂಗಳೂರಿನಲ್ಲಿ ಬೇಸಿಗೆಯಿಂದ ಕುಡಿಯುವ ನೀರಿನ ಅಭಾವವನ್ನು ನಾವು ನೋಡುತ್ತಿದ್ದೇವೆ. ಹಾಗೆಯೇ ಗದಗ್, ಧಾರವಾಡ ಮತ್ತು ರಾಯಚೂರು ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ''ಗಾಯದ ಮೇಲೆ ಬರೆ ಹಾಕಿದ ಹಾಗೆ'' ಇವತ್ತಿನ ದಿವಸ ಏನಾಗಿದೆ ಎಂದರೆ, ಒಂದು ಕಡೆ ಮಳೆ ಕಡಿಮೆಯಾಗಿ ಕುಡಿಯುವ ನೀರಿಗೆ ತೊಂದರೆ ಆಗಿದ್ದರೆ, ಮತ್ತೊಂದು ಕಡೆ ವಿದ್ಯುತ್ ಅಭಾವ ಉಂಟಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಯಾವ ರೀತಿಯಾದಂಥ ವರದಿಗಳು ಬರುತ್ತಿವೆಯೋ ನನಗಂತೂ ಗೊತ್ತಿಲ್ಲ. ಇವತ್ತಿನ ದಿವಸ ಒಂದು ದಿವಸಕ್ಕೆ ಎರಡು ಗಂಟೆಗಳ ಕಾಲ ಥ್ರೀ ಫೇಸ್ ಕರೆಂಟ್‌ನ್ನು ಮಾತ್ರ ಕೊಡುತ್ತಿದ್ದಾರೆ. ಈ ರೀತಿಯಾದರೆ ಮಿನಿ ವಾಟರ್ ಸಪ್ಲೈ ಯಾವರೀತಿ ಕೆಲಸ ಮಾಡಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ 400 ರಿಂದ 500 ಅಡಿ ಆಳಕ್ಕೆ ಹೋಗಿರತಕ್ಕಂಥ ಬೋರ್‌ವೆಲ್‌ಗಳಿಗೆ ಹ್ಯಾಂಡ್ ಪಂಪ್ ಹಾಕಿ ಎಷ್ಟು ಒತ್ತಿದರೂ ಸಹ ನೀರು ಬರುತ್ತಿಲ್ಲ. ಇವತ್ತಿನ ದಿವಸ ಬಹುತೇಕ ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ, ಎನ್.ಆರ್.ಡಬ್ಲ್ಯೂ.ಎಸ್. ಅಥವಾ ಮಿನಿ ವಾಟರ್ ಸಪ್ಲೈ ಮೇಲೆ ಅವಲಂಬಿತರಾಗಿದ್ದಾರೆ. ಇವತ್ತಿನ ದಿವಸ ವಿದ್ಯುತ್ ಸರಿಯಾಗಿ ಸರಬರಾಜು ಆಗದೇ ಹೋದರೆ ಆ ಜನರು ಏನು ಮಾಡಬೇಕು? ಕೃಷಿಗೆ ಸಂಬಂಧಪಟ್ಟ ಹಾಗೆ ವಿದ್ಯುತ್ ಸರಬರಾಜು ಮಾಡುವುದಿರಲಿ, ಕೊನೆಯಪಕ್ಷ ಕುಡಿಯುವ ನೀರಿಗೂ ಸಹಿತ ವ್ಯವಸ್ಥೆ ಮಾಡದೇ ಇರತಕ್ಕಂಥ ಸ್ಥಿತಿಗೆ ಈ ಸರ್ಕಾರ ಹೋಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಅನೇಕ ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ. ಹಣಕಾಸಿನ ಇಲಾಖೆಯನ್ನು ಹೊಂದಿರತಕ್ಕಂಥ ಮಾನ್ಯ ಮುಖ್ಯಮಂತ್ರಿಯವರಿಂದ ಈ ಸದನದ ಮತ್ತು ರಾಜ್ಯದ ಪರವಾಗಿ ಇದಕ್ಕೆ ಸಂಬಂಧಪಟ್ಟಂತೆ ವಿವರಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ನಿಮ್ಮ ಹಣಕಾಸಿನ ಪರಿಸ್ಥಿತಿ ಏನು ಎಂಬುದು ನಮಗೆ ಇನ್ನೂ ಅರ್ಥವಾಗುತ್ತಿಲ್ಲ. ನನಗೆ ತಿಳಿದಮಟ್ಟಿಗೆ, ನನ್ನ ಹತ್ತಿರ ಇರತಕ್ಕಂಥ ಮಾಹಿತಿ ಪ್ರಕಾರ ಈ ವರ್ಷ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರಲ್ಲಿ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಸುಮಾರು 600 ರಿಂದ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಕೊರತೆ ಇದೆ. ಈ ಕೊರತೆಗಳಿಗೆ ತಾವು ನೂರೆಂಟು ಕಾರಣಗಳನ್ನು ಕೊಡಬಹುದು. ನಬಾರ್ಡ್ ಸಂಸ್ಥೆಯಿಂದ ಬಿಡುಗಡೆ ಆಗತಕ್ಕಂಥ ಹಣವನ್ನು ತೆಗೆದುಕೊಂಡು

ನಬಾರ್ಡಿನ I ರಿಂದ 7ನೇ ಯೋಜನೆಯ ಅನೇಕ ಕೆಲಸಗಳನ್ನು ಪ್ರಾರಂಭ ಮಾಡಿದ್ದೀರಿ. ಆದರೆ, ಇವತ್ತಿನ ದಿವಸ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಸ್ಥಿತಿಗೆ ಹೋಗಿದ್ದಾರೆ. ನಬಾರ್ಡ್ ಕೇಂದ್ರ ಸರ್ಕಾರದ ಒಂದು ಸಂಸ್ಥೆ. ಯಾವುದೇ ಒಂದು ಕೆಲಸಕ್ಕೆ ಮೊದಲು ಕ್ಯಾಬಿನೆಟ್ ಅನುಮತಿ ಪಡೆದುಕೊಂಡು ಕಳುಹಿಸಿದ ಮೇಲೆ ತಾಂತ್ರಿಕ ಅನುಮತಿ ಸಿಗುತ್ತದೆ. ತದನಂತರ, ಹಣಕಾಸು ಬಿಡುಗಡೆಯಾಗುತ್ತದೆ. ಈಗ ಕೆಲಸಗಳು ಆಗುತ್ತಿವೆ, ಆದರೆ ಈ ಕೆಲಸಗಳೆಲ್ಲವೂ ಕೂಡ ಅರ್ಧಕ್ಕೆ ನಿಂತು ಹೋಗಿವೆ. ಸುಮಾರು 3 ರಿಂದ 5 ಕೋಟಿ ರೂಪಾಯಿಗಳವರೆಗೆ ಬಾಕಿ ಇರುವ ಕಡೆ ಕೇವಲ 20 ರಿಂದ 30 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. 'ಬಕಾಸುರನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆಯಂತೆ' ಹಣ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ಪರ್ಸೆಂಟೇಜ್ ಸಹ ಕೊಡಬೇಕಾಗಿದೆ. ಇನ್ನು ಎಕ್ಸಿಕ್ಯುಟೀವ್ ಇಂಜಿನಿಯರ್ ಇಷ್ಟು ಹಣದಲ್ಲಿ ಯಾರಿಗೆ ಕೊಡುತ್ತಾರೆ ಅಥವಾ ಕೊಡುವುದಿಲ್ಲ ಎನ್ನತಕ್ಕಂಥಾದ್ದು ನನಗಂತೂ ಅರ್ಥವಾಗುತ್ತಿಲ್ಲ. ನಬಾರ್ಡ್ ಸಂಸ್ಥೆಯಿಂದ ಸಾಲದ ರೂಪದಲ್ಲಿ ಬಂದಿರತಕ್ಕಂತ ಹಣವನ್ನು, ನನಗೆ ಗೊತ್ತಿರುವ ಹಾಗೆ ಹಣಕಾಸಿನ ಇಲಾಖೆಯಿಂದ ಮುಂಗಡವಾಗಿ ಕೊಟ್ಟಿರುತ್ತದೆ. ನಂತರ, ರೀ-ಇಂಬರ್ಸ್‌ಮೆಂಟ್ ಮಾಡಿಕೊಳ್ಳುತ್ತಾರೆ. ಅದೂ ಕೂಡ ಕಳೆದ ಆರು ತಿಂಗಳಿಂದ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಿಲ್ಲ. ಇನ್ನೊಂದು ಕಡೆ ಆದರೆ ಪ್ಲ್ಯಾನ್ ಸ್ಕೀಂನಲ್ಲಿರತಕ್ಕಂಥ ಉಪಾಧ್ಯಾಯರ ಸಂಬಳವನ್ನು ಕಳೆದ ಮೂರು ತಿಂಗಳಿಂದ ಕೊಡುವುದಕ್ಕೆ ಇವರಿಗೆ ಆಗಿಲ್ಲ. ಅಂಗನವಾಡಿ, ಅಸಿಸ್ಟೆಂಟ್ ಡೈರೆಕ್ಟರ್‌ಗಳಿಗೂ ಸಹ ಸಂಬಳ ಕೊಟ್ಟಿಲ್ಲ. ಹಾಗೆಯೇ, ಪ್ಲ್ಯಾನ್‌ನಲ್ಲಿರತಕ್ಕಂಥ ವೈದ್ಯರ ಸಂಬಳವನ್ನು ಕೊಡುವುದಕ್ಕೆ ಇವರಿಂದ ಆಗಿಲ್ಲ. ಜಿಲ್ಲಾ ಆಸ್ಪತ್ರೆಯ ವೈದ್ಯರುಗಳಿಗೆ ಸಂಬಳ ಕೊಡದೇ ಇರತಕ್ಕಂಥ ಅಂಕಿ-ಅಂಶವನ್ನು ನಾನು ನಿಮಗೆ ಕೊಡುತ್ತೇನೆ. ಇವತ್ತಿನ ದಿವಸ ಜಿಲ್ಲಾ ಆಸ್ಪತ್ರೆಯಲ್ಲಿರತಕ್ಕಂಥ ವೈದ್ಯರುಗಳು ಬಂದು, ಈ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಹಾಗೆಯೇ, ನಮ್ಮ ಹತ್ತಿರ ಉಪಾಧ್ಯಾಯರು ಬಂದು ಕಿರಾಣಿ ಅಂಗಡಿಗಳಲ್ಲಿ ಸಾಲ ಮಾಡಿ ಜೀವನ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ: ಜಿಲ್ಲಾ ಮಂತ್ರಿಗಳಾದ ನಾವು ಇದುವರೆಗೂ ರಿವ್ಯೂ ಮಾಡುತ್ತಿದ್ದೇವೆ. ಆದರೆ, ಇದುವರೆಗೂ ಯಾರೊಬ್ಬ ವೈದ್ಯರಾಗಲೀ ಅಥವಾ ಶಿಕ್ಷಕರಾಗಲೀ ನಮ್ಮ ಹತ್ತಿರ ಬಂದು ನನಗೆ ಸಂಬಳ ಬಂದಿಲ್ಲವೆಂದು ಹೇಳಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಅದು ನಿಮಗೆ ಗೊತ್ತಿಲ್ಲ ಬಿಡಿ. ಶಿಕ್ಷಕರಿಗೆ ಮತ್ತು ಪಶು ಆಸ್ಪತ್ರೆಯ ಡಾಕ್ಟರ್‌ಗಳಿಗೆ ಮತ್ತು ದಲಾಯತ್‌ಗಳಿಗೆ ಕಳೆದ ಮೂರು ತಿಂಗಳಿಂದ ಸಂಬಳ ಕೊಟ್ಟಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಕಾರ್ಯಕರ್ತೆಯರು ಬಹಳ ಬಡವರಾಗಿದ್ದು, ಅವರಿಗೆ ಒಂದು ತಿಂಗಳ ಸಂಬಳ ಕೊಡದೇ ಇದ್ದರೂ ಕೂಡ ಕಷ್ಟವಾಗುತ್ತದೆ. ಆದರೆ ಅವರಿಗೆ ಸಂಬಳ ಕೊಟ್ಟಿಲ್ಲವೆಂಬ ವಿಚಾರ ಇದುವರೆಗೂ ನಮ್ಮ ಗಮನಕ್ಕೆ ಬಂದಿಲ್ಲ. ಕೆಲವು ಕಡೆ ಇರಬಹುದೇನೋ, ಅದೂ ಸಹ ನಮ್ಮ ಗಮನಕ್ಕೆ ಬಂದಿಲ್ಲ.

ಅಧ್ಯಕ್ಷರು: ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯದಾಗಿ ಹೇಳುವುದು ಏನೆಂದರೆ, ಸನ್ಮಾನ್ಯ ದೇಶಪಾಂಡೆಯವರು ಹಣಕಾಸಿನ ಮಂತ್ರಿಗಳಲ್ಲ. ಆದ್ದರಿಂದ ಈ ವಿಚಾರ ಅವರಿಗೆ ಗೊತ್ತಿರುವುದಿಲ್ಲ. ಅವರು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಕೂಡ ಮಾಡುವುದಿಲ್ಲ. ಅವರು ಬುದ್ಧಿವಂತ ಮತ್ತು ಚಾಣಾಕ್ಷ ಮಂತ್ರಿಗಳು, ಇದನ್ನು ಅವರು ತಿಳಿದುಕೊಳ್ಳಬೇಕಾಗಿತ್ತು. ಆದರೆ, ತಿಳಿದುಕೊಳ್ಳುವುದಕ್ಕೆ ಹೋಗಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಾವು ರೆಗ್ಯುಲರ್ ಆಗಿ 15 ದಿವಸಕ್ಕೆ ಒಂದು ಸಾರಿ ರಿವ್ಯೂ ಮಾಡುತ್ತೇವೆ. We have given powers to Tahasildars to sanction water supply and employment on the spot ಕುಡಿಯುವ ನೀರಿಗೋಸ್ಕರ ಮತ್ತು ಎಂಪ್ಲಾಯ್‌ಮೆಂಟ್‌ಗೋಸ್ಕರ ಸ್ಪಾಟ್‌ನಲ್ಲಿಯೇ ಹಣ ರಿಲೀಸ್ ಮಾಡುವುದಕ್ಕೆ ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಯಾವ ತಾಲ್ಲೂಕಿನಲ್ಲಿ ಈ ರೀತಿ ಆಗಿದೆ ಎಂಬುದನ್ನು ಮಾನ್ಯ ಸಿಂಧ್ಯರವರು ಹೇಳಬೇಕು. ಅವರಿಗೆ ಅಲಿಗೇಷನ್ ಮಾಡುವುದಕ್ಕೆ ಅಧಿಕಾರ ಇದೆ. I don't want to come in the way. But let it be specific.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅದ್ಯಕ್ಷರೆ, ಮಾನ್ಯ ದೇಶಪಾಂಡೆಯವರು ಬಹಳ ಪ್ರಜಾ ಪ್ರಭುತ್ವದ ಮೌಲ್ಯಗಳಿಗೆ ಗೌರವ ಕೊಡತಕ್ಕಂತವರು. ನನ್ನ ಹಕ್ಕಿನ ಬಗ್ಗೆ ಮಾತನಾಡಿದ್ದಾರೆ. ನಾನು ಅವರಿಗೆ ನನ್ನ ಧನ್ಯವಾದಗಳರ್ಪಿಸುತ್ತೇನೆ. ಹಣಕಾಸಿನ ಮಂತ್ರಿಗಳಾಗಿರತಕ್ಕಂಥ ಮಾನ್ಯ ಮುಖ್ಯಮಂತ್ರಿಯವರಿಗೆ ಈ ವಿಚಾರ ಗೊತ್ತಿದೆ. ಆದರೆ, ಅವರೇಕೆ ಮೌನವಾಗಿ ಕುಳಿತು ಕೊಂಡಿದ್ದಾರೆ? ಏಕೆಂದರೆ ನಾನು ಸತ್ಯವನ್ನು ಮಾತನಾಡುತ್ತಿದ್ದೇನೆ. ಕಳೆದ ಮೂರು ತಿಂಗಳಿಂದ ನನ್ನ ಜಿಲ್ಲೆಯಲ್ಲಿ ಪ್ಲ್ಯಾನ್ ಸ್ಕೀಂನಲ್ಲಿ ವೈದ್ಯರಿಗೆ ಮತ್ತು ಉಪಾಧ್ಯಾಯರಿಗೆ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಬಳ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಯಾವ ಆಸ್ಪತ್ರೆಯ ವೈದ್ಯರಿಗೆ ಎಂಬುದನ್ನು ಹೇಳಿ? ಹಾಗೆಯೇ ಯಾವ ಪ್ಲ್ಯಾನ್ ಸ್ಕೀಂನಲ್ಲಿ ಕೊಡಬೇಕಾಗಿದೆ ಎಂಬುದನ್ನು ಹೇಳಿ? ಏಕೆಂದರೆ, ಕೆಲವೊಂದು ಪ್ಲ್ಯಾನ್ ಸ್ಕೀಂ ಅಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಸರ್ಕಾರಿ ಆಸ್ಪತ್ರೆಯ ವೈದ್ಯರ ಸಂಬಳದ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ತಾವು ನನಗೆ ಶೌಟ್ ಮಾಡುವುದರಿಂದ ನಾನೇನು ಹೆದರಿ ಕುಳಿತುಕೊಳ್ಳುವುದಿಲ್ಲ. Why do you shout?

ಶ್ರೀ ಕಾಗೋಡು ತಿಮ್ಮಪ್ಪ: ತಾವು ಹಿರಿಯ ಸದಸ್ಯರು. ವೈದ್ಯರಿಗೆ ಸಂಬಳ ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಿ. ಇವತ್ತಿನ ದಿವಸ ಯಾವುದಾದರೊಂದು ಸ್ಕೀಂನಲ್ಲಿ ಕೊಡುವುದಕ್ಕೆ ಆಗದೇ

ಇರಬಹುದು.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ,

ಶ್ರೀ ಟಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಾನು ಇಬ್ಬರಿಗೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಸಿಂಧ್ಯಾರವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಇವತ್ತು ನಾನು ಕೇಂದ್ರಸರ್ಕಾರದ ಬಗ್ಗೆ ಟೀಕೆ ಮಾಡುವುದಕ್ಕೆ ನಿಂತಿಲ್ಲ. About Rs.400 to 500 crores under devolution of funds from the Central Government has not come to Karnataka. ಪ್ರತಿಯೊಂದು ರಾಜ್ಯಕ್ಕೂ ಇದರ ಪರಿಣಾಮವಾಗಿದೆ. ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಸುಮಾರು 500 ಕೋಟಿ ರೂಪಾಯಿಗಳಷ್ಟು devolutionನಿಂದ ಬರಬೇಕಾಗಿದೆ. This situation is for the entire country. There are so many reasons. You should understand. ಆದರೂ ಸಹ ಕರ್ನಾಟಕ ರಾಜ್ಯಕ್ಕೆ ಕೇಂದ್ರಸರ್ಕಾರ ಅನ್ಯಾಯ ಮಾಡಿದೆ ಎಂದು ನಾನು ಹೇಳುತ್ತಿಲ್ಲ. It is an all-India Phenomenon. This is the situation. These are facts. We are not going to overdraft, Without going to overdraft, we are managing our finances to the best; ಹಾಗಾಗಿ ವಿಶ್ವಬ್ಯಾಂಕ್‌ನವರು "the best managed transparent State is Karnataka" ಎಂದು ಹೇಳಿದ್ದಾರೆ. ಈ ರೀತಿ ಇಲ್ಲದೇ ಇದ್ದರೆ ಅವರೇಕೆ ಹೇಳುತ್ತಿದ್ದರು?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸುಮಾರು ಎರಡೂವರೆ ಗಂಟೆಗಳವರೆಗೆ ಮಾತನಾಡಿದ್ದಾರೆ. ಮಾನ್ಯ ಸಿಂಧ್ಯರವರು ಈಗ ಮಾತನಾಡಲು ಪ್ರಾರಂಭ ಮಾಡಿದ್ದಾರೆ. ಯಾವುದಾದರೊಂದು ವಿಚಾರಗಳ ಬಗ್ಗೆ ಸಮಸ್ಯಾತ್ಮಕವಾಗಿರತಕ್ಕಂಥಾದ್ದನ್ನು ಅವರು ನಮೂದಿಸಿದಾಗ, ನಾನು ತಕ್ಷಣ ಅದಕ್ಕೆ ಕಾಂಟ್ರಾಡಿಕ್ಟ್ ಮಾಡದೇ ಹೋದರೆ, ನೀವು ಹೇಳಿರತಕ್ಕಂಥದ್ದನ್ನೆಲ್ಲಾ ಒಪ್ಪಿಕೊಂಡಿದ್ದೇನೆ ಎಂದಲ್ಲ. ಅದನ್ನು ಯಾವಾಗ ನಿರಾಕರಿಸಬೇಕೆಂಬುದಕ್ಕೆ ನನ್ನ ಟರ್ನ್‌ಗೆ ನಾನು ಕಾಯುತ್ತೇನೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್.ತಹಸೀಲ್ದಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಭಾನಾಯಕರಲ್ಲಿರತಕ್ಕಂಥ ಸಂಪ್ರದಾಯವನ್ನು ಅವರ ಸಚಿವ ಸಂಪುಟದ ಸಹೋದ್ಯೋಗಿಗಳೂ ಸಹ ಪರಿಪಾಲಿಸಿದರೆ ನನಗೆ ಬಹಳ ಅನುಕೂಲವಾಗುತ್ತದೆ. ಆಗ ನಾನು ನಿಮಗೆ ಚಿರಋಣಿಯಾಗಿರುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ: ಇಲ್ಲಿ ನಾವು, ನೀವೂ ಕೂಡ ಕೆಲಸ ಮಾಡಿದ್ದೇವೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ದೇಶಪಾಂಡೆಯವರೂ ಸಹ ವಿರೋಧಪಕ್ಷದ ನಾಯಕರಾಗಿ ಸುಮಾರು ಮೂರ್ನಾಲ್ಕು ವರ್ಷ ಕೆಲಸ ಮಾಡಿದ್ದಾರೆ. ಆದ್ದರಿಂದ ಅವರಿಗೆ ಹೇಳಿಕೊಡಬೇಕಾಗಿರತಕ್ಕಂಥಾದ್ದು ಏನೂ ಇಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇದು ನನ್ನ ದೌರ್ಭಾಗ್ಯ, ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಕುಳಿತುಕೊಂಡಿದ್ದಾರೆ. ಆದರೆ, ಮಾನ್ಯ ದೇಶಪಾಂಡೆಯವರು ವಿರೋಧಪಕ್ಷದ ನಾಯಕರಾಗಿದ್ದಂಥ ಸಂದರ್ಭದಲ್ಲಿ ನಾನು ಅವರ ಉಪನಾಯಕನಾಗಿದ್ದೆ. ಅದು ನನ್ನ ದೌರ್ಭಾಗ್ಯ. ಏನು ಮಾಡುವುದಕ್ಕೆ ಆಗುತ್ತದೆ ಹೇಳಿ?

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಿಂಧ್ಯರವರು ಇವತ್ತು ಮೊದಲಬಾರಿಗೆ ನನ್ನ ದೌರ್ಭಾಗ್ಯ ಎಂದು ಹೇಳಿದ್ದಾರೆ. ಏಕೆಂದರೆ, ಅವರು ನನ್ನನ್ನು ಪ್ರತಿ ಸಲ ಭೇಟಿ ಆದಾಗ ನನ್ನ ಸೌಭಾಗ್ಯ ಎಂದು ಹೇಳುತ್ತಿದ್ದರು. ಆದರೆ, ಇವತ್ತು ದೌರ್ಭಾಗ್ಯ ಎಂದು ಹೇಳುತ್ತಿರುವುದಕ್ಕೆ ನನಗೆ ಸಂತೋಷವಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನನ್ನ ಸೌಭಾಗ್ಯದಿಂದ ನಾನು ಈ ಪಾರ್ಟಿಯಲ್ಲಿದ್ದೇನೆ, ಈಗ ವಿಷಯಾಂತರವಾಗುವುದು ಬೇಡ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ದೇಶಪಾಂಡೆಯವರು ನಿಮ್ಮ ಸರ್ಕಾರದಲ್ಲಿದ್ದಾಗ ಗಡ್ಡವನ್ನು ಬಿಟ್ಟಿದ್ದರು, ಈಗ ನಮ್ಮ ಜೊತೆಯಲ್ಲಿರುವುದರಿಂದ ಗಡ್ಡವನ್ನು ತೆಗೆದಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನೂ ಕೂಡ ಮಾತನಾಡಬಲ್ಲೆ, ತಾವು ದಯವಿಟ್ಟು ಅದಕ್ಕೆಲ್ಲಾ ಹೋಗಬೇಡಿ. ಇದು ತಮ್ಮ ಘನತೆಗೆ ಸರಿಯಲ್ಲ ಸ್ವಾಮಿ, ನಾನು ಸೌಭಾಗ್ಯ ಮತ್ತು ದೌರ್ಭಾಗ್ಯಗಳ ಬಗ್ಗೆ ಅನೇಕ ವಿಚಾರಗಳನ್ನು ಹೇಳಬಹುದು. It is not correct, ಮೊನ್ನೆ ತಾನೇ ತಾವು ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದೀರಿ.

ಶ್ರೀ ಆರ್.ವಿ.ದೇಶಪಾಂಡೆ: ನಾನು ಆ ಬಗ್ಗೆ ಏನೂ ಹೇಳಲಿಲ್ಲ, ತಾವು ದೌರ್ಭಾಗ್ಯವೆಂದು ಹೇಳಿದ್ದಕ್ಕೆ ನಾನು ಹೇಳಿದ್ದೇನೆ. ನಾನು ಏನನ್ನೂ ಮಾತನಾಡುವುದಕ್ಕೆ ಹೋಗಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಏತಕ್ಕೆ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಸಂಬಳವನ್ನು ಕೊಟ್ಟಿಲ್ಲ. ಆಡಳಿತ ಪಕ್ಷದವರು ಕೇಂದ್ರ ಸರ್ಕಾರದ ಕಡೆ ಬೆರಳು ಮಾಡಿ ಹೇಳಿದರಲ್ಲಾ, ಆ ಬಗ್ಗೆ ನಮ್ಮ ಪಕ್ಷದ ಅಧ್ಯಕ್ಷರಾದ ಸಿ.ಬೈರೇಗೌಡರು ಮಾತನಾಡುತ್ತಾರೆ. ಮಾನ್ಯ ದೇಶಪಾಂಡೆಯವರು ನಮ್ಮ ಸರ್ಕಾರದಲ್ಲಿದ್ದಾಗ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾಗಿ ಐದು ವರ್ಷಗಳ ಕಾಲ ಮಂತ್ರಿಯಾಗಿದ್ದರು. ಸನ್ಮಾನ್ಯ ಎಸ್.ಎಂ.ಕೃಷ್ಣರವರ

ಸರ್ಕಾರದಲ್ಲೂ ಕೂಡ ತಾವು ಎರಡೂವರೆ ವರ್ಷಗಳ ಕಾಲ ಇನ್‌ವೆಸ್ಟ್‌ಮೆಂಟ್ ಮಿನಿಸ್ಟರ್ ಆಗಿದ್ದೀರಿ, ಈ ಬಗ್ಗೆ ಎಕನಾಮಿಕ್ಸ್ ಟೈಮ್ಸ್'ನಲ್ಲಿ ಒಂದು ಆರ್ಟಿಕಲ್ ಬಂದಿದೆ, ಮಾರ್ಚ್-10 ಅದನ್ನು ನಿಮಗೆ ಕಳುಹಿಸಿಕೊಡುತ್ತೇನೆ, ತಾವು ಅದನ್ನು ಓದಬಹುದು. ನಿಮ್ಮ ಎಫಿಷಿಯೆನ್ಸಿ ಮತ್ತು ನಿಮ್ಮ ಇಲಾಖೆಯ ಬಗ್ಗೆ ಅದು ಹೇಳುತ್ತದೆ. ಕರ್ನಾಟಕಕ್ಕೆ......

SRI R.V.DESHAPANDE: Mr.S.M.Krishna government's performance in the last two years has been the best and I am prepared for a debate in the House.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ದೇಶಪಾಂಡೆಯವರೆ, ತಾವು ಪಟೇಲರು ಇದ್ದಾಗಲೂ ಸಹ ಅದನ್ನೇ ಹೇಳುತ್ತಿದ್ದಿರಿ, ಅದಕ್ಕಾಗಿ ತಾವು ಮಧ್ಯದಲ್ಲಿ ಮಾತನಾಡಬೇಡಿ ಎಂದು ನಾನು ಹೇಳುತ್ತಿರುವುದು. ನಾನು ಇದನ್ನು ಹಣಕಾಸಿನ ಮಂತ್ರಿಗಳಿಗೆ ರೆಫರ್ ಮಾಡುತ್ತಿದ್ದೇನೆ ತಮಗೆ ನಾನು ರೆಫರ್ ಮಾಡಲಿಲ್ಲ. ನಾನು ಏನು ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದೇನೆಂದರೆ, ತೀವ್ರವಾದ ಬರಗಾಲವಿದೆ, ವಿದ್ಯುಚ್ಛಕ್ತಿಯ ಕೊರತೆ ಇದೆ, ಕುಡಿಯುವ ನೀರಿಗೆ ತೊಂದರೆ ಇದೆ, ಜಲಕ್ಷಾಮ ಇದೆ, ಇಂತಹ ಸಂದರ್ಭದಲ್ಲಿ ನಿಮ್ಮ ಹಣಕಾಸಿನ ಪರಿಸ್ಥಿತಿಯೂ ಸಹ ಹದಗೆಟ್ಟಿದೆ. ಇದನ್ನು ಸರಿ ಮಾಡಿಕೊಳ್ಳುವುದಕ್ಕೆ ನಾನು ಸಲಹೆಗಳನ್ನು ಕೊಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಹೊರತು ಬೇರೆ ಇನ್ನು ಯಾವ ದೃಷ್ಟಿಯಿಂದಲೂ ಅಲ್ಲ. ನಮ್ಮ ಮಾನ್ಯ ಅರಗ ಜ್ಞಾನೇಂದ್ರರವರು, ವಿರೋಧಪಕ್ಷದ ನಾಯಕರು, ನಮ್ಮ ಶ್ರೀನಿವಾಸಗೌಡರು ಬಹಳ ಉತ್ಸಾಹದಿಂದ ಕೇಳಿದಾಗ ಪ್ರತಿ ಶಾಸಕರಿಗೂ 25 ಲಕ್ಷ ರೂಪಾಯಿಗಳನ್ನು ಶಾಸಕರ ಅಭಿವೃದ್ಧಿ ನಿಧಿಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅಲ್ಲಿ 12.50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಉಳಿದ 12.50 ಲಕ್ಷ ರೂಪಾಯಿಗಳಲ್ಲಿ ನಾವು ಕೆಲಸವನ್ನು ಕೊಡಲು ಹೋದಾಗ ತಾವು ಕೊಡಬೇಡಿ ಸಾರ್, ಮಾರ್ಚ್ ತಿಂಗಳಾದ ನಂತರ ಮುಂದಿನ ವರ್ಷ ತೆಗೆದುಕೊಳ್ಳೋಣ ಎಂದು ಸಂಬಂಧಪಟ್ಟ ಅಧಿಕಾರಿಗಳು ನಮಗೆ ಹೇಳುತ್ತಾರೆ. ಯಾರ ಮಾತು ಸರಿ? ಯಾರದ್ದು ಸುಳ್ಳು? ನಾವು ಯಾರ ಮಾತನ್ನು ನಂಬಬೇಕೋ ನನಗಂತೂ ಗೊತ್ತಾಗುತ್ತಿಲ್ಲ. ಏಕೆಂದರೆ ನಾವು ಕೆಲಸವನ್ನು ಕೊಡಬಹುದೇ ಹೊರತು, ಮಾಡಿಸುವಷ್ಟು ಶಕ್ತಿ ನಮಗೆ ಇಲ್ಲ ಸ್ವಾಮಿ! ನಬಾರ್ಡ್‌ನಿಂದ ಬರತಕ್ಕಂತಹ ಹಣವನ್ನು ಸಂಬಳ ಕೊಡುವುದಕ್ಕೆ ಐದರ್ ಡೀವಿಯೇಟ್ ಮಾಡಿದ್ದೀರಾ? ಅಥವಾ ನಬಾರ್ಡ್ ಕೆಲಸಗಳು ಸ್ಥಗಿತವಾಗಲಿಕ್ಕೆ ಕಾರಣಗಳೇನು? ನಿಮ್ಮ ಹತ್ತಿರ ಹಣವಿಲ್ಲವೇ? ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಗೊತ್ತಾಗಬೇಕು, ಈ ಬಗ್ಗೆ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇಂತಹ ಬರಗಾಲ ಬಂದಾಗ, ಅದನ್ನು ನಾವೆಲ್ಲರೂ ಒಟ್ಟಾಗಿ ಸೇರಿ ಎದುರಿಸಬೇಕಾಗುತ್ತದೆ. ನಮ್ಮ ಮಾನ್ಯ ಜಗದೀಶ್ ಶೆಟ್ಟರ್‌ರವರು ಶಾಸಕರ ನಾಯಕತ್ವದಲ್ಲಿ ಒಂದು ಸಮಿತಿಯನ್ನು ಮಾಡಿ ಎಂದು ಒಳ್ಳೆಯ ಸಲಹೆಯನ್ನೂ ಸಹ ಕೊಟ್ಟಿದ್ದಾರೆ. ಹಣವನ್ನು ಖರ್ಚು ಮಾಡುವುದಕ್ಕೆ ಹಣವಿರಬೇಕಲ್ಲಾ! ಮಾನ್ಯ ದೇಶಪಾಂಡೆಯವರೆ, ನಾನು ಏನು ಹೇಳುತ್ತಿದ್ದೇನೆಂದರೆ, ಸರ್ಕಾರಿ

ನೌಕರರ ಸಂಬಳ, ಉಪಾಧ್ಯಾಯರುಗಳ ಸಂಬಳ, ಪ್ಲಾನ್ ಸ್ಕೀಮ್‌ನಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಅಂಗನವಾಡಿಯವರ ಸಂಬಳ, ವೈದ್ಯರುಗಳ ಸಂಬಳ ಪ್ಲಾನ್ ಸ್ಕೀಮ್‌ನಲ್ಲಿ 2-3 ತಿಂಗಳಿಂದ ಜಿಲ್ಲಾ ಪಂಚಾಯತ್ ಸರ್ಕಾರದ ಖಜಾನೆಯಿಂದ ರಿಲೀಸ್ ಆಗುತ್ತಿಲ್ಲ. ವಾರದಲ್ಲಿ ಒಂದು ದಿನ ಮಾತ್ರ ಟ್ರಜರಿ ಆಪರೇಟ್ ಆಗುತ್ತಿರುವುದು ಫೈಸೆ. ನಾವಿಬ್ಬರೂ ಒಂದೇ ಸರ್ಕಾರದಲ್ಲಿ ಇದ್ದವರು, ನಾವೂ ಸಹಿತ ಟ್ರಜರಿಗೆ ಇನ್‌ಸ್ಟ್ರಕ್ಷನ್‌ನನ್ನು ಕೊಡುತ್ತಿರುತ್ತೇವೆ. ಸರ್ಕಾರ ಅಂದರೆ ಏನು ಹಣವನ್ನು ಇಟ್ಟುಕೊಂಡು ಕೊಡುವುದು ಅಲ್ಲ, ಸರ್ಕಾರ ಸಹಿತ ಅಲ್ಲಿಂದ ಬಂದದ್ದನ್ನು ಇಲ್ಲಿ ಹಂಚಬೇಕಾಗುತ್ತದೆ. ಅದರ ಬಗ್ಗೆ ಅರಿವು ನನಗೂ ಹಾಗೂ ನಿಮಗೂ ಇದೆ. ಫೈಡೆ ಮಾತ್ರ ಒಂದು ಲಕ್ಷ ರೂಪಾಯಿಗಳ ಒಳಗಡೆ ಇರುವ ಬಿಲ್‌ಗಳನ್ನು ಮಾತ್ರ ಪಾಸ್ ಮಾಡಿ ಎಂದು ಇನ್‌ಸ್ಟ್ರಕ್ಷನ್ಸ್ ಹೋಗುತ್ತಿದೆ. ಅಧಿಕಾರಿಗಳ ವೆಹಿಕಲ್‌ಗಳಿಗೂ ಕೂಡ ಆಯಿಲ್ ಹಾಕಲು ದುಡ್ಡು ಇಲ್ಲ, ಪೆಟ್ರೋಲ್‌ಗೂ ಸಹಿತ ದುಡ್ಡು ಇಲ್ಲ, ಕಳೆದ 6 ತಿಂಗಳುಗಳಿಂದ ಓಲ್ಡ್ ಏಜ್ ಪೆನ್‌ಷನ್ ಹಾಗೂ ವಿಡೋ ಪೆನ್‌ಷನ್ ಡಿಸ್‌ಪರ್ಸ್ ಆಗುತ್ತಿಲ್ಲ. ಲಾ ಆ್ಯಂಡ್ ಆರ್ಡರ್‌ಗಳನ್ನು ಮೇನ್‌ಟೇನ್ ಮಾಡತಕ್ಕಂಥ ಪೋಲೀಸ್ ಸ್ಟೇಷನ್‌ಗಳಲ್ಲಿ ಬಿಲ್ ಪಾಸ್ ಆಗದೆ ಬಿಲ್ ಕಟ್ಟಿಲ್ಲವೆಂದು ಟೆಲಿಫೋನ್ ಡಿಸ್‌ಕನೆಕ್ಟ್ ಮಾಡಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ ಕೋಲಾರ.

ಶ್ರೀ ಸಿ.ಭೈರೇಗೌಡ: ಕೋಲಾರ ಅಲ್ಲ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ತೀವ್ರವಾಗಿ ಗಮನಿಸಬೇಕು. ಹೊಸಕೋಟೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಪೋಲೀಸ್ ಸ್ಟೇಷನ್ ಇದೆ. ಒಂದು ದಿವಸ ನನ್ನ ಕಾರಿಗೆ ಒಬ್ಬ ಲಾರಿಯವನು ತಾಗಿಸಿದನು, ಆಗ ನಾನು ಪೋಲೀಸ್ ಸ್ಟೇಷನ್‌ಗೆ ಹೋದೆ, ದೂರನ್ನು ಕೊಟ್ಟು ವಾಪಸ್ಸು ಬರುವಾಗ, ನಾನು ಫೋನ್‌ನಲ್ಲಿ ಏನು, ಮಾಡಬೇಕು ಎನ್ನುವುದನ್ನು ಹೇಳುತ್ತೇನೆಂದು ಹೇಳಿದೆ, ಇಲ್ಲ ಸ್ವಾಮಿ ನಮ್ಮ ಫೋನ್ ಡಿಸ್‌ಕನೆಕ್ಟ್ ಆಗಿದೆ, ಸಂಬಳ ಬಿಟ್ಟು ಬೇರೆ ಬಿಲ್ ಪಾಸ್ ಆಗುತ್ತಿಲ್ಲ, ನಮಗೆ ಟೆಲಿಫೋನ್ ಇಲ್ಲ. ಟೆಲಿಫೋನ್ ಇಲ್ಲವೆನ್ನುವ ಬಗ್ಗೆ ನೀವು ಚೆಕ್ ಮಾಡಿ, ಕೋಲಾರದಲ್ಲಿ ಅಥವಾ ಬೇತಮಂಗಲದಲ್ಲಿ ಆಗಿದೆ ಎನ್ನುವ ಬಗ್ಗೆ ನಾನು ನಿಮಗೆ ಆಮೇಲೆ ಹೇಳುತ್ತೇನೆ. ಇದು ನಡೆದಿರತಕ್ಕಂಥ ಘಟನೆ. ಇದನ್ನು ಬೇಕಾದರೆ ತರಿಸಿ, ನಾನು ಖುದ್ದಾಗಿ ಪೋಲೀಸ್ ಸ್ಟೇಷನ್‌ನಲ್ಲಿ ಕೇಳಿರತಕ್ಕಂಥ ವಿಚಾರ. ಹಣಕಾಸಿನ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎನ್ನುವುದಕ್ಕೆ ಇದೊಂದು ಸಾಕ್ಷಿ. ಮುಖ್ಯವಾಗಿ ಪೋಲೀಸ್ ಸ್ಟೇಷನ್‌ಗೆ ಟೆಲಿಫೋನ್ ಇಲ್ಲದಿದ್ದರೆ ಜನರಿಗೆ ಒಂದು ರೀತಿಯಾದ ತೊಂದರೆ ಅಪಘಾತವಾದಾಗ ಇವರು ಹೇಗೆ ಕಮ್ಯುನಿಕೇಟ್ ಮಾಡುತ್ತಾರೆ? ಪೋಲೀಸ್‌ನವರಿಗೆ ಏನೇನೋ ಅರ್ಜೆಂಟ್ ಇರುತ್ತದೆ, ಎಲ್ಲೆಲ್ಲಿಯೋ ಮಾತನಾಡಬೇಕಾಗಿರುತ್ತದೆ, ಆಸ್ಪತ್ರೆ ಮತ್ತು ಪೋಲೀಸ್ ಸ್ಟೇಷನ್‌ದಲ್ಲಿ ಟೆಲಿಫೋನ್ ಇಲ್ಲದಿದ್ದರೆ ಏಕೆ ಇವುಗಳನ್ನು ಇಟ್ಟುಕೊಂಡಿರುತ್ತೀರಿ? ನಮ್ಮ ನಾಯಕರು ಹೇಳಿದ ಹಾಗೆ, ಹಣಕಾಸನ್ನು ಯಾವಾಗಲೂ ರಾಶಿ ಹಾಕಿಕೊಂಡು ಒಂದೇ ಸಾರಿ ಖರ್ಚು ಮಾಡಿ ಎಂದು ಕೊಡುವುದಕ್ಕಾಗುವುದಿಲ್ಲ. ಆ ವಾಸ್ತವಾಂಶ ಕೂಡ ನನಗೆ ಗೊತ್ತಿದೆ. ಇವತ್ತು ಹಣಕಾಸಿನ

ಕೊರತೆ ಬಂದಾಗ ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಿ ಮುಖ್ಯವಾಗಿ ನಾವು ಅದನ್ನು ಮೇನ್‌ಟೇನ್ ಮಾಡುವುದು ಮುಖ್ಯ, ಅದು ಇವತ್ತಿನ ದಿವಸ ಆಗುತ್ತಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನೀವು ನಾಳೆ ಆಯವ್ಯಯವನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಮುಂದಿನ ಐದು ವರ್ಷಗಳಿಗೆ ಒಂದು ಫಿಜಿಕಲ್ ಪ್ಲಾನ್ ಎಂದು ರಾಜ್ಯದ ಜನತೆಗೆ ತಾವು ಈಗಾಗಲೇ ತೋರಿಸಿದ್ದಿರಿ. ಅದರ ಪ್ರಕಾರ ನಾವು ಹೆಜ್ಜೆಗಳನ್ನು ಇಡುವುದಕ್ಕೆ ಸಾಧ್ಯವಾಗಿದೆಯೇ? ಏಕೆಂದರೆ, ಅನೇಕ ಪತ್ರಿಕಾ ಹೇಳಿಕೆಗಳನ್ನು ನಾವು ನೋಡುತ್ತಾ ಇದ್ದೇವೆ. ಜಲಸಂವರ್ಧನೆ ಕಾರ್ಯಕ್ರಮ ಅಲ್ಲಿಗೇ ನಿಂತಿದೆ. ಕೇಂದ್ರ ಸರ್ಕಾರ ಕಾವೇರಿ ಡಿಸ್‌ಪ್ಯೂಟ್‌ನ ದೃಷ್ಟಿಯಲ್ಲಿ ಕ್ಲಿಯರೆನ್ಸ್ ಕೊಡದೇ ಇರತಕ್ಕಂಥ ಕಾರಣವೋ ಅಥವಾ ವಿಶ್ವಬ್ಯಾಂಕ್‌ನವರು ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲವೋ? ಆ ಕಾರ್ಯಕ್ರಮ ಈಗ ಪ್ರಾರಂಭವಾಗಬೇಕಾಗಿತ್ತು. ತಮ್ಮ ಸರ್ಕಾರದ ಮೂರನೇ ವರ್ಷದ ಬೇಸಿಗೆ ಅವಧಿ ಇದು. ಈ ವರ್ಷ ಕೂಡ ನೀವು ಪ್ರಾರಂಭ ಮಾಡದೇ ಹೋದರೆ, ನಿಮಗೆ ಇನ್ನೊಂದು ವರ್ಷ ಮಾತ್ರ ಉಳಿಯುತ್ತದೆ. ಇದನ್ನು ಪ್ರಾರಂಭ ಮಾಡಬೇಕೆಂದು ತಾವು ದೊಡ್ಡ ಆಶೆಯನ್ನು ಇಟ್ಟುಕೊಂಡಿದ್ದೀರಿ. 25,000 ಕೆರೆಗಳ ಹೂಳೆತ್ತಬೇಕು ಎನ್ನುವ ಕಾರ್ಯಕ್ರಮ ಇತ್ತು, ಅದು ಯಾವ ರೀತಿ ಯಶಸ್ವಿಯಾಗುತ್ತದೆ? ಆ ಹೂಳೆತ್ತುವ ಕಾರ್ಯಕ್ರಮವನ್ನು ನಾವು ಸ್ವಾಗತ ಮಾಡಿರುತ್ತೇವೆ. ನಾವು ಬೇರೆಯವರ ಹಾಗೆ, ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡಬೇಕೆನ್ನುವ ವಿಷಯವನ್ನು ಹೇಳಿದಾಗ ನಮ್ಮೆಲ್ಲಾ ನಾಯಕರುಗಳು ನಾವು ಸ್ವಾಗತವನ್ನು ಮಾಡಿದ್ದೇವೆ. ಅದೊಂದು ಕಲ್ಪನೆ ಮಾತ್ರ, ಆ ಕಾನ್ಸೆಪ್ಟ್‌ನ್ನು ನಾವು ಅಪ್ರಿಸಿಯೇಟ್ ಮಾಡಿರತಕ್ಕಂಥವರು, ಅದೇ ರೀತಿಯಾಗಿ ಈ ಜಲಸಂವರ್ಧನೆ ಕಾರ್ಯಕ್ರಮವನ್ನು ತೆಗೆದುಕೊಂಡಾಗ ಕೂಡ ನಾವು ಅಪ್ರೀಷಿಯೇಟ್ ಮಾಡಿದ್ದೇವೆ. ಇದೊಂದು ಲಾಂಗಟರ್ಮ್ ಪ್ಲಾನ್. ಕುಡಿಯುವ ನೀರಿನ ಸಮಸ್ಯೆ ಕರ್ನಾಟಕದಲ್ಲಿ ಬಗೆಹರಿಯಬೇಕಾದರೆ ಈ ಕೆಲಸವಾಗಲೇಬೇಕು. ಅದನ್ನು ನಾವು ಒಪ್ಪುತ್ತೇವೆ, ಇದರ ಬಗ್ಗೆ ತಾವು ಯೋಚನೆ ಮಾಡಿ. ರಾಜ್ಯಪಾಲರ ಭಾಷಣದ ಮೂಲಕ ಮಾಡಿಸಿರುವ ತಮ್ಮ ಮೊದಲನೆಯ ಭಾಷಣ ಹಾಗೂ ಎರಡು ಮತ್ತು ಮೂರನೇ ಭಾಷಣ. ತಾವು ಮಂಡಿಸಿರುವ ಎರಡು ಬಜೆಟ್, ಈ ಎಲ್ಲಾ ಬಜೆಟ್‌ಗಳಲ್ಲಿಯೂ ಸಹಿತ ಈ ಕಾರ್ಯಕ್ರಮ ಇವತ್ತು ಎಷ್ಟರಮಟ್ಟಿಗೆ ಪ್ರಾರಂಭವಾಗಿದೆ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ? ಎಷ್ಟರಮಟ್ಟಿಗೆ ತಮಗೆ ನೀರಾವರಿ ಇಲಾಖೆಗೆ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗಿದೆ? ಇದನ್ನು ರಾಜ್ಯದ ಜನತೆಗೆ ತಮಗೆ ಇರುವ ತೊಂದರೆಗಳ ಬಗ್ಗೆ ತಾವು ತಿಳಿಸಬೇಕಾಗುತ್ತದೆ. ನಿಮ್ಮ ಕೈಯಿಂದ ಇವತ್ತು ಸಂಬಳವನ್ನು ಕೊಡುವುದಕ್ಕಾಗಿರುವುದಿಲ್ಲ. ಮಾನ್ಯ ದೇಶಪಾಂಡೆಯವರೇ ಈ ಕಡೆ ಕಿವಿ ಕೊಡಬೇಕು ನಾನು ಹೇಳಿರತಕ್ಕ ವಿಷಯದಲ್ಲಿ ಅಸತ್ಯ ಇದೆ ಎನ್ನುವುದಾದರೆ ನಾನು ಒಂದು ನಿಮಿಷ ಕೂಡ ಈ ಸ್ಥಾನದಲ್ಲಿರುವುದಿಲ್ಲ. ಸರ್ಕಾರಿ ನೌಕರರು ಇವತ್ತು ಏಕೆ ಹೀಗಾಯಿತೆಂದು ಪರಿತಪಿಸುತ್ತಿದ್ದಾರೆ.

But at the same time I also appreciate the difficulties of the Finance Department and the resource mobilisation. But let us know. ಏಕೆ ನೀವು ದೊಡ್ಡದಾಗಿ ಮಾತನಾಡುವುದಕ್ಕೆ ಹೋಗುತ್ತೀರಿ? ಇದು ಒಂದು ಕಡೆಯಾದರೆ, ಲಾಂಗ್ ಟರ್ಮ್ ಪ್ಲಾನ್ ಏನಿದೆ, ಈ ಬರಗಾಲದ ಪರಿಸ್ಥಿತಿಯನ್ನು ಎದುರಿಸುವುದಕ್ಕೆ, ಕುಡಿಯುವ ನೀರಿನ ಪರಿಸ್ಥಿತಿಯನ್ನು ಎದುರಿಸುವುದಕ್ಕೆ, ತತ್‌ಕ್ಷಣ ವಿದ್ಯುಚ್ಛಕ್ತಿಯನ್ನು ಕೊಡಲಿಕ್ಕೆ ನೀವು ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಈ ಸದನಕ್ಕೆ ಈ ಚರ್ಚೆಯ ನಂತರ ಉತ್ತರ ಕೊಡುವ ಸಂದರ್ಭದಲ್ಲಿ ತಿಳಿಸಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಏಕೆಂದರೆ, ಬಹುತೇಕ ಕಡೆಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ವಿದ್ಯುಚ್ಛಕ್ತಿ ಅಭಾವದಿಂದಾಗಿ ಮೊನ್ನೆ ಬೀರೂರಿನ ತರಿಕೇರಿ ತಾಲ್ಲೂಕಿನ ಅಜ್ಜಂಪುರ್‌ದಲ್ಲಿ ಇಂಜಿನಿಯರ್‌ರವರ ಮನೆಗೆ ನುಗ್ಗಿ ಅವರ ಕುಟುಂಬದವರನ್ನು ಹೊರಗಡೆ ಎಳೆದು ನಗ್ನ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿ ಅವರ ಮೇಲೆ ಧಾಳಿ ಮಾಡಲಿಕ್ಕೆ ಕಾರಣ ಏನು? ಕೆಪಿಟಿಸಿಎಲ್ ಅಧಿಕಾರಿಗಳು ಇವತ್ತು ಪೋಲೀಸ್ ರಕ್ಷಣೆಯಲ್ಲಿ ಹೋಗಬೇಕಾದ ಪರಿಸ್ಥಿತಿ ಬಂದಿದೆ, ಅವರ ಪ್ರಾಣವನ್ನು ರಕ್ಷಣೆ ಮಾಡಿಕೊಳ್ಳುವಂಥ ಸಂದರ್ಭ ಇವತ್ತು ಬಂದಿದೆ. ಏಕೆಂದರೆ, ವಿದ್ಯುಚ್ಛಕ್ತಿ ಇಲ್ಲ. ಕಳೆದ ಎರಡು ವರ್ಷಗಳಲ್ಲಿ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಖರ್ಚು ಮಾಡಿದ್ದೇವೆಂದು ತಾವು ಹೇಳುತ್ತೀರಿ. Yes I agree. ಕೆಲವು ಕಡೆ ಸಬ್ ಸ್ಟೇಷನ್‌ಗಳನ್ನು ಮಾಡಿರುತ್ತೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ನಿಮಗೆ ಮಾರ್ಚ್, ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ವಿದ್ಯುಚ್ಛಕ್ತಿ ಕೊರತೆ ಬರುತ್ತದೆ ಎನ್ನುವುದು ಗೊತ್ತಿರಲಿಲ್ಲವೇ? ನವೆಂಬರ್ ತಿಂಗಳಲ್ಲಿ ಮಳೆ ನಿಂತು ಹೋಯಿತು. ನಾನು ರಾಜಕೀಯ ಭಾಷಣವನ್ನು ಮಾಡುವುದಕ್ಕೆ ಹೋಗುವುದಿಲ್ಲ. ವಿಜಯನಗರದ ಪವರ್ ಕಾರ್ಪೊರೇಷನ್‌ಗೆ ಬಳ್ಳಾರಿ ಎಂದು ಮತ್ತೊಂದು ಸಲ ಏಕೆ ಹೆಸರನ್ನು ಇಡಿಸಿದಿರಿ? ಏಕೆ ಮತ್ತೊಂದು ಸಲ ಉದ್ಘಾಟನೆ ಮಾಡಿಸಿದಿರಿ? ಅದರ ಅವಶ್ಯಕತೆ ನನಗೆ ಗೊತ್ತಾಗುತ್ತಿಲ್ಲ. ಈ ಬಗ್ಗೆ ತಾವು ಕರ್ನಾಟಕದ ಜನತೆಗೆ ಹೇಳಬೇಕಾಗುತ್ತದೆ, ದಿವಂಗತ ಶ್ರೀ ಜೆ.ಹೆಚ್.ಪಟೇಲರು ಮತ್ತು ನಾನು, ಶ್ರೀಮಾನ್ ಅಲ್ಲಂವೀರಭದ್ರಪ್ಪನವರು, ಮಾನ್ಯ ಭೈರೇಗೌಡರು, ನಾವೆಲ್ಲರೂ ಹೋಗಿ ಅದಕ್ಕೆ ಅಡಿಗಲ್ಲನ್ನು ಹಾಕಿ ಬಂದಿದ್ದೆವು. ನಾವು ಹಾಕಿದಂತಹ ಅಡಿಗಲ್ಲು ಅಪವಿತ್ರವಾಗಿತ್ತೋ ಏನೋ ನನಗಂತೂ ಗೊತ್ತಿಲ್ಲ. ಈ ಬಗ್ಗೆ ತಾವು ತಿಳಿಸಬೇಕಾಗುತ್ತದೆ. ಆಲಮಟ್ಟಿ ಜಲಾಶಯ ಇದೇನೂ ಹೊಸದಲ್ಲ, ಆದರೆ ತಾವು ಕೆಪಿಸಿಗೆ ಕೊಡತಕ್ಕಂತಹ ಒಳ್ಳೆಯ ನಿರ್ಧಾರವನ್ನು ಮಾಡಿದ್ದೀರಿ. We have appreciated that, ಅವೆರಡು ಆಪ್ಷನ್‌ನನ್ನು ಬಿಟ್ಟರೆ ಪವರ್ ಪ್ರೊಡಕ್ಷನ್‌ಗೂ ಸಹಿತ ಶಾಶ್ವತವಾಗಿರತಕ್ಕಂತಹ ಕಾರ್ಯಕ್ರಮಗಳೇನು ಎಂಬುದನ್ನು ತಾವು ತಿಳಿಸಬೇಕಾಗುತ್ತದೆ. ಜನಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತದಲ್ಲಿ ನೀವು ಏನು ರಿಫಾರ್ಮ್ಸನ್ನು ಬಯಸಿದ್ದೀರಿ ಅದು ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗಬಾರದು ಎಂದು ಬಯಸಿದ್ದೀರಿ, ಅದನ್ನು ಮಾಡಬೇಕಾದರೆ ನೀವು ಜನಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದಾಗಿ ನಿಮ್ಮ ಹಣಕಾಸಿನ ಪರಿಸ್ಥಿತಿ ಏನು?

ನಿಮ್ಮ ಖಜಾನೆಯಲ್ಲಿ ಎಷ್ಟು ಹಣವಿದೆ? ಎಷ್ಟು ಹಣವನ್ನು ಕೊಡತಲಿಕ್ಕೆ ಸಾಧ್ಯವಿದೆ ಎಂಬುದನ್ನು ತಾವು ತಿಳಿಸಬೇಕಾಗುತ್ತದೆಂಬ ಒತ್ತಾಯವನ್ನೂ ಕೂಡ ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಈ ಬಗ್ಗೆ ಮಾನ್ಯ ದೇಶಪಾಂಡೆಯವರು, ಮಾನ್ಯ ಚಿಮ್ಮನಕಟ್ಟಿಯವರುಗಳು, ಕೆಲವು ಮಂತ್ರಿಯವರು ರಿವ್ಯೂ ಮಾಡಿರಬಹುದು. ಆದರೆ ರಿವ್ಯೂ ಮಾಡಿದ ಬಗ್ಗೆ ಫಲಿತಾಂಶ ಏನು ಎಂಬುದನ್ನು ನೋಡಬೇಕಾಗುತ್ತದೆ. ಪ್ರತಿಯೊಂದು ಊರಿನಲ್ಲಿಯೂ ಸಹ ಇವತ್ತು ಕುಡಿಯುವ ನೀರಿಗೆ ಎಲ್ಲಿ ಸಫಿಷಿಯೆಂಟ್ ಎಂದು ಇತ್ತು ಅಲ್ಲೂ ಸಹಿತ ಇಡೀ ರಾಜ್ಯದ 27 ಜಿಲ್ಲೆಗಳಲ್ಲಿಯೂ ಸಹಿತ ಕುಡಿಯುವ ನೀರಿಗೆ ತೊಂದರೆಯಾಗಿದೆ. ಒಂದು ಕಡೆ ಮಿನಿವಾಟರ್ ಸಪ್ಲೈಗಳನ್ನು ರಿಜನೊವೇಟ್ ಮಾಡಬೇಕು, ಆ ಕೆಲಸಗಳು ಆಗುತ್ತಿಲ್ಲ. ನಾವು ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮ್ಮ ಹತ್ತಿರ ಹಣವಿಲ್ಲವೆಂದು ಹೇಳುತ್ತಾರೆ. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರನ್ನು ಕೇಳಿದರೆ ನಮ್ಮ ಹತ್ತಿರ ಹಣವಿಲ್ಲ ಸಾರ್, ನಾವು ಏನು ಮಾಡುವುದು ಎಂದು ಹೇಳುತ್ತಾರೆ. ಕೆಲವು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಏನು ಹೇಳುತ್ತಾರೆಂದರೆ, 2002-2003ನೇ ಸಾಲಿಗೆ ಏನು ಹಣ ಬರುತ್ತದೆ, ಆ ಹಣವನ್ನು ಈಗಲೇ ಉಪಯೋಗಿಸಿ ಮಾಡಿಬಿಡುತ್ತೇವೆ ಸಾರ್, ಇನ್ನೇನು ಮಾಡುವುದಕ್ಕೆ ಸಾಧ್ಯವೆಂದು ಹೇಳುತ್ತಾರೆ. ಹಾಗಾದರೂ ಮಾಡಿ ಎಂದು ನಾನು ಹೇಳಿದರೆ, ಆ ಕಂಟ್ರಾಕ್ಟ್‌ದಾರರುಗಳು ಕೆಲಸವನ್ನು ಮಾಡುವುದಕ್ಕೆ ತಯಾರಿಲ್ಲ ಸಾರ್, ಹಳೆ ಬಿಲ್ಲು ನಮಗೆ ಬಂದಿಲ್ಲ ನಾವು ಎಷ್ಟು ಬಡ್ಡಿ ಕಟ್ಟುವುದಕ್ಕೆ ಆಗುತ್ತದೆ ಎಂದು ಹೇಳುತ್ತಿದ್ದಾರೆಂದು ಹೇಳುತ್ತಾರೆ. ಈ ಬಗ್ಗೆ ತಾವು ಬೇಕಾದರೆ ತಮ್ಮ ಗುಪ್ತ ಇಲಾಖೆಯ ಮುಖಾಂತರ ಅಧಿಕಾರಿಗಳನ್ನು ಅಲ್ಲಿಗೆ ನಾಳೆಯಿಂದ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳ ಕಛೇರಿಗೆ ಕಳುಹಿಸಿ. ಜಿಲ್ಲಾ ಪಂಚಾಯಿತಿಯ ಎಕ್ಸಿಕ್ಯುಟೀವ್ ಇಂಜಿನಿಯರ್, ಪಿಡಬ್ಲ್ಯೂಡಿಯ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳ ಕಛೇರಿಗೆ, ಎಲ್‌ಒಸಿಗಳಿಗೆ ಅವರು ಯಾವ ರೀತಿಯಾಗಿ ಪರಿತಪಿಸುತ್ತಿದ್ದಾರೆ ಸಣ್ಣಪುಟ್ಟ ಕಂಟ್ರಾಕ್ಟ್‌ದಾರರುಗಳು, ಅವರು ಯಾವ ರೀತಿಯಾಗಿ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆಂದು ತಾವು ತಮ್ಮ ಗುಪ್ತ ಇಲಾಖೆಯಿಂದ ಮಾಹಿತಿಯನ್ನು ತರಿಸಿಕೊಳ್ಳಬಹುದು. ತತಕ್ಷಣ ಎಲ್ಲಾ ಜಿಲ್ಲೆಗಳಲ್ಲಿಯೂ ಸಹಿತ ಈ ಜಿಲ್ಲಾ ಮಂತ್ರಿಗಳೆಂದು ಎನಿಸಿಕೊಂಡವರು ಇದರ ಬಗ್ಗೆ ರಿವ್ಯೂ ಮಾಡಬೇಕಾಗುತ್ತದೆ. ಕುಡಿಯುವ ನೀರಿನ ಅಭಾವವನ್ನು ಮುಂದುವರಿಸುವುದಕ್ಕೆ ಇನ್ನೊಂದನ್ನು ಮಾಡಿದ್ದಾರೆ, ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಹೊಸದಾಗಿ ಬೋರ್‌ವೆಲ್‌ಗಳನ್ನು ತೋಡಬಾರದು ಎಂದು ಆಜ್ಞೆಯನ್ನು ಮಾಡಿದ್ದಾರೆ. ಯಾವ ಹಳ್ಳಿಗಳಲ್ಲಿ ವಿಶ್ವಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡು ನಾವು ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ಮಾಡಿದ್ದೇವೆ, ಅಲ್ಲಿ ಬೋರ್‌ವೆಲ್ ಪಾಯಿಂಟ್‌ಗಳು ಫೈಲ್ಯೂರ್ ಆಗಿಬಿಟ್ಟರೆ ಅಲ್ಲಿ ಬೋರ್‌ವೆಲ್ ಹಾಕಬಾರದು ಎಂದು ಹೇಳಿದರೆ ಅವರು ಏನು ಮಾಡಬೇಕು? ಅವರು ಎಲ್ಲಿಂದ ನೀರನ್ನು ತರಬೇಕು? ಈ ರೀತಿಯಾಗಿ ತಲೆ ಇಲ್ಲದಿರತಕ್ಕಂತಹ ಆಜ್ಞೆಗಳನ್ನು ಯಾರು ಮಾಡಿದ್ದಾರೆ? ಇದು ನಮಗೆ ಅರ್ಥವಾಗುವುದಿಲ್ಲ. ಆ ರೀತಿಯಾಗಿ ಮಾಡಿದ್ದರೆ, ಆ ರೀತಿ ಸೂಚನೆ ಸರ್ಕಾರದಿಂದ ಹೋಗಿದ್ದರೆ ತಕ್ಷಣ ಅದನ್ನು

ವಾಪಸ್ಸು ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಲಿಕ್ಕೆ ಬಯಸುತ್ತೇನೆ. ಈ ಬೋರ್‌ವೆಲ್‌ಗಳನ್ನು ಡೀಪೆನ್ ಮಾಡಿದರೆ, ಅದಕ್ಕೇನೂ ಜಾಸ್ತಿ ಹಣ ಬೇಕಾಗುವುದಿಲ್ಲ. ಅದಕ್ಕೆ ಒಂದು ಲೆಂತ್ ಎರಡು ಲೆಂಗ್ತ್ ಎಂದು ಹೇಳುತ್ತಾರೆ. ಅದಕ್ಕಾಗಿ ಒಂದೆರಡು ಪೈಪ್‌ಗಳನ್ನು ಬಿಟ್ಟರೆ, ಅದಕ್ಕೆಲ್ಲಾ 500 ರಿಂದ 1000 ರೂಪಾಯಿಗಳು ಬೇಕಾಗುತ್ತದೆ. ಒಂದು ಕ್ಷೇತ್ರದಲ್ಲಿ 500 ಬೋರ್‌ವೆಲ್‌ಗಳು ಇದೆ ಎಂದು ಹೇಳಿದರೆ, 1000-00 ರೂಪಾಯಿಗಳಂತೆ 5 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅಲ್ಲಿ ನೀರಿರತಕ್ಕಂತಹ ಎಲ್ಲಾ ಬೋರವೆಲ್‌ಗಳಿಗೂ ಸಹಿತ ಡೀಪೆನ್ ಮಾಡಿಸಬಹುದು. ಅದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯತೆ ಇದೆ. ಅದಕ್ಕಾಗಿ ಹೆಚ್ಚಿಗೆ ಹಣ ಬೇಕಾಗುವುದಿಲ್ಲ. ಎಲ್ಲಿ ಡೀಪೆನ್ ಮಾಡುವುದಕ್ಕೆ ಸಾಧ್ಯತೆ ಇದೆ, ಅಲ್ಲಿ ಮಾಡಿಸಿ. ಕೆಲವು ಕಡೆಗಳಲ್ಲಿ ಇರತಕ್ಕಂತಹ ಬೋರವೆಲ್‌ಗಳಲ್ಲಿ ಇನ್ನೆರಡು ಪೈಪ್‌ಗಳನ್ನು ಬಿಟ್ಟರೆ ಸಾಕಷ್ಟು ನೀರು ಸಿಗುವ ಸಂಭವ ಸಹಿತ ಇದೆ. ಅದೂ ಸಹ ಆಗುತ್ತಿಲ್ಲ, There is utter confusion and chaos in Zilla Panchayat Engineering Sections at taluka levels. ಗ್ರಾಮ ಪಂಚಾಯಿತಿಯವರು ಮಾಡಬೇಕೋ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯವರು ಮಾಡಬೇಕೋ there is total confusion as far as drinking water supply is concerned. ಅಲ್ಲಿಗೆ ಪೋಲೀಸ್‌ನವರು ಹೋಗಿ, ನೀರನ್ನು ಅಲ್ಲಿ ತೆಗೆದುಕೊಳ್ಳುವಲ್ಲಿ ಜಗಳವಾಡಿದರು ಎಂದು ಬಿಡಿಸತಕ್ಕಂತಹ ಸನ್ನಿವೇಶಗಳು ಕಾನ್‌ಸ್ಟೇಬಲ್ ಹಾಗೂ ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಇವತ್ತು ಬಂದಿದೆ. ನಾನು ಸರ್ಕಾರಕ್ಕೆ ಇನ್ನೊಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಎಲ್ಲೆಲ್ಲಿ ಎನ್.ಆರ್.ಡಬ್ಲ್ಯು.ಎಸ್. ವಾಟರ್ ಟ್ಯಾಂಕ್‌ಗಳು ಇವೆ, ಒಂದು ತಾಲ್ಲೂಕಿನಲ್ಲಿ 100 ರಿಂದ 120 ಟ್ಯಾಂಕ್‌ಗಳಿರಬಹುದು, ಆ ಎಲ್ಲಾ ಟ್ಯಾಂಕ್‌ಗಳಿಗೂ ಸಹಿತ 25 ಕೆವಿ ಟ್ರಾನ್ಸ್‌ಫಾರ್ಮರ್ ಅನ್ನು ತುರ್ತಾಗಿ ಹಾಕಿಸಿ. ಇದನ್ನು ಮಾಡುವುದಕ್ಕೆ ಸಾಧ್ಯತೆ ಇದೆ, ಒಂದು ಪ್ರತ್ಯೇಕವಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿದರೆ ಅಟ್‌ಲೀಸ್ಟ್ 2 ಹವರ್ಸ್ 3 ಫೇಸ್ ಕರೆಂಟನ್ನು ಕೊಡುತ್ತಿದ್ದೀರಿ, ಅದರಲ್ಲಿಯೇ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿದೆ. ಇದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ತಾವು ಏನು 42 ತಾಲ್ಲೂಕುಗಳನ್ನು ಐಡೆಂಟಿಫೈ ಮಾಡಿದ್ದೀರಿ, ನನಗೆ ಗೊತ್ತಿರುವ ಹಾಗೆ it has crossed more than 100. ನಾರ್ಮಲಿ ಮಾರ್ಚ್-ಏಪ್ರಿಲ್-ಮೇ-ಜೂನ್‌ನಲ್ಲಿ ಯಾವಾಗಲೂ ಸಹ ಬಹುತೇಕ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ತೊಂದರೆಗಳಿವೆ. ತಾವು ದಯಮಾಡಿ ಯಾವುದಾದರೂ ಒಂದು ಸ್ಕೀಮ್‌ನಿಂದ ಒಂದೊಂದು ತಾಲ್ಲೂಕಿಗೆ 50 ಲಕ್ಷ ರೂಪಾಯಿಗಳನ್ನು ಎಕ್ಸ್‌ಕ್ಲೂಸಿವ್ ಆಗಿ ಕುಡಿಯುವ ನೀರಿಗೆ ಎಂದು ಬಿಡುಗಡೆ ಮಾಡಬೇಕು. ಅದು ಬೋರವೆಲ್ ಡೀಪೆನಿಂಗ್ ಇರಬಹುದು, ಅಡಿಷನಲ್ ಪೈಪ್‌ಲೈನ್ ಹಾಕತಕ್ಕಂಥಾದ್ದು ಇರಬಹುದು, ಹೊಸ ಬೋರವೆಲ್ ಪಾಯಿಂಟ್ ಇರಬಹುದು, ಇದನ್ನು ಮಾಡಿದರೆ, ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿದರೆ ಇದು ಕುಡಿಯುವ ನೀರಿನ ಸಮಸ್ಯೆಯನ್ನು ತಾತ್ಕಾಲಿಕವಾಗಿ ಬಗೆಹರಿಸುವುದಕ್ಕೆ ಸಾಧ್ಯತೆ ಇದೆ. ಇದನ್ನು ಮಾಡುವುದಕ್ಕೆ ಸುಮಾರು 100 ಕೋಟಿ ರೂಪಾಯಿಗಳು

ಬೇಕಾಗುತ್ತದೆ. ತುರ್ತಾಗಿ ಈ 3 ತಿಂಗಳು ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ 100 ಕೋಟಿ ರೂಪಾಯಿಗಳು ಬೇಕಾಗುತ್ತದೆ, ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ. ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ನಾವು ಕೇಂದ್ರ ಸರ್ಕಾರಕ್ಕೆ 100 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆಂದು ಹೇಳಿದ್ದಾರೆ. ಅವರು ಹಣವನ್ನು ಕೊಟ್ಟ ಮೇಲೆ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಹಣವನ್ನು ಕೊಡುವವರೆಗೆ ನೀವು ಕಾಯುವುದಕ್ಕೆ ಹೋಗಬೇಡಿ, ಅವರು ಹಣವನ್ನು ಕೊಡುತ್ತಾರೋ, ಬಿಡುತ್ತಾರೋ ನನಗಂತೂ ಗೊತ್ತಿಲ್ಲ, ಅವರ ಪರಿಸ್ಥಿತಿ ಏನಿದೆ ಎಂಬುದು ಗೊತ್ತಿಲ್ಲ. ತಾವು ದಯವಿಟ್ಟು 100 ಕೋಟಿ ರೂಪಾಯಿಗಳನ್ನು ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ತಕ್ಷಣದಲ್ಲಿ ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಈ ಬಗ್ಗೆ ಸರ್ಕಾರಕ್ಕೆ ಏಕೆ ತೀವ್ರತೆ ಇಲ್ಲ? ತೀವ್ರತೆ ನಿಮಗೆ ಇದ್ದಿದ್ದರೆ, ನೀವು ನಮ್ಮನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದಿದ್ದರೆ, ಈ ಸದನಕ್ಕೆ ಈ ಅಧಿವೇಶನ ಪ್ರಾರಂಭವಾಗುವಂತಹ ಸಂದರ್ಭದಲ್ಲಿ ಕೇಂದ್ರಸರ್ಕಾರಕ್ಕೆ ನೀವು ಕುಡಿಯುವ ನೀರಿಗಾಗಿ ಕೊಟ್ಟಿರತಕ್ಕಂತಹ ಅರ್ಜಿ, ಅದರ ಮೆಮೋರ್ಯಾಂಡಮ್ ಅಥವಾ ಏನು ಕೊಟ್ಟಿದ್ದೀರಿ ಎನ್ನತಕ್ಕಂಥಾದ್ದು, ರಾಜ್ಯದಲ್ಲಿ ಅಭಾವದ ಪರಿಸ್ಥಿತಿ ಇರತಕ್ಕಂಥಾದ್ದು, ನಾವು ಈ ರೀತಿಯಾಗಿ ಕ್ರಮವನ್ನು ತೆಗೆದುಕೊಂಡಿದ್ದೇವೆಂಬ ಬಗ್ಗೆ ವರದಿಯನ್ನಾದರೂ ನಮಗೆ ಕೊಡಬಹುದಾಗಿತ್ತು. ಇದನ್ನು ಸಹಿತ ತಾವು ತಿಳಿಸಿಲ್ಲ. ಯಾವ ರೀತಿಯಾಗಿ ಸರ್ಕಾರ ಸಮರೋಪಾಯದ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗಿತ್ತೋ ಅದರ ಒಂದು ಸಿದ್ಧತೆಯಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕಂತಹ ವಿಚಾರವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಕೃಷಿ ವಿಮೆಯ ಬಗ್ಗೆ ಹೇಳುವುದಾದರೆ ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲೇ ತಮಗೆ ಗೊತ್ತಿದೆ, ಈ ವರ್ಷ ತಮ್ಮ ಹಾವೇರಿ ಜಿಲ್ಲೆಗೆ ಏನೂ ಹಣ ಬರುತ್ತಿಲ್ಲ, ಈ ಕೃಷಿ ವಿಮೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇದು ಪ್ರಾಕ್ಟಿಕಲ್ ಆಗಿ ಅವರಿಗೆ ಇರತಕ್ಕಂತಹ ವಿಚಾರವನ್ನು ಅವರ ಸಹೋದ್ಯೋಗಿಗಳು ತಿಳಿಸಿದ್ದಾರೋ ಇಲ್ಲವೋ ಎಂದು ನನಗಂತೂ ಗೊತ್ತಿಲ್ಲ. ಮಾನ್ಯ ಕೃಷಿ ಮಂತ್ರಿಗಳು ಹೋಬಳಿ ಮಟ್ಟದಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಏನು ಮಾಡಿದ್ದೀರಿ, ಆ ಕೇಂದ್ರದಿಂದ ಒಂದು ವರದಿಯನ್ನು ತಾವು ತರಿಸಿಕೊಳ್ಳಿ. ಆ ಕೇಂದ್ರಗಳು ಏನಾಗಿದೆ ಎಂದರೆ ಅಗ್ರಿಕಲ್ಚರ್ ಅಸಿಸ್ಟೆಂಟ್‌ಗಳು ಆರಾಮವಾಗಿ ಕುಳಿತುಕೊಳ್ಳುವುದಕ್ಕೆ ಕೇಂದ್ರಗಳಾಗಿವೆಯೇ ಹೊರತು ತಿಳುವಳಿಕೆಯನ್ನು ಕೊಡತಕ್ಕಂತಹ ಕೆಲಸವನ್ನು ಅವರು ಮಾಡುತ್ತಿಲ್ಲ. ಈ ಬಗ್ಗೆ ತಮ್ಮ ಗಮನಕ್ಕೆ ಈಗಾಗಲೇ ಬಂದಿದೆ, ಅವರ ಕಡೆಯಿಂದ ಅದನ್ನು ತರಿಸಿಕೊಳ್ಳಿ. ಈ ಬೆಳೆ ವಿಮೆಯ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಹಣದ ಕಾರ್ಯಕ್ರಮ ಏನಿದೆ, ಇದನ್ನು ನಾವು ಸಂಪೂರ್ಣವಾಗಿ ಪ್ರಾಕ್ಟಿಕಲ್ ಅಸ್‌ಪೆಕ್ಟ್‌ನಿಂದ ವಿಚಾರ ಮಾಡಬೇಕಾಗುತ್ತದೆ. ಇದರ ಉಪಯೋಗ ನಮ್ಮ ರೈತರಿಗೆ ಸಿಗುತ್ತಿಲ್ಲ. ಅದೇನಾದರೂ ಸಿಕ್ಕಿದರೆ ಉತ್ತರ

ಕರ್ನಾಟಕದಲ್ಲಿರತಕ್ಕಂತಹ ಬರಗಾಲ ಪೀಡಿತ ಪ್ರದೇಶದ ರೈತರಿಗೆ ಸ್ವಲ್ಪವಾದರೂ ಅನುಕೂಲವಾಗುತ್ತಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದರ ಬಗ್ಗೆ ತಾವು ತುರ್ತಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಅಟ್‌ಲೀಸ್ಟ್ ನೆಕ್ಸ್ಟ್ ಇಯರ್ ಜೂನ್ ಹೊತ್ತಿಗೆ ಇದು ಪ್ರಾಕ್ಟಿಕಲ್ ಆಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಬರಲು ಸಾಧ್ಯವಿಲ್ಲ. ನಮ್ಮ ರೈತರು ಅದನ್ನೆ ಕೇಳುತ್ತಿರುವುದು. ಒಂದು ಕಡೆ ಮಿನಿಮಮ್ ಪ್ರೈಸ್ ಫಿಕ್ಸೇಷನ್ ಕಮಿಟಿಯನ್ನು ಅಬಾಲಿಷ್ ಮಾಡಬೇಕೆಂದು ಯೋಚನೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಪ್ರೊಕ್ಯೂರ್‌ಮೆಂಟ್‌ನ್ನು ಸ್ಟೇಟ್ ಗೌರ್ನಮೆಂಟ್‌ಗಳೇ ಮಾಡಿಕೊಳ್ಳಲಿ ಎಂದು ಹೇಳುವಂತಹ ಸನ್ನಿವೇಶದಲ್ಲಿ ಇನ್ನು ಇದು ಇಲ್ಲದೇ ಹೋದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳದೆ, ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸನ್ನಿವೇಶ ಬರುತ್ತದೆ. ಅದನ್ನು ತಪ್ಪಿಸಲಿಕ್ಕೆ ಈ ಕಡೆ ಸರ್ಕಾರ ಗಮನವನ್ನು ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಕೆರೆಗಳಲ್ಲಿ ಹೂಳೆತ್ತುವಂತಹ ಕೆಲಸ, ಈ ಸರ್ಕಾರ ಹೇಳುತ್ತಿರುವುದು ಒಂದು, ಆಗುತ್ತಿರುವುದು ಮತ್ತೊಂದು, ಇವತ್ತು ಎಲ್ಲಾ ಆಡಳಿತ ಪಕ್ಷದ ಶಾಸಕರುಗಳಿಗೂ ವಿಶೇಷವಾಗಿ ನಮಗಿಂತ ಹೆಚ್ಚಾಗಿ ನಿರಾಶೆಯಾಗಿದೆ. ಕಾರಣವೇನೆಂದರೆ ಅವರೆಲ್ಲರೂ ಭರವಸೆಗಳನ್ನು ಕೊಟ್ಟಿದ್ದರು. ಒಂದೊಂದು ಹೋಬಳಿಗಳಲ್ಲಿ ಒಂದೊಂದು ಕೆರೆಗಳೆಂದು ಬಂತು, ಈಗ ತಾಲ್ಲೂಕಿಗೆ ಒಂದೊಂದು ಕೆರೆ ಎಂದು ಬಂದಾಯಿತು. ಅದೂ ಸಹ ಎಲ್ಲೂ ಪ್ರಾರಂಭವಾಗಿಲ್ಲ, ಅದರ ಬಗ್ಗೆ ಕೊನೆಯಪಕ್ಷ ಈ ಸಾರಿ ಪ್ರಾರಂಭ ಮಾಡಿದರೆ ಸ್ವಲ್ಪ ಜನಗಳಿಗೆ ಅನುಕೂಲವಾಗುತ್ತದೆನ್ನುವ ಮಾತನ್ನು ಸಹಿತ ನಾನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ವಿಚಾರದ ಬಗ್ಗೆ ಹೇಳುವುದಾದರೆ, ಈಗ ನೀವು ಹೊರ ರಾಜ್ಯಗಳಿಂದ ಎಷ್ಟು ವಿದ್ಯುಚ್ಛಕ್ತಿಯನ್ನು ತರಿಸಿಕೊಂಡಿದ್ದೀರಿ ಎನ್ನುವುದನ್ನು ನಮಗೆ ತಿಳಿಸಬೇಕಾಗುತ್ತದೆ. ವಿದ್ಯುಚ್ಛಕ್ತಿ ಕೊರತೆ ಎಷ್ಟು ಇದೆ? ಎಷ್ಟು ಹಣವನ್ನು ನೀವು ಕೊಡುವವರಿದ್ದೀರಿ ಎನ್ನುವುದನ್ನು ಸಹಿತ ನಮಗೆ ಹೇಳಬೇಕಾಗುತ್ತದೆ. ಈಗ ಡಾರ್ಕ್ ಮತ್ತು ಗ್ರೇ ಏರಿಯಾದಲ್ಲಿ ಸುಮಾರು 2 ಮತ್ತು 2 1/2 ಲಕ್ಷ ಇಲ್ಲೀಗಲ್ಲಾಗಿ ಕನೆಕ್ಷನ್‌ನನ್ನು ತೆಗೆದುಕೊಂಡಿದ್ದಾರೆ, ಅದನ್ನು ಲೀಗಲೈಜ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಕೆಪಿಟಿಸಿಎಲ್‌ನವರು ಹೇಳುತ್ತಿದ್ದಾರೆ. ಅದರಿಂದಾಗಿ ರೈತರು ಈಗಾಗಲೇ ಸಾಕಷ್ಟು ಹಣವನ್ನು ಖರ್ಚು ಮಾಡಿ ಐ.ಪಿ. ಸೆಟ್‌ಗಳನ್ನು ತೆಗೆದುಕೊಂಡು ಬಂದು ಸುಮಾರು 30 ರಿಂದ 50 ಸಾವಿರ ರೂಪಾಯಿಗಳನ್ನು ಬರೀ ಮೋಟಾರ್‌ಗೆ ಇನ್‌ವೆಸ್ಟ್ ಮಾಡಿದ್ದಾರೆ. ಪೈಪ್‌ಲೈನ್‌ಗಳನ್ನು ಅವರು ತರಿಸಿಕೊಂಡು ಜೋಡಿಸಿಕೊಂಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ನೀವು ಲೀಗಲೈಜ್ ಮಾಡುವುದಿಲ್ಲವೆಂದರೆ ಅವರು ಏನು ಮಾಡಬೇಕು?

4.10 ಪಿ.ಎಂ.

ಅದಕ್ಕೋಸ್ಕರವಾಗಿ ಇವತ್ತು ಕೆಪಿಟಿಸಿಎಲ್ ರಿಫಾರ್ಮ್ಸ್ ಮಾಡುವ ದೃಷ್ಟಿಯಿಂದಾಗಿ ನಾನು ಸರ್ಕಾರ ಮಾಡತಕ್ಕ ಎಲ್ಲಾ ಕೆಲಸವನ್ನು ವಿರೋಧ ಮಾಡುವುದಿಲ್ಲ. ಆ ಬಗ್ಗೆ ಮಾನ್ಯ ಬೈರೇಗೌಡರು ಮಾತನಾಡುವಾಗ ಹೇಳುತ್ತಾರೆ. Certain reforms are nceecessary and it is in the right direction also. ಆದರೆ ಇವತ್ತು ಏನಾಗುತ್ತಿದೆ ಎಂದರೆ, ನೀವು ವಿದ್ಯುಚ್ಛಕ್ತಿಯನ್ನು ಕೊಡದೇ ರಿಫಾರ್ಮ್ಸ್ ಮಾಡುತ್ತೇವೆಂದರೆ ಏನಾಗುತ್ತದೆ? ಅದಕ್ಕೆ ಬೇಕಾಗಿರತಕ್ಕ ಕ್ರಮವೇನು? ಕಳೆದ ಆರು ತಿಂಗಳ ಹಿಂದೆ ನೀವು ವಿದ್ಯುಚ್ಛಕ್ತಿ ದರವನ್ನು ಹೆಚ್ಚು ಮಾಡಿ ಈಗ ಸುಮಾರು 35-36 ಪರ್ಸೆಂಟ್‌ನಿಂದ 60 ಪರ್ಸೆಂಟ್ ಮಾಡಬೇಕೆಂದು ಕೆಪಿಟಿಸಿಎಲ್‌ನವರು ಆರ್ಬಿರೇಟರ್ಸ್ ಹತ್ತಿರ ಹೋಗಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ? ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೇ ಎನ್ನುವ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ಬಹಳ ಮುಖ್ಯವಾಗಿ ಸಾಂಕ್ರಾಮಿಕ ರೋಗಗಳು ಹರಡುವ ಮುನ್ನ ಕಾನೂನು ಪರಿಸ್ಥಿತಿ ಕೆಡುವ ಮುನ್ನ ಸರ್ಕಾರ ತಕ್ಷಣ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ವಿದ್ಯುಚ್ಛಕ್ತಿ ಸರಬರಾಜು ವಿಚಾರದಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರ ಈ ವಿಚಾರದಲ್ಲಿ ಸಮರೋಪಾದಿ ಸಿದ್ಧತೆಗಳನ್ನು ಮಾಡತಕ್ಕ ವಿಚಾರದಲ್ಲಿ ಸರ್ಕಾರ ವಿಫಲವಾಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಕುಡಿಯುವ ನೀರು ಒದಗಿಸಲು ವಿದ್ಯುಚ್ಛಕ್ತಿಯನ್ನು ಬೇರೆ ರಾಜ್ಯಗಳಿಂದ ತರಿಸಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಂಡು ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಈ ಸಮಯದಲ್ಲಿ ಚರ್ಚೆಯನ್ನು ಸುಲಭ ಮಾಡಬೇಕು, ಸರಳ ಮಾಡಬೇಕೆನ್ನುವ ದೃಷ್ಟಿಯಿಂದ 18ನೇ ತಾರೀಖು ಮಾರ್ಚಿ ಅಂದರೆ ನಿನ್ನೆ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿಯವರು ಒಂದು ಕಾಗದವನ್ನು ಸಿಇಒ ಗಳಿಗೆ ಬರೆದಿದ್ದಾರೆ. ಅದು ಈ ರೀತಿ ಇದೆ. I have given instruction with regard to the action to be taken to solve drinking water supply problem in your district. From the letter you will see that wherever there is a need to drill new borewell, that should also be done to provide immediate water supply. I would like to reiterate once again that wherever the C.E.O. is satisfied that new borewells will have to be drilled for providing immediate water supply, they should do so without giving any excuses...... They should be done within the ZP Funds and X Finance Commission Grant.

ಶ್ರೀ ಪಿ.ಜಿ.ಆರ್.ಸಿಂಧ್ಯ: ಹತ್ತನೇ ಫೈನಾನ್ಸ್ ಕಮೀಷನ್ ಹಣವೆಲ್ಲಾ ತಾಲ್ಲೂಕು ಪಂಚಾಯಿತಿಗೆ ಹೋಗುತ್ತದೆ. ತಾಲ್ಲೂಕು ಪಂಚಾಯಿತಿ ಸದಸ್ಯರು ಏನು ಮಾಡುತ್ತಾರೆಂದರೆ,

ಸಾಮಾನ್ಯವಾಗಿ ತಾಲ್ಲೂಕು ಪಂಚಾಯಿತಿಯಲ್ಲಿ 25ರಿಂದ 27 ಜನ ಸದಸ್ಯರಿರುತ್ತಾರೆ, ಜನಸಂಖ್ಯೆಗನುಗುಣವಾಗಿರುತ್ತಾರೆ. ಅವರು 40 ಸಾವಿರ, 50 ಸಾವಿರ 60 ಸಾವಿರ ರೂ.ಗಳನ್ನು ಅವರವರ ಕ್ಷೇತ್ರಗಳಲ್ಲಿ ಕೆಲಸ ಮಾಡುವುದಕ್ಕೆ ಹಂಚಿಕೊಂಡಿದ್ದಾರೆ. ಕುಡಿಯುವ ನೀರಿಗೆ ಎಲ್ಲಿ ಕೊಡುತ್ತಾರೆ? ಒಂದು ತಾಲ್ಲೂಕು ಬೋರ್ಡ್ ಮೆಂಬರ್ ಏರಿಯಾದಲ್ಲಿ 40 ಹಳ್ಳಿಗಳು ಬರುತ್ತವೆ. ತಾವು ದಯವಿಟ್ಟು ಯೋಚನೆ ಮಾಡಿ. ಒಂದು ಬೋರ್‌ವೆಲ್ ಹಾಕಿಸಬೇಕಾದರೆ 50 ಸಾವಿರ ರೂ.ಬೇಕು, 40 ಸಾವಿರ ರೂ. ಕೊಟ್ಟರೆ ಯಾವ ಕಡೆಗೆ ದುಡ್ಡು ಸಿಗುತ್ತದೆ. ತಾವು ಯೋಚನೆ ಮಾಡಿ.

ಶ್ರೀ ಆರಗ ಜ್ಞಾನೇಂದ್ರ(ತೀರ್ಥಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ನಾವು ಕೊಟ್ಟಂತಹ ನಿಲುವಳಿ ಸೂಚನೆಗೆ ಮನ್ನಣೆ ಕೊಟ್ಟು ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳು. ಇವತ್ತು ಇಡೀ ರಾಜ್ಯ ಬರದ ಬೇಗೆಯಲ್ಲಿ ಬೇಯುತ್ತಿದೆ. ಇದರ ಬಗ್ಗೆ ಬಹಳ ಗಂಭೀರವಾದ ಚಿಂತನೆ ಮಾಡಬೇಕಾಗಿದೆ. ಇದರಲ್ಲಿ ಯಾವುದೇ ರಾಜಕೀಯ ಬೆರೆಸತಕ್ಕಂತಹ ಅವಶ್ಯಕತೆ ನಮಗೆ ಇಲ್ಲ. ಬರ ಬಂದಿರತಕ್ಕದ್ದು ಪ್ರಕೃತ್ತಿದತ್ತವಾಗಿರತಕ್ಕ ಕ್ರಿಯೆ. ಯಾವುದೋ ಪಕ್ಷದವರು ಇಲ್ಲಿ ಆಡಳಿತ ನಡೆಸುತ್ತಿದ್ದಾರೆ, ಯಾವುದೋ ಪಕ್ಷದವರು ಕೇಂದ್ರದಲ್ಲಿ ಆಡಳಿತ ನಡೆಸುತ್ತಿದಾರೆಂದು ಆ ಕಾರಣಕ್ಕೆ ಬರ ಬರುವುದಿಲ್ಲ. ಅದೇ ರೀತಿ ನೆರೆ ಕೂಡ ಬರುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾವು ನಿಭಾಯಿಸತಕ್ಕ ರೀತಿ ಹೇಗೆ ಎನ್ನುವ ಬಗ್ಗೆ ಚಿಂತನೆ ಮಾಡಬೇಕು. ಆಡಳಿತದಲ್ಲಿರುವ ಪಕ್ಷದವರು ಈ ಸಂದರ್ಭದಲ್ಲಿ ಹೇಗೆ ವರ್ತನೆ ಮಾಡುತ್ತಾರೆ, ಹೇಗೆ ನಿಭಾಯಿಸುತ್ತಾರೆನ್ನುವುದು ಬಹಳ ಪ್ರಮುಖವಾಗಿರತಕ್ಕ ಪ್ರಶ್ನೆಯಾಗುತ್ತದೆ. ಇವತ್ತು ಬರ ಬಂದಾಗ ಎರಡು ಬಹಳ ಗಮನಾರ್ಹವಾದ ಸಂಗತಿಗಳಿವೆ. ಒಂದು ಕುಡಿಯುವ ನೀರು, ಪ್ರಾಣಿಗಳು ಬದುಕಬೇಕು, ಹೈನುಗಾರಿಕೆ ಉಳಿಯಬೇಕು, ಕುರಿ ಇರಬಹುದು, ಜಾನುವಾರು ಇರಬಹುದು ಬಹಳ ಕೆಟ್ಟ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ಅವುಗಳಿಗೆ ತತ್‌ಕ್ಷಣದ ಪರಿಹಾರೋಪಾಯಗಳನ್ನು ಕಂಡುಹಿಡಿಯಬೇಕಾಗುತ್ತದೆ. ಬರ ಬಂದ ಕೂಡಲೇ ಸರ್ಕಾರ ತಕ್ಷಣ ಕೆಲಸ ಮಾಡಬೇಕೆನ್ನುವುದಲ್ಲ. ಈ ಸಾರಿ ಬರ ಬರುತ್ತದೆನ್ನುವುದು ಕಳೆದ ಮಳೆಗಾಲದಿಂದ ನಮಗೆ ಗೊತ್ತಿದೆ. ಕಳೆದ ಮಳೆಗಾಲ ಯಾವಾಗ ಕೈಕೊಟ್ಟಿದೆ, ಡ್ಯಾಮ್‌ಗಳಲ್ಲಿ ನೀರು ನಿಲ್ಲಲಿಲ್ಲ, ಯಾವಾಗ ನಮ್ಮ ಕೆರೆಕಟ್ಟೆಗಳು ಭರ್ತಿಯಾಗಲಿಲ್ಲ ಬೇಸಿಗೆಯಲ್ಲಿ ಏಪ್ರಿಲ್, ಮೇ ತಿಂಗಳಿನಲ್ಲಿ ಏನಾಗಬಹುದೆನ್ನುವ ಸೂಚನೆ ನಮಗೆ ಆವತ್ತೇ ಸಿಕ್ಕಿತು. ಆದರ ನಿವಾರಣೋಪಾಯಕ್ಕೆ ಸರ್ಕಾರ ಯಾವ ರೀತಿ ಗಮನಹರಿಸಬೇಕಾಗಿತ್ತೋ ಅದನ್ನು ಹರಿಸಲಿಲ್ಲ ಎಂದು ನಮ್ಮ ಆರೋಪವಿದೆ. ಪ್ರಾಮಾಣಿಕವಾಗಿ ಆ ಬಗ್ಗೆ ಗಮನಹರಿಸಲಿಲ್ಲ. ಇವತ್ತು ಬರೀ ಪತ್ರಿಕಾ ಪ್ರಚಾರದಲ್ಲಿ, ಮಾಧ್ಯಮದ ಪ್ರಚಾರದಲ್ಲಿ ನೀವು ತಲ್ಲೀನರಾಗಿದ್ದರೆ ಸಾಕಾಗುವುದಿಲ್ಲ. ಇವತ್ತು ಜನ ಕೇವಲ ಆಡಳಿತ ಪಕ್ಷಕ್ಕೆ ಬೈಯ್ಯುವುದಿಲ್ಲ. ನಮಗೂ ಸೇರಿಸಿ ಬೈಯ್ಯುತ್ತಾರೆ. ನಮ್ಮ ಕ್ಷೇತ್ರದಲ್ಲಿರುವವರಿಗೆ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿದೆ ಅವರನ್ನು ನೋಡಿಕೊಳ್ಳಿ ಎಂದು ನಾನು ಬೆರಳು ತೋರಿಸುವುದಕ್ಕಾಗುವುದಿಲ್ಲ. ನನ್ನನ್ನು ಶಾಸಕನಾಗಿ ಗೆಲ್ಲಿಸಿ ಕಳುಹಿಸಿದ್ದಾರೆ, ತಾಲ್ಲೂಕು

ಮತ್ತು ಜಿಲ್ಲಾಪಂಚಾಯಿತಿ ಸದಸ್ಯರನ್ನಾಗಿ ಗೆಲ್ಲಿಸಿದ್ದೇವೆ, ನಮಗೆ ನೀರು ಕೊಡಿಯೆಂದು ಕೇಳುತ್ತಾರೆ. ಇವತ್ತು ಯಾವುದೇ ಒಂದು ಗ್ರಾಮಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಹಳ್ಳಿಗೆ ಚುನಾಯಿತ ಪ್ರತಿನಿಧಿಯಾಗಿ ಹೋಗುವುದಕ್ಕೆ ಸಾಧ್ಯವಿಲ್ಲ. ಮಲೆನಾಡಿನಲ್ಲಿ ಇಂತಹ ಪರಿಸ್ಥಿತಿ ಬಂದಿರಲಿಲ್ಲವೆಂದು ನಾನು ಹೇಳುವುದಿಲ್ಲ, ಅನೇಕ ಹಿರಿಯರು ಹೇಳುತ್ತಾರೆ. ನನಗಿಂತ ಎರಡು ಪಟ್ಟು ವಯಸ್ಸಾದವರು ಹಿರಿಯರು ಹೇಳುತ್ತಾರೆ. ಇಂತಹ ಸ್ಥಿತಿ ಯಾವಾಗಲೂ ಇರಲಿಲ್ಲವೆಂದು ಹೇಳುತ್ತಾರೆ. ಅಂತಹ ಒಂದು ಸ್ಥಿತಿಯಲ್ಲಿದ್ದೇವೆ. ತುಂಗಾನದಿ ಜೀವನದಿ, ಅದು ತುಂಡಾಗುತ್ತಿದೆ. ಬಹುಶಃ 15 ದಿವಸಗಳಲ್ಲಿ ನಿಂತುಹೋಗುವ ಎಲ್ಲಾ ಸೂಚನೆಗಳೂ ಇವೆ. ತೀರ್ಥಹಳ್ಳಿಯವರು ತುಂಗಾನದಿಯ ದಡದಲ್ಲಿರತಕ್ಕವರು. ಆ ಜನ ನಾವು ಬಹಳ ಆತಂಕದ ಪರಿಸ್ಥಿತಿಯಲ್ಲಿದ್ದೇವೆ. ಅಂತಹ ಒಂದು ಸ್ಥಿತಿಯಲ್ಲಿ ನಮಗೆ ಜನರು ಕೇಳುವುದು ರೇಡಿಯೋದಲ್ಲಿ ಬರುತ್ತಿದೆ, ದೂರದರ್ಶನದಲ್ಲಿ ಬರುತ್ತಿದೆ, ಪತ್ರಿಕಾ ಪ್ರಕಟಣೆಗಳು ಬರುತ್ತಿವೆ. ಮೊನ್ನೆ ಮಾರ್ಚಿ 5ನೇ ತಾರೀಖು ಎಂದು ಕಾಣಿಸುತ್ತದೆ, ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಆದ ತೀರ್ಮಾನವನ್ನು ವಾರ್ತಾ ಸಚಿವರಾದ ಮಾನ್ಯ ಶಿವಣ್ಣನವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು, ಕುಡಿಯುವ ನೀರಿಗೆ ಯಾವುದೇ ತೊಂದರೆಯಿಲ್ಲ, ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಆ ಬಗ್ಗೆ ಡಿಸಿಷನ್ ತೆಗೆದುಕೊಂಡಿದ್ದೇವೆ, ಜಿಲ್ಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿದ್ದೇವೆ. ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಮತ್ತು ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳ ಉಪ ಸಮಿತಿ ಮಾಡಿದ್ದೇವೆ. ಅವರು ವಾರಕ್ಕೊಂದು ಸಲ ಸಭೆ ಸೇರುತ್ತಾರೆ. ಅವರು ಇಡೀ ರಾಜ್ಯದ ಕುಡಿಯುವ ನೀರಿನ ಪರಿಸ್ಥಿತಿಯನ್ನು ರಿವ್ಯೂ ಮಾಡಬೇಕು, ಹಣಕಾಸನ್ನು ತಕ್ಷಣ ಫ್ಲೋ ಮಾಡಬೇಕೆಂದು ಹೇಳಿದರು. ಜನರಿಗೆ ಬಹಳ ಸಂತೋಷವಾಯಿತು. ಆಗಾಗ ಸರ್ಕಾರ ಈ ರೀತಿಯ ಹೇಳಿಕೆ ಕೊಟ್ಟು ಧೈರ್ಯ ತುಂಬುವುದಕ್ಕೆ ಈ ರೀತಿ ಹೇಳುತ್ತಿದ್ದೇವೆ ಹಣ ಕೊಡುವುದಕ್ಕಾಗುವುದಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಎಲ್ಲಾ ಜನರಿಗೆ ಧೈರ್ಯ ಕೊಡಬೇಕು ಇಲ್ಲದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದು ನೀವು ಹೇಳುವುದಾದರೆ ನಮ್ಮದೇನೂ ತೊಂದರೆಯಿಲ್ಲ. ಆದರೆ ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ. ಜನ ಈ ರೀತಿ ಧೈರ್ಯ ಕೊಡುವುದನ್ನು ಎಷ್ಟು ದಿವಸ ನಂಬಿಕೊಂಡಿರುತ್ತಾರೆ? ನಮ್ಮನ್ನು ಅವರು ನೀವು ಏಕೆ ಹಣವನ್ನು ತರಲಿಲ್ಲ? ಜಿಲ್ಲಾಧಿಕಾರಿಗಳ ಹತ್ತಿರ ಹಣವಿದೆ. ತೀರ್ಥಹಳ್ಳಿಯಲ್ಲಿ ಕುಡಿಯುವುದಕ್ಕೆ ಏಕೆ ನೀರಿಲ್ಲವೆಂದು ಕೇಳಿದಾಗ ನಾವೇನು ಹೇಳುವುದಕ್ಕಾಗುತ್ತದೆ? ನಾವು ಮತ್ತು ಜಿಲ್ಲಾಪಂಚಾಯಿತಿ ಸದಸ್ಯರು ಏನು ಹೇಳಬೇಕೆಂದು ತಾವು ಹೇಳಬೇಕು. ಒಟ್ಟಾರೆ ಸುತ್ತೋಲೆಯ ಸಾರಾಂಶ ಏನೆಂದು ನನಗೆ ಗೊತ್ತಾಗಲಿಲ್ಲ. ಇಂತಹ ಒಂದು ಸ್ಥಿತಿಯಲ್ಲಿ ಈಗಲೂ ಕೂಡ ಒಂದು ಸುತ್ತೋಲೆ ಇದೆ, ಅದರಲ್ಲಿ ಎಷ್ಟು ಹಣವನ್ನು ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಯವರು ಬಿಡುಗಡೆ ಮಾಡಿದ್ದಾರೆಂದು ಹೇಳಲಿಲ್ಲ. ಬಿಡುಗಡೆಯಾಗಿರುವಂತಹ ಹಣದಲ್ಲಿ 10ನೇ ಮತ್ತು 11ನೇ ಹಣಕಾಸಿನ ಆಯೋಗದವರು ಹೇಳಿರುವಂತೆ ಎಷ್ಟು ಹಣವನ್ನು ಬಳಕೆ ಮಾಡಲಾಗಿದೆಯೆಂದು ಹೇಳಬೇಕು. ಅದು ಬಳಕೆಯಾಗಿದೆ. ಅದರ ಪ್ರಕಾರ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರಿಗೆ 20-25ಸಾವಿರ ರೂ. ಬರುತ್ತದೆ,

ಆದರಲ್ಲಿ ಅಲ್ಲೊಂದು ಇಲ್ಲೊಂದು ಕೆಲಸ ಮಾಡಬಹುದು. ಅವರಿಗೆ ಅದು ಸಾಕಾಗುವುದಿಲ್ಲ, ನಾವು ಇಲ್ಲಿ ಬಂದು ಬೊಬ್ಬೆ ಹೊಡೆಯುವ ಕೆಲಸ ಬೇಡ. ಸದನದ ಸಮಯವನ್ನು ಹಾಳುಮಾಡತಕ್ಕ ಪರಿಸ್ಥಿತಿಯಲ್ಲಿ ನಾವು ಇಲ್ಲ. ಮತ್ತೆ ನಿಮಗೆ ಇರತಕ್ಕ ಅನುದಾನದಲ್ಲಿ ಮಾಡಿಯೆಂದು ಸುತ್ತೋಲೆಯನ್ನು ಕಳುಹಿಸುವಂತಹ ಅವಶ್ಯಕತೆಯಿಲ್ಲ. ಜಿಲ್ಲಾ ಪಂಚಾಯಿತಿ ಸದಸ್ಯರು ಇದ್ದಾರೆ, ನಾವೂ ಕೂಡ ಅಲ್ಲಿ ಸಭೆಗಳಿಗೆ ಹೋಗಿ ಮಾಡಿಯೆಂದು ಹೇಳುತ್ತೇವೆ. ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದ್ದಾರೆ. ನಿನ್ನೆ ಅಧಿಕಾರಿಗಳು ನಮಗೆ ಹೇಳುತ್ತಿದ್ದರು. ಮುಂದಿನವರ್ಷದ್ದು ಏನು ತೆಗೆದುಕೊಳ್ಳಬೇಕಾಗಿದೆ ಅದನ್ನು ಈ ಸಾರಿ ತೆಗೆದುಕೊಂಡು ಬಾವಿ ಮಾಡಿಸಿ, ಬೋರ್‌ವೆಲ್ ಹಾಕಿಸಿ ಎಂದು ಯಾರು ಮಾಡುವುದಕ್ಕೆ ಬರುತ್ತಾರೆ? ಈಗ ಕೊಟ್ಟಿರತಕ್ಕಂಥ ಬಿಲ್‌ಗಳನ್ನು ತಡೆಹಿಡಿದಿದ್ದೀರಿ. ಟ್ರೆಜರಿಯಲ್ಲಿ ಬ್ಯಾನ್ ಆಗಿದೆ. ಅದು ಅಘೋಷಿತವಾಗಿರತಕ್ಕಂಥ ಬ್ಯಾನ್. ಅಲ್ಲಿ ಯಾವ ಚೆಕ್ಕುಗಳೂ ಪಾಸ್ ಆಗುತ್ತಿಲ್ಲ. ಯಾರೂ ಕೂಡ ಕಂಟ್ರಾಕ್ಟರ್ಸ್ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಕೆಲವು ಕಂಟ್ರಾಕ್ಟರ್ಸ್ ಎಲ್ಲಾ ಹರಾಜೆದ್ದು ಹೋಗಿದ್ದಾರೆ, ಪಾಪರ್ ಎದ್ದು ಹೋಗಿದ್ದಾರೆ. ಈಗ ಮಾನ್ಯ ಮಂತ್ರಿಯವರು ಹೇಳಿದರು, ಏನೆಂದರೆ ನಮಗೆ ಹಣಕ್ಕೇನೂ ತೊಂದರೆ ಇಲ್ಲವೆಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದಾರೆ, ಬಹಳ ಹಿರಿಯರು ಅವರು ಇಲ್ಲಿ ಕುಳಿತುಕೊಂಡಿದ್ದಾಗಲೂ ಹೀಗೆಯೇ ಮಾತನಾಡುತ್ತಿದ್ದರು, ಅಲ್ಲಿ ಕುಳಿತುಕೊಂಡಾಗಲೂ ಹಾಗೆಯೇ ಮಾತನಾಡುತ್ತಿದ್ದಾರೆ. ಅವರು ನಮ್ಮನ್ನು ಹೆದರಿಸುತ್ತಾರೆ, ಎಲ್ಲಿ ಸಂಬಳ ಕೊಟ್ಟಿಲ್ಲ ಹೇಳಿರಿ ಎಂದು ನಮ್ಮನ್ನು ಕೇಳುತ್ತಾರೆ. ನೀವು ಹೇಳಿ ಎಂದರೆ ಯಾರು ಸರ್ಕಾರಿ ನೌಕರರು ಬಂದು ಹೇಳಿದ್ದಾರೆ, ಅವರದ್ದು ಹೇಳ್ತೀವಪ್ಪ. ಇಲ್ಲೊಂದು ಮನವಿ ಇದೆ. ಕರ್ನಾಟಕ ರಾಜ್ಯ ಅನುದಾನಿತ ಖಾಸಗಿ ಐ.ಟಿ.ಐ. ನೌಕರರ ಸಂಘದವರು ನಾಲ್ಕು ತಿಂಗಳಿಂದ ಸಂಬಳ ಕೊಟ್ಟಿಲ್ಲವೆಂದು ಹೇಳಿ ಮನವಿ ಕೊಟ್ಟಿದ್ದಾರೆ. ಅದು ಖಾಸಗಿ ಅನುದಾನಿತ ಸಂಸ್ಥೆಯಾಗಿದ್ದು ಆಶ್ವಾಸನೆ ಕೊಟ್ಟು ಬಂದಿದ್ದರು. ಆದರೆ ಕಳೆದ ನಾಲ್ಕು ತಿಂಗಳಿಂದ ಸಂಬಳ ಕೊಟ್ಟಿಲ್ಲ. ಪ್ಲಾನ್ ಸ್ಕೀಮ್‌ನಲ್ಲಿ ಇರುವಂಥ ಅಧ್ಯಾಪಕರು ನನ್ನ ಕ್ಷೇತ್ರದಲ್ಲಿ ಇದ್ದಾರೆ. ಇಡೀ ಜಿಲ್ಲೆಯ ಶಿಕ್ಷಕರು ನನ್ನ ಹತ್ತಿರ ಬಂದಿದ್ದರು. ಅವರ ಸಂಘದವರು ಬಂದು ಏನಾದರೂ ಸ್ವಲ್ಪ ಹೇಳಿ, ಸಂಬಳ ಕೊಡಿಸುವಂತೆ ಮಾಡಿ ಎಂದು ಹೇಳಿದರು. ವೆಟರ್ನರಿ ಇಲಾಖೆಯಲ್ಲಿ ಅಟೆಂಡರ್‌ನಿಂದ ಹಿಡಿದು ಪ್ಲಾನ್ ಸ್ಕೀಮ್‌ನಲ್ಲಿ ಇರುವಂಥ ಡಾಕ್ಟರ್‌ವರೆಗೆ ಮೂರು ತಿಂಗಳಿಂದ ಸಂಬಳ ಇಲ್ಲ. ಮೆಡಿಕಲ್ ಡಿಪಾರ್ಟ್‌ಮೆಂಟ್‌ನಲ್ಲೂ ಸಂಬಳ ಇಲ್ಲ. ನೀವು ಎಲ್ಲಿ ಹೇಳಿ ಎಂದು ಹೇಳಿದ ಕೂಡಲೇ ನಾವು ಅವರನ್ನು ಇಲ್ಲಿ ಎಳೆದುಕೊಂಡು ಬಂದು ಒಳಗೆ ನಿಲ್ಲಿಸುವುದಕ್ಕೆ ಸಾಧ್ಯವಿದೆಯಾ? ಅವರು ಹೇಳಿದ್ದನ್ನು ನಾವು ಹೇಳಿದ್ದೇವೆ. ಮೂರು ತಿಂಗಳಿಂದ ಸಂಬಳ ಇಲ್ಲವೆಂದರೆ ಅವರಿಗೆ ಯಾರು ಸಾಲ ಕೊಡುತ್ತಾರೆ? ಒಂದು ತಿಂಗಳು ಸಂಬಳ ಇಲ್ಲವೆಂದರೆ ಯಾರಾದರೂ ಸಾಲ ಕೊಡುತ್ತಾರೆಯೇ? ಅಥವಾ ಬೇರೆ ರೀತಿಯ ನೌಕರರು ಸ್ವಲ್ಪ ಹೆಚ್ಚು ಕಡಿಮೆಯಾದರೆ ಹೇಗೋ ನಿಭಾಯಿಸುತ್ತಾರೆಂದು ಹೇಳಬಹುದು. ಆದರೆ ಮೇಷ್ಟ್ರುಗಳು ಹೇಗೆ ನಿಭಾಯಿಸುವುದಕ್ಕೆ ಸಾಧ್ಯ? ಅವರದ್ದು ಏನಿದ್ದರೂ ಕಾರಿಗೆ, ತಲೆಗೆ ಅಷ್ಟೇ ಇರುತ್ತದೆ.

ಅಷ್ಟರಲ್ಲೇ ಮಾತ್ರ ಅವರು ಬದುಕಬೇಕಾಗುತ್ತದೆ. ಮೂರು-ನಾಲ್ಕು ತಿಂಗಳಿಂದ ಸಂಬಳ ಇಲ್ಲದಿದ್ದರೆ ಅವರು ಬದುಕುವುದು ಹೇಗೆ? ಈ ರೀತಿ ನಿಮ್ಮ ಹಣಕಾಸಿನ ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದು ಅಷ್ಟು ಕೊಡುತ್ತೇವೆ ಇಷ್ಟು ಕೊಡುತ್ತೇವೆ, ಬರ ಕಾಮಗಾರಿಕೆಗೆ ಏನೂ ತೊಂದರೆ ಇಲ್ಲವೆಂದು ಹೇಳುತ್ತೀರಿ. ಹೋಗಿ ಬಾವಿ ತೆಗೆಯಿರಿ ಎಂದು ಹೇಳುತ್ತೀರೇ ಹೊರತು ಎಷ್ಟು ಕೊಡುತ್ತೇವೆ ಎಂದು ಹೇಳುವುದಿಲ್ಲ. ಹಣಕ್ಕೇನೂ ತೊಂದರೆ ಇಲ್ಲವೆಂದು ಮಾತ್ರ ಹೇಳುತ್ತೀರಿ. ಕಳೆದ ಸಾರಿ ರಿವ್ಯೂ ಮಾಡುತ್ತಿದ್ದೆವು. ನೀವು ಏನೂ ಮಾಡುವುದು ಬೇಡ, ಹೊಸ ಬಾವಿ ಹೊಡೆಯುವುದು ಬೇಡ ಸ್ವಾಮಿ. ನಮ್ಮ ಕ್ಷೇತ್ರಗಳಲ್ಲಿ ಇರತಕ್ಕಂಥ ಬಾವಿಗಳು, ಬೋರ್‌ವೆಲ್‌ಗಳು ಏನು ಸಿಲ್ಟ್‌ಅಪ್ ಆಗಿವೆ, ಅವುಗಳನ್ನು ಡೀಸಿಲ್ಟ್ ಮಾಡುವುದಕ್ಕೆ ರಿಗ್‌ಗಳನ್ನು ಕೊಟ್ಟರೆ ಸಾಕು. ಅದಕ್ಕೆ ಒಂದೂವರೆಯಿಂದ ಎರಡು ಸಾವಿರ ರೂಪಾಯಿಗಳು ಖರ್ಚಾಗಬಹುದು. ನಮ್ಮ ತಾಲ್ಲೂಕಿನಲ್ಲಿ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಯೋಜನೆಯನ್ನು ನಿಭಾಯಿಸುತ್ತಿದ್ದಾರೆ. ಇಡೀ ರಾಜ್ಯದಲ್ಲಿ ನನ್ನ ಕ್ಷೇತ್ರವಾದ ತೀರ್ಥಹಳ್ಳಿ ಕ್ಷೇತ್ರವೊಂದೇ ಪಂಚಾಯತಿಯಿಂದ, ಗ್ರಾಮ ಪಂಚಾಯತ್‌ಗಳಲ್ಲಿ ಮೇಯಂಟೇನ್ ಮಾಡತಕ್ಕಂಥ ವ್ಯವಸ್ಥೆಯನ್ನು ನಾವು ತಂದಿದ್ದೇವೆ. ಗ್ರಾಮ ಪಂಚಾಯತ್‌ಗಳು ಕುಡಿಯುವ ನೀರಿನ ಬಗ್ಗೆ ಹ್ಯಾಂಡ್‌ಪಂಪ್ ರಿಪೇರಿ ಮಾಡತಕ್ಕದ್ದು, ಮಿನಿವಾಟರ್ ಸಪ್ಲೈ ಸ್ಕೀಮ್‌ನದ್ದು ಎಲ್ಲಾ ಉಸ್ತುವಾರಿಯನ್ನು ಅವರೇ ಮಾಡುತ್ತಿದ್ದಾರೆ. ವರ್ಷಕ್ಕೆ ಇಷ್ಟು ಎಂದು ಸರ್ಕಾರ ಕೊಡತಕ್ಕಂಥ ಅನುದಾನದ ಚೌಕಟ್ಟಿನಲ್ಲೇ ಅವರು ಇದನ್ನು ನಡೆಸುತ್ತಿದ್ದಾರೆ. ಸ್ವಲ್ಪ ವಿಶೇಷವಾಗಿ ಇರತಕ್ಕಂಥ ಅನುದಾನವನ್ನು ಕೊಡಿ ಎಂದು ಅವರು ಹೇಳುತ್ತಾರೆ. ಸಿಲ್ಟ್‌ಅಪ್ ಆಗಿರುವ ಬಾವಿಗಳೆಲ್ಲಾ ಕುಡಿಯುವ ನೀರಿನ ಯೋಜನೆಯಲ್ಲಿ ನಿಂತುಹೋಗಿವೆ. ಇವತ್ತು ಡೀಸಿಲ್ಟ್ ಮಾಡುವುದಕ್ಕೆ ರಿಗ್‌ಗಳು ಬೇಕು. ಡೀಸಿಲ್ಟ್ ಮಾಡುವುದಕ್ಕೆ ರಿಗ್‌ಗಳು ಬೇಕಾಗಿದ್ದು ಅವುಗಳು ಇಡೀ ರಾಜ್ಯದಲ್ಲಿ ಇರುವುದು ಎರಡು ಮಾತ್ರ. ಇದನ್ನು ನೀವು ಏಕೆ ತೆಗೆದುಕೊಂಡಿಲ್ಲ ಎಂಬುದು ನನಗೆ ಗೊತ್ತಾಗಲಿಲ್ಲ. ಇಂತಹ ಹತ್ತು ರಿಗ್‌ಗಳು ಇದ್ದರೆ ಒಂದೊಂದು ಜಿಲ್ಲೆಗೆ ಒಂದೊಂದು ವಾರ ಕಳುಹಿಸಿದರೂ ಅವರು ಇಷ್ಟು ಹೊತ್ತಿಗೆ ಸರಿ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಬಹುದಾಗಿತ್ತು. ಅದನ್ನೂ ಕೂಡ ಮಾಡುವಂಥ ವ್ಯವಧಾನ ನಿಮಗೆ ಇಲ್ಲ. ಅದನ್ನು ಯಾರು ಗಮನಿಸಬೇಕೆಂದು ಗೊತ್ತಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇವತ್ತು ಇಲ್ಲ. ನಾವು ಇಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಕುಡಿಯುವ ನೀರಿನ ಯೋಜನೆ ಬಗ್ಗೆ ನಗರಾಭಿವೃದ್ಧಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು ವಿಶೇಷವಾಗಿ ಇರತಕ್ಕಂಥ ಕಾಳಜಿ ಮತ್ತು ಗಮನಕೊಡಬೇಕಾಗುತ್ತದೆ. ಇಲ್ಲಿ ಇವತ್ತು ಅವರು ಏಕೆ ಇಲ್ಲವೆಂದು ಗೊತ್ತಿಲ್ಲ. ಮೇಲ್ಮನೆಯಲ್ಲಿ ಏನಾದರೂ ಇದ್ದಾರೆಯೇ ಎಂಬುದು ಗೊತ್ತಿಲ್ಲ. ಅವರು ಏಕೆ ಸಮರ್ಪಕವಾಗಿ ನಿಭಾಯಿಸುವುದಿಲ್ಲ ಎಂಬುದು ಗೊತ್ತಿಲ್ಲ. ಅವರು ಕಾಳಜಿಯಿಂದ, ಕಳಕಳಿಯಿಂದ ಈ ಕೆಲಸವನ್ನು ಮಾಡಬೇಕಾಗುತ್ತದೆ. ಮತ್ತೆ ಈ ಜಾನುವಾರು ಮೇವಿನ ಬಗ್ಗೆ ಹೇಳಬೇಕು ಎಂದರೆ, ನಮ್ಮ ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ ಎಲ್ಲಾ ಜಾನುವಾರುಗಳ ಮೇವನ್ನು ಸಾಗಾಣಿಕೆ ಮಾಡುವುದನ್ನು ಬ್ಯಾನ್ ಮಾಡಿದ್ದೇವೆ ಎಂದು. ನಮ್ಮ ಜಿಲ್ಲೆಯಿಂದ ಮೇವು ದಕ್ಷಿಣ ಕನ್ನಡ ಜಿಲ್ಲೆಗೆ

ಹೋಗುತ್ತಿತ್ತು. ಅದನ್ನೆಲ್ಲಾ ಬ್ಯಾನ್ ಮಾಡಿದ್ದೇನೆ ಎಂದು ಅವರು ಹೇಳಿದರು. ಹಾಗೆ ಮಾಡಿದರೆ ನಿಮ್ಮನ್ನು ಹಿಡಿದುಕೊಂಡು ಹೊಡೆಯುತ್ತಾರೆ ಎಂದು ನಾನು ಹೇಳಿದೆ. ಏಕೆ ಎಂದು ಕೇಳಿದರು. ನಿಮ್ಮ ಹತ್ತಿರ ಕೈಯಲ್ಲಿ ದುಡ್ಡು ಇದೆಯಾ? ನಾನು ಒಬ್ಬ ರೈತ, ನನಗೆ ಹುಲ್ಲನ್ನು ಮಾರಾಟ ಮಾಡಬೇಕು. ನಾನು ಹುಲ್ಲನ್ನು ಮಾರಾಟ ಮಾಡುತ್ತೇನೆ, ನೀವು ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳಿ. ಆದರೆ ನೀವು ದುಡ್ಡು ಇಲ್ಲವೆಂದು ಹೇಳುತ್ತೀರಿ. ನೀವು ಬ್ಯಾನ್ ಮಾಡಿದರೆ ನಾವು ಮಾರಾಟವನ್ನು ಮಾಡಬಾರದು, ನೀವು ಕೊಂಡುಕೊಳ್ಳುವುದೂ ಇಲ್ಲ. ಅವನು ಅದನ್ನು ಅಲ್ಲೇ ಇಟ್ಟುಕೊಳ್ಳಬೇಕೆಂದು ಹೇಳಿದರೆ ಏನರ್ಥ? ಆದ್ದರಿಂದ ಜಿಲ್ಲಾಧಿಕಾರಿಗಳ ಕೈಯಲ್ಲಿ ಕುಡಿಯುವ ನೀರಿಗೆ ಮೇವಿಗಾಗಿ ಎಷ್ಟು ಹಣವನ್ನು ನೀವು ಕೊಟ್ಟಿದ್ದೀರಿ, ಅದು ಎಷ್ಟು ಹಣ ಇದೆ ಎಂಬುದನ್ನು ಪ್ರಾಮಾಣಿಕವಾಗಿ ಜನತೆಗೆ ತಿಳಿಸುವ ಅವಶ್ಯಕತೆ ಇದೆ.

ಸ್ವಾಮಿ, ಕೆ.ಪಿ.ಟಿ.ಸಿ.ಎಲ್.ಗೂ ಕುಡಿಯುವ ನೀರಿಗೂ ಸಂಬಂಧ ಇದೆ. ಈಗ ರೈತ ಸಂಘದವರು ಕಾವೇರಿ ಭವನಕ್ಕೆ ಮುತ್ತಿಗೆ ಹಾಕಿದರು. ಅವರಿಗೆ 12 ಗಂಟೆ ಕರೆಂಟ್ ಕೊಡುತ್ತೇವೆ ಎಂದು ಆಶ್ವಾಸನೆ ಸಿಕ್ಕಿತ್ತು. ಹನ್ನೆರಡು ಗಂಟೆಯಲ್ಲ, ಎರಡು ಗಂಟೆ ಕಾಲವೂ ಕರೆಂಟ್ ಕೊಡುತ್ತಿಲ್ಲ. ಈಗ ಮೊನ್ನೆ ಮೊನ್ನೆವರೆಗೆ ಧ್ವನಿವರ್ಧಕದಲ್ಲಿ ಊರೂರುಗಳಲ್ಲಿ ಪ್ರಚಾರ ನಡೆಯಿತು. ಎರಡೂವರೆ ತಿಂಗಳ ಹಿಂದೆ ನಮ್ಮ ಪಕ್ಷದವರಿಗೆ ಓಟು ಕೊಡಿ, ನಿಮಗೆಲ್ಲಾ ಸಮೃದ್ಧಿ ಮಾಡುತ್ತೇವೆ, ರಾಮರಾಜ್ಯ ಮಾಡುತ್ತೇವೆ ಎಂದು ಹೇಳಿದಿರಿ. ಕುಡಿಯುವ ನೀರು ಕೊಡುತ್ತೇವೆ, 24 ಗಂಟೆ ಕರೆಂಟ್ ಕೊಡುತ್ತೇವೆ ಎಂದು ಕೂಗಿ ಹೇಳಿದಂಥ ಅದೇ ಧ್ವನಿವರ್ಧಕಗಳು ಇವತ್ತು ಕೂಗುತ್ತಿವೆ, ಏನೆಂದರೆ ನಿಮ್ಮನ್ನು ಜೈಲಿಗೆ ಹಾಕುತ್ತೇವೆ ಎಂದು. ನಿಮ್ಮ ಕೆ.ಪಿ.ಟಿ.ಸಿ.ಎಲ್. ಎಂದರೆ ನಾವು ಶಾಕ್ ಕೊಡುವ ಇಲಾಖೆಯೆಂದು ತಿಳಿದುಕೊಂಡಿದ್ದೇವೆ. ಆದರೆ ಈಗ ಜೈಲಿಗೆ ಹಾಕುವ ಇಲಾಖೆಯೆಂದು ಗೊತ್ತಾಗುತ್ತಿದೆ. ಊರೂರಿಗೆ ಹೋಗಿ ಧ್ವನಿವರ್ಧಕಗಳಿಂದ ಅನೌನ್ಸ್ ಮಾಡಿದ್ದಾರೆ. ಈಗ ಕರೆಂಟ್‌ಗೆ ಸ್ವಿಚ್ ಹಾಕಿದರೆ ಜೈಲಿಗೆ ಹೋಗುತ್ತೇವೇನೋ ಎನ್ನತಕ್ಕಂಥ ಅಧೈರ್ಯದ ಭಾವನೆ ನಿರ್ಮಾಣವಾಗಿದೆ. ಕೆ.ಪಿ.ಟಿ.ಸಿ.ಎಲ್.ನ ಕತೆಯೇನೆಂದರೆ, ನೀವು ಅಕ್ರಮ ಮಾಡಿ ನಾವು ಸಕ್ರಮ ಮಾಡುತ್ತೇವೆ ಎಂಬುದಾಗಿದೆ. ನಮಗೆ ಇದು ಗೊತ್ತೇ ಇರಲಿಲ್ಲ. ಮೂರು ವರ್ಷಗಳ ಹಿಂದೆ ಇದೇ ಸದನದಲ್ಲಿ ಅಕ್ರಮ-ಸಕ್ರಮ ಮಾಡುತ್ತೇವೆ ಎಂಬ ನಿರ್ಣಯವನ್ನು ತಂದಾಗ ಇದು ಎಂಥಾದ್ದು ಎಂದು ನಮಗೆ ಗೊತ್ತಿರಲಿಲ್ಲ. ನಾವು ಮಲೆನಾಡಿನಲ್ಲಿ ಕಾನೂನನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸುವಂಥ ಜನ. ನಮ್ಮನ್ನು ಭಾಗ್ಯಜ್ಯೋತಿಯಲ್ಲಿ ಒಂದು ಲ್ಯಾಂಪ್ ಬಿಟ್ಟು ಇನ್ನೊಂದಕ್ಕೆ ಸ್ವಿಚ್ ಹಾಕಿದರೆ ಕನೆಕ್ಷನ್ ಕಿತ್ತುಹಾಕುತ್ತಿದ್ದರು. ನನ್ನ ಕ್ಷೇತ್ರದಲ್ಲಿ ಸುಮಾರು ಏಳೆಂಟು ಸಾವಿರ ಡಿಸ್‌ಕನೆಕ್ಟ್ ಆ ರೀತಿಯಾಯಿತು. ನಾವೂ ಕೂಡ ಅದನ್ನು ಸಪೋರ್ಟ್ ಮಾಡುವುದಕ್ಕೆ ಹೋಗಲಿಲ್ಲ. ಆದರೆ ಇಲ್ಲಿ ಬಂದಾಗ ಅಕ್ರಮ-ಸಕ್ರಮ ನಡೆಯುವುದು ಗೊತ್ತಾಯಿತು. ಈ ಬಗ್ಗೆ ಶಾಸಕ ಮಿತ್ರರಿಗೆ ಕೇಳಿದಾಗ ನಮ್ಮಲ್ಲಿ ಎರಡು-ಮೂರು ಸಾವಿರ ಕೊಕ್ಕೆ ಹಾಕಿ ಅಕ್ರಮವಾಗಿ ಮಾಡಿಕೊಂಡಿದ್ದೇವೆ, ಪಂಪುಸೆಟ್ಟುಗಳನ್ನು ಓಡಿಸುತ್ತೇವೆ ಎಂದರು. ಅಕ್ರಮ-ಸಕ್ರಮ ನಿರ್ಣಯ

ಆಗಿಹೋಯಿತು. ಇನ್ನು ಒಂದೆರಡು ತಿಂಗಳಲ್ಲಿ ಸಕ್ರಮಗೊಳಿಸುತ್ತಾರೆ, ಎಂದಾಗ ನಾನೂ ಕೂಡ ಊರಿಗೆ ಹೋಗಿ ಕಂಟ್ರಾಕ್ಟರುಗಳನ್ನು ಮತ್ತು ಇಂಜಿನಿಯರುಗಳನ್ನು ಕರೆದು ಹೇಳಿದೆ, ನೀವೂ ಸ್ವಲ್ಪ ಅಕ್ರಮ ಮಾಡಿ ಎಂದು. ಏಕೆಂದರೆ ಪ್ರಾಮಾಣಿಕವಾಗಿ ಇವರು ದುಡ್ಡು ಕಟ್ಟಿದರೆ ಇಂತಹ ಪರಿಸ್ಥಿತಿ ಇದೆ. ನಮ್ಮ ಕ್ಷೇತ್ರದಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ - ಇಲ್ಲಿ ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳು ಇದ್ದರೆ ಹೇಳಬೇಕು. 1993ನೇ ಇಸವಿಯಲ್ಲಿ ನಾವು ನಿಮಗೆ ಹಣ ಕೊಟ್ಟಿದ್ದೇವೆ. ವಿದ್ಯುತ್ ಒದಗಿಸುತ್ತೇವೆ ಎಂದು ಅಗ್ರಿಮೆಂಟ್ ಮಾಡಿಕೊಟ್ಟಿದ್ದೀರಿ. ಅದರ ಆಧಾರದ ಮೇಲೆ ಪಿ.ಎಲ್.ಡಿ. ಬ್ಯಾಂಕಿನಲ್ಲಿ, ಕಮರ್ಷಿಯಲ್ ಬ್ಯಾಂಕುಗಳಲ್ಲಿ ರೈತರು ಸಾಲ ತೆಗೆದುಕೊಂಡಿದ್ದಾರೆ. ಆದರೆ 1993ರಿಂದ ಇದುವರೆಗೂ ಕೂಡ ರೈತನಿಗೆ ನೀವು ವಿದ್ಯುತ್ ಸಂಪರ್ಕ ಕೊಟ್ಟಿಲ್ಲ, ಪ್ರಾಮಾಣಿಕವಾಗಿ ಕೇಳಿರತಕ್ಕಂಥವರಿಗೆ ಕೆ.ಪಿ.ಟಿ.ಸಿ.ಎಲ್.ನಿಂದ ನಿಮಗೆ ಕಂಬ ಇಲ್ಲ, ವೈರ್ ಇಲ್ಲ ಎಂದು ಹೇಳಿದರು. ಇವತ್ತು ಎಂಟು-ಒಂಬತ್ತು ವರ್ಷಗಳಿಂದ ಅವರಿಗೆ ಕನೆಕ್ಷನ್ ಕೊಟ್ಟಿಲ್ಲವೆಂದರೆ ಆ ರೈತ ಏನು ಮಾಡಬೇಕು? ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬ್ಯಾಂಕಿನವರು ಅವನ ಮನೆ ಜಪ್ತಿ ಮಾಡುತ್ತಿದ್ದಾರೆ. ಇವತ್ತು ಯಾರು ಅಕ್ರಮ-ಸಕ್ರಮದಲ್ಲಿ ಸಂಪರ್ಕವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಯಾರು ಕೇಳಬೇಕಿರತಕ್ಕಂಥ ರೈತರು ಇದ್ದಾರೆ, ಅವರು ತೆಗೆದುಕೊಳ್ಳುತ್ತಿದ್ದಾರೆ. ಅವರದ್ದು ಒಂದು ರೇಟ್ ಇರುತ್ತದೆ. ನೀನೇ ಕಂಬ ಹಾಕಿಕೋ, ವೈರ್ ಹಾಕಿಕೋ ಮತ್ತು ಹತ್ತು-ಇಪ್ಪತ್ತು ಸಾವಿರ ರೂಪಾಯಿಗಳನ್ನು ಇಲಾಖೆಗೆ ಕಟ್ಟು ಎಂದು ಹೇಳುತ್ತಾರೆ. ಕಟ್ಟದೇ ಇರತಕ್ಕಂಥವರಿಗೂ ಕೂಡ ಕರೆಂಟ್ ತೆಗೆದುಕೊಂಡು ಹೋದವನಿಗೆ ಇದೊಂದು ಅವಕಾಶ. ಯಾರು ಬಡವ ಇದ್ದಾನೆ, ಯಾರು ಸಾಲ ಮಾಡಿ ಒಂದೆರಡು ಎಕರೆ ಜಮೀನಿಗೆ ನೀರು ಹಾಯಿಸಬೇಕೆಂದು ಬಯಸುತ್ತಾನೆ, ಅವನಿಗೆ ನೀವು ಕೊಟ್ಟಿರತಕ್ಕಂಥಾದ್ದು ಈ ವಿಷ. ಆತ್ಮಹತ್ಯೆ ಮಾಡಿಕೊಂಡು ಸಾಯಿ ಎನ್ನುವ ರೀತಿಯಲ್ಲಿ ನೀವು ಮಾಡಿದ್ದೀರಿ. ಒಂಬತ್ತು ವರ್ಷಗಳಿಂದ ವಿದ್ಯುತ್ ಸಂಪರ್ಕ ಕೊಟ್ಟಿಲ್ಲವೆಂದರೆ ನಿಮ್ಮ ಇಲಾಖೆಗೆ ಬಾಗಿಲು ಹಾಕುವುದು ಒಳ್ಳೆಯದು. ಏಕೆಂದರೆ ಇದರಿಂದ ಗೌರವ ಬರುವುದಿಲ್ಲ. ನ್ಯಾಯವಾದ ರೀತಿಯಲ್ಲಿ ವಿದ್ಯುತ್ ಸಂಪರ್ಕ ಕೊಡಿ ಎಂದು ಕೇಳಿದರೆ ನೀವು ಕೊಡುವುದಿಲ್ಲ. ಅಕ್ರಮ-ಸಕ್ರಮ ಎನ್ನುವ ಮಾತನ್ನು ಹೇಳುತ್ತೀರಿ. ಹಾಗಾದರೆ ನಮ್ಮ ಮಾನ್ಯ ಖರ್ಗೆ ಸಾಹೇಬರು ಇದ್ದಾರೆ. ಅವರು ಒಂದು ಡೇಟ್ ಫಿಕ್ಸ್ ಮಾಡಬೇಕು. ಈ ಡೇಟ್‌ನಿಂದ ಈ ಡೇಟ್‌ವರೆಗೆ ನೀವು ಎಲ್ಲಿ ಬೇಕಾದರೂ ದರೋಡೆ ಮಾಡಿ, ನಾವು ನಿಮ್ಮನ್ನು ಮನ್ನಾ ಮಾಡುತ್ತೇವೆ. ಎಷ್ಟು ಫೆನಾಲ್ಟಿ ಎಂದು ಸರ್ಕಾರಕ್ಕೆ ಕಟ್ಟಿ ಎಂದು ಹೇಳಲಿ. ಹಣ ಇಲ್ಲದಿದ್ದರೆ ಬೇರೆ ಏನಾದರೂ ವ್ಯವಸ್ಥೆಯನ್ನು ಮಾಡಬೇಕು. ಅವರು ಏನು ವಿದ್ಯುತ್ ಸಂಪರ್ಕ ಕೇಳುತ್ತಾರೆ, ಅವರಿಗೆ ಸಮಯಕ್ಕೆ ಸರಿಯಾಗಿ ಕೊಡುತ್ತಾ ಹೋಗಿದ್ದರೆ, ಈ ಪರಿಸ್ಥಿತಿ ಬರುತ್ತಿರಲಿಲ್ಲ. ಇವತ್ತು ಈ ಅಕ್ರಮ ಮಾಡಿದವರಿಗೆ ಸಂಪರ್ಕ ಕೊಡುವುದು ನಿಮಗೆ ಸಾಧ್ಯವಾಗುವುದಾದರೆ, ಅವರಿಗೆ ನ್ಯಾಯವಾಗಿ ಕೊಡುವುದಕ್ಕೆ ನಿಮ್ಮ ಹತ್ತಿರ ವಿದ್ಯುತ್ ಇರಲಿಲ್ಲವೇನು? ನಿಮಗೆ ಏಕೆ ಕೊಡುವುದಕ್ಕೆ ಆಗಲಿಲ್ಲ? ಜನರಿಗೆ ಅಕ್ರಮ ಮಾಡುವುದಕ್ಕೆ ಕಲಿಸಿರತಕ್ಕಂಥಾದ್ದೇ ಈ ಕೆ.ಪಿ.ಟಿ.ಸಿ.ಎಲ್. ಇದೇ ಇಲಾಖೆ ಹೀಗೆ ಮಾಡುವುದಕ್ಕೆ

ಕಲಿಸಿಗುವುಂಥಾದ್ದು. ಇವತ್ತು ಹಳ್ಳಿಗೆ ನೀವು ಹೋಗುವ ಹಾಗಿಲ್ಲ. ಈಗಾಗಲೇ ಮಾನ್ಯ ಸಿಂಧ್ಯಾರವರು ಹೇಳಿದಹಾಗೆ ಜನ ಕಣಿಗೆ ತೆಗೆದುಕೊಂಡು ಬರುತ್ತಾರೆ. ನಾಳೆ ನೀವು ಹೋದರೆ ಏನು ಗತಿಯಾಗುತ್ತದೆ ಎಂದು ನೋಡಿ. ನಮ್ಮ ಮಲೆನಾಡು ಏರಿಯಾದಲ್ಲಿ ಪರವಾಗಿಲ್ಲ, ಅಲ್ಲೊಂದು ಇಲ್ಲೊಂದು ಅಂತ ಮನೆ ಇರುತ್ತದೆ. ಆದರೆ ಬಯಲು ಸೀಮೆಯಲ್ಲಿ ಮೂರು-ನಾಲ್ಕು ಸಾವಿರ ಮನೆಗಳು ಇರತಕ್ಕಂಥ ಹಳ್ಳಿಗಳಿಗೆ ಇವತ್ತು ನಿಮ್ಮ ಪೋಲೀಸ್ ಮತ್ತು ಕೆ.ಪಿ.ಟಿ.ಸಿ.ಎಲ್. ಅಧಿಕಾರಿಗಳು ಹೋಗುವುದು ಕಷ್ಟ. ಇಂತಹ ಪರಿಸ್ಥಿತಿಯನ್ನು ತಂದು ಹಾಕಿದ್ದೀರಿ. ಆಮೇಲೆ ಫೆನಾಲ್ಟಿ ಅಂತ ಏಕೆ ಸ್ವಾಮಿ ಇದನ್ನು ಕಟ್ಟಬೇಕು? ಒಂಬತ್ತು-ಹತ್ತು ಸಾವಿರ ರೂಪಾಯಿಗಳ ಫೆನಾಲ್ಟಿಯನ್ನು ಕಟ್ಟಿಸಿಕೊಂಡು ನೀವು ಎಷ್ಟು ಹಣ ಮಾಡುವವರು? ಇದರಿಂದ ಕೆ.ಪಿ.ಟಿ.ಎಲ್.ನ ಉದ್ಧಾರ ಮಾಡುವುದಕ್ಕೆ ಸಾಧ್ಯವಾಗುತ್ತದೆಯಾ? ನಿಮ್ಮ ಹತ್ತಿರ ಹತ್ತು ಸಾವಿರ ಕೋಟಿಗಿಂತ ಹೆಚ್ಚು ಡಿಪಾಜಿಟ್ ಇದೆ. ಅದಕ್ಕೆ ಏನಾದರೂ ಬಡ್ಡಿ ಕೊಟ್ಟಿದ್ದೀರಾ? ನಿನ್ನೆ ಒಬ್ಬರು ಮಿಲ್ ಮಾಲೀಕರು ನನ್ನ ಹತ್ತಿರ ಬಂದಿದ್ದರು. ಅವರು ಅಡಿಷನಲ್ ಕರೆಂಟ್ ಕೇಳಿದ್ದು ಎಷ್ಟು ಎಂದರೆ 30 ಹೆಚ್.ಪಿ.ಯಷ್ಟು ಕೇಳಿದ್ದಾರೆ. ಅವರಿಗೆ ಒಂದೂಕಾಲು ಲಕ್ಷ ರೂಪಾಯಿ ಡೆಪಾಸಿಟ್ ಕಟ್ಟಿ ಎಂದು ನೋಟೀಸ್ ಕೊಟ್ಟಿದ್ದಾರೆ. ಒಂದೂಕಾಲು ಲಕ್ಷ ರೂಪಾಯಿಗಳ ಡಿಪಾಜಿಟ್ ಕಟ್ಟಿದರೆ ಅವರಿಗೆ 30 ಹೆಚ್.ಪಿ. ವಿದ್ಯುತ್ ಕೊಡುತ್ತೀರಿ. ನಿಮ್ಮದು ಟಿ.ಸಿ. ಬೇಡ, ನಿಮ್ಮ ಹೊಸ ಲೈನ್ ಬೇಡ, ನಿಮ್ಮ ಇನ್‌ವೆಸ್ಟ್‌ಮೆಂಟ್ ಏನೂ ಇಲ್ಲ. ಅವರಿಗೆ ಒಂದೂಕಾಲು ಲಕ್ಷ ರೂಪಾಯಿಗಳ ಡಿಪಾಜಿಟ್ ಕಟ್ಟುವುದಕ್ಕೆ ಹೇಳಿದ್ದೀರಿ. ಅವರ ಡಿಪಾಜಿಟ್‌ಗೆ ಬಡ್ಡಿ ಏನು ಕೊಡುತ್ತೀರಿ ಎಂದು ಕೇಳಿದರೆ ಬಡ್ಡಿ ಕೊಡುವುದಿಲ್ಲವೆಂದು ಹೇಳುತ್ತೀರಿ. ಹಾಗಾದರೆ ಕೆ.ಪಿ.ಟಿ.ಸಿ.ಎಲ್. ಪರಿಸ್ಥಿತಿ ಏನು? ಅದರ ಆಡಿಟ್ ಮಾಡಿ ಸರಿ ಮಾಡಬೇಕು, ಅದನ್ನು ನಡೆಸುವುದಕ್ಕೆ ಆಗದಿದ್ದರೆ ಮುಚ್ಚಬೇಕು. ಇಲ್ಲದಿದ್ದರೆ ಬೇರೆ ಏನಾದರೂ ವ್ಯವಸ್ಥೆ ಮಾಡಬೇಕಾಗುತ್ತದೆ. ಅದರ ಡಿಪಾಜಿಟ್ ತುಂಬಲಿಕ್ಕಾಗಿ ಇಡೀ ನಮ್ಮ ರಾಜ್ಯದ ಜನ ತಲೆ ಕೊಡುವಂತಹ ಪರಿಸ್ಥಿತಿ ಏನೂ ಇಲ್ಲ. ಏಕೆಂದರೆ ಅಕ್ರಮ ಮಾಡಿಕೊಂಡವರಿಗೆ ಸಾರಾಸಗಟಾಗಿ ಆ ಇಲಾಖೆ ಬೆಂಬಲ ಕೊಡುತ್ತಿದೆ. ಆದರೆ ನಿಜವಾದ ಗ್ರಾಹಕರು ಯಾರು ಇದ್ದಾರೆ ಅವರಿಗೆ ದೊಡ್ಡ ಹಿಂಸೆ ಕೊಡತಕ್ಕಂಥ ಕೆಲಸವನ್ನು ಅವರು ಇವತ್ತು ಮಾಡುತ್ತಿದ್ದಾರೆ. ಅಕ್ರಮ, ಸಕ್ರಮದಿಂದ ಏನಾಗಿದೆ ಅಂದರೆ, ನಮ್ಮ ಹಳ್ಳಿಯಲ್ಲಿ ಸಾಕಷ್ಟು ಟಿ.ಸಿ.ಗಳು ಸುಟ್ಟು ಹೋಗಿವೆ. ಲೆಕ್ಕ ತೆಗೆದು ನೋಡಬೇಕು, ಕೆ.ಪಿ.ಟಿ.ಸಿ.ಎಲ್.ಗೆ ಎಷ್ಟು ನಷ್ಟವಾಗಿದೆ ಇದರಿಂದ ಅಂತ ಹೇಳಿ, ಸಿಕ್ಕಿಸಿಕ್ಕದವರೆಲ್ಲಾ ಲೈನ್ ಎಳೆಯುತ್ತಿದ್ದಾರೆ. ಆ ಒಂದು ಟಿ.ಸಿ.ಯಲ್ಲಿ ಎಷ್ಟು ಕೆಪ್ಯಾಸಿಟಿ ಇದೆ, ಎಷ್ಟು ವಿದ್ಯುತ್‌ನ್ನು ಅಲ್ಲಿ ಬಳಕೆ ಮಾಡಿಕೊಳ್ಳಬಹುದು. ಆ ಬಗ್ಗೆ ಯಾವ ಲೆಕ್ಕಾಚಾರಗಳೇ ಅಲ್ಲಿ ಇಲ್ಲ. ಇದರ ಪರಿಣಾಮವಾಗಿ ದಿವಸಕ್ಕೆ ಸಾವಿರಾರು ಟಿ.ಸಿ.ಗಳು ಸುಟ್ಟು ಹೋಗುತ್ತಿವೆ. ಇದನ್ನು ತಂದು ಹಾಕುವುದಕ್ಕೆ ಎಷ್ಟು ದುಡ್ಡು ಕೆ.ಪಿ.ಟಿ.ಸಿ.ಎಲ್.ಗೆ ಖರ್ಚಾಗುತ್ತದೆ ಹೇಳಿ. ಇದನ್ನು ಯಾವ ಕಾರಣಕ್ಕಾಗಿ ಮಾಡುತ್ತಿದ್ದೀರಿ ಎಂದು ನನಗಂತೂ ಕೂಡ ಗೊತ್ತಾಗುತ್ತಿಲ್ಲ. ಒಟ್ಟಾರೆ ಲೆಕ್ಕಾಚಾರ ಬೇಕು. ಆ ಲೆಕ್ಕಾಚಾರವೇ ಇಲ್ಲದೇ ಇರುವಂತಹ ಒಂದು ಇಲಾಖೆಯನ್ನು ತಾವು ನಡೆಸಿ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಆ

ಲೆಕ್ಕಾಚಾರವನ್ನು ಹೇಗೆ ಮಾಡಬೇಕೆನ್ನುವುದನ್ನು ಕೂಡ ವಿಚಾರ ಮಾಡಬೇಕಾಗುತ್ತದೆ. ಮೊನ್ನೆ ತಾವು ಐ.ಪಿ. ಸೆಟ್‌ಗಳಿಗೆ ಒಂದು ಪ್ರಕಟಣೆಯನ್ನು ಕೊಟ್ಟಿದ್ದೀರಿ. ಎಲ್ಲಾ ಪತ್ರಿಕೆಗಳಲ್ಲಿ ಸಹ ಬಂದಿದೆ. 300 ರೂಪಾಯಿಗಳು ಇರುವಂತಹ ಡಿಪಾಜಿಟ್, 1200 ರೂಪಾಯಿ ಒಂದು ಹೆಚ್.ಪಿ.ಗೆ ಅಂತ. ಇದನ್ನು ಹೇಗೆ ತೆಗೆದುಕೊಳ್ಳುತ್ತೀರಿ ಎಂಬುದು ನನಗೆ ಗೊತ್ತಿಲ್ಲ. ಇವತ್ತು ತಾವು ತಕರಾರು ಹಾಕಿ ಎಂದು ಹೇಳಿದ್ದೀರಿ. ಆ ಫಾರಮ್‌ಗಳೇ ನಮ್ಮ ಊರಿನಲ್ಲಿ ಸಿಗುತ್ತಿಲ್ಲ. ಹಳ್ಳಿಯಲ್ಲಿರತಕ್ಕಂಥ ಒಬ್ಬ ಕೊನೆಯ ಮನುಷ್ಯ ಬೆಂಗಳೂರಿಗೆ ಬಂದು ತಕರಾರು ಹಾಕುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಇದು ಹೇಗೆ ಸಾಧುವಾಗುತ್ತದೆಂಬುದು ನನಗೆ ಗೊತ್ತಾಗುತ್ತಿಲ್ಲ. ಒಟ್ಟಾರೆ ನನಗೆ ಗೊತ್ತಿರುವ ಹಾಗೆ ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಮಾತೂ ಸಹ ಕೆ.ಪಿ.ಟಿ.ಸಿ.ಎಲ್.ನಲ್ಲಿ ನಡೆಯುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ, ನಿಮಗೆ 18 ಗಂಟೆ ವಿದ್ಯುತ್ ಕೊಡುತ್ತೇವೆಂದು, ಕೆ.ಪಿ.ಟಿ.ಸಿ.ಎಲ್.ನವರು ಹೇಳುತ್ತಾರೆ ನಾವು ಕಿತ್ತು ಹಾಕುತ್ತೇವೆಂದು. ಇವರಲ್ಲಿ ಒಂದು ಕೋ-ಆರ್ಡಿನೇಷನ್ ಇಲ್ಲ. ಇವತ್ತು ಆ ಕೆ.ಪಿ.ಟಿ.ಸಿ.ಎಲ್.ನವರು ನಮ್ಮದು ಸ್ವಾಯತ್ತ ಸಂಸ್ಥೆ ಎಂದು ಈಗಾಗಲೇ ಶುರು ಮಾಡಿದ್ದಾರೆ. ಅವರು ನೀವು ಕುಳಿತುಕೊಂಡು ಯಾವುದಾದರೊಂದು ಹೇಳಿಕೆಗಳನ್ನು ಕೊಡುವಂತಹ ಅವಶ್ಯಕತೆ ಇದೆ, ಇಲ್ಲದಿದ್ದರೆ ಅನಾವಶ್ಯಕವಾಗಿ ಆ ಕೆ.ಪಿ.ಟಿ.ಸಿ.ಎಲ್. ಅಧಿಕಾರಿಗಳು ಊರುಗಳಲ್ಲಿ ಇರುವ ಹಾಗೆ ಇಲ್ಲ. ಲೈನ್‌ಮ್ಯಾನ್‌ಗಳಿಂದ ಹಿಡಿದು ಜೆ.ಇ. ಗಳವರೆಗೂ ಈಗಾಗಲೇ ಅಡ್ಡಾಡುವುದಕ್ಕೆ ಶುರು ಮಾಡಿದ್ದಾರೆ. ಈ ಪರಿಸ್ಥಿತಿಯಲ್ಲಿ ಅವರು ಬದುಕಬೇಕಾದಂತಹ ಪರಿಸ್ಥಿತಿ ಇದೆ. ಹೀಗಾಗಿ ಕೆ.ಪಿ.ಟಿ.ಸಿ.ಎಲ್. ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಸರಿಯಾಗಿ ನಿಭಾಯಿಸದೇ ಹೋದರೆ ಇನ್ನೊಂದು 2-3 ತಿಂಗಳಲ್ಲಿ ಈ ರಾಜ್ಯದಲ್ಲಿ ಬಹಳ ಕ್ಷೋಭೆಯುಂಟಾಗುತ್ತದೆ. ಶಾಂತಿಭಂಗವುಂಟಾಗತಕ್ಕಂಥ ಕೆಲಸಗಳೂ ಸಹ ಆಗುತ್ತವೆ. ಜನರಿಗೆ ಕುಡಿಯುವ ನೀರು ಬಹಳ ಅಗತ್ಯವಾಗಿದೆ. ನೀರು, ಗಾಳಿ, ಅನ್ನ ಇವೆಲ್ಲಾ ಇಲ್ಲದಿದ್ದರೆ ಜನ ಬಹಳ ದಿವಸ ಸಹನೆಯಿಂದ ಕೂರುವುದಕ್ಕೆ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಪರಿಹಾರಾತ್ಮಕವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ನಾನು ಕೆರೆ ಬಗ್ಗೆ ಹೇಳುವುದಿಲ್ಲ. ತಾವು 2-3 ಯೋಜನೆಗಳನ್ನು ಪ್ರಕಟ ಮಾಡಿದಿರಿ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಂದು ಸವಳಂಗ ಕೆರೆಯ ಗುದ್ದಲಿ ಪೂಜೆ ಮಾಡಿದರು. ಮೊನ್ನೆಯಿನ ಆ ಅಚ್ಚುಕಟ್ಟು ಪ್ರದೇಶದ ರೈತರು ಗೋಳಾಡುತ್ತಿದ್ದಾರೆ. ನಾಳೆ ಏನಾದರೂ ಮಳೆ ಬಂದರೆ ಅದನ್ನು ತಡೆ ಹಿಡಿದುಕೊಳ್ಳುವುದಕ್ಕೂ ಕೂಡ ಆಗುವುದಿಲ್ಲ. ವಾಹನಗಳು ಹೋಗುವುದಕ್ಕೆ ದಂಡೆ ಒಡೆದು ಹಾಕಿದ್ದಾರೆ. ದಯವಿಟ್ಟು ಅದನ್ನು ಕಟ್ಟಿಸಿ ಕೊಡಿ ಎಂದು ಕೇಳುತ್ತಿದ್ದಾರೆ. ನೀವು ಏನೂ ಮಾಡುವುದಿಲ್ಲ. ಅವತ್ತಿನಿಂದ ಇವತ್ತಿನವರೆಗೂ ತಾವು ಒಂದು ಬುಟ್ಟಿ ಮಣ್ಣೂ ಸಹ ತೆಗೆದಿಲ್ಲ. ಇಡೀ ಸರ್ಕಾರಿ ಯಂತ್ರ ಅಲ್ಲಿ ಹೋಗಿ ಎರಡು ದಿವಸ ರಾತ್ರಿ ಹಗಲು ಕೆಲಸ ಮಾಡಿತು. ಮಾನ್ಯ ಜಿಲ್ಲಾ ಮಂತ್ರಿಗಳೂ ಸಹ ಆ ಕಡೆ ಹೋಗುವಂತೆ ಇಲ್ಲ.

ಶ್ರೀ ಎಸ್.ಕುಮಾರ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಪ್ರಸ್ತಾಪ

ಮಾಡಿದರು ಅಂದರೆ ಒಂದು ಬುಟ್ಟಿ ಮಣ್ಣು ತೆಗೆಯಲಿಲ್ಲ ಅಂದರೆ ರೈತರ ಶ್ರಮದಾನದಿಂದ ಮಾಡಿಸತಕ್ಕಂಥಾದ್ದು, ಆ ಕೆಲಸವನ್ನು ನಾವು ಈಗಾಗಲೇ ಶುರು ಮಾಡಿದ್ದೇವೆ. ಆದರೆ ಕೆಲವು ಕೆಲಸಗಳನ್ನು ಎನ್.ಜಿ.ಒ.ಗಳ ಕಡೆಯಿಂದ ಮಾಡಿಸತಕ್ಕಂಥ ವಿಚಾರ ಇದೆ. ಅದಕ್ಕೆ ಸರ್ಕಾರದ ನಿಯಮಗಳು ಇವೆ. ಆ ಪ್ರಕಾರ ಮಾಡಬೇಕಾದರೆ ಸ್ವಲ್ಪ ಕಾಲಾವಕಾಶ ಕೊಡಬೇಕಾಗುತ್ತದೆ. ಈ ಕಾರ್ಯಕ್ರಮವನ್ನು ಒಂದು ವರ್ಷಕ್ಕೆ ಸೀಮಿತ ಮಾಡಿ ಮುಂದುವರಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಇದು ಹತ್ತಾರು ವರ್ಷಗಳ ಕಾಲ ನಡೆಯಬೇಕೆನ್ನುವ ದೃಷ್ಟಿಯಿಂದ ಸ್ವಲ್ಪ ತಡವಾಗಿದ್ದರೂ ಕೂಡ ಸರಿಯಾಗಿ ಆಗಬೇಕು. ತಾವು ಏನು ಹೇಳಿದ್ದೀರಿ ಏರಿ ಒಡೆದು ಬಿಟ್ಟು ಆಗಲ ಮಾಡಿದ್ದಾರೆ ಎಂದು ಅದು ಮಣ್ಣು ಹೋಗಬೇಕೆಂದರೆ ಏರಿ ಒಡೆಯಲೇಬೇಕು. ಮಳೆ ಬರುವುದಕ್ಕಿಂತ ಮುಂಚೆ ಅದನ್ನು ಮುಚ್ಚಲೇಬೇಕಾಗುತ್ತದೆ. ಮುಚ್ಚದೇ ಹಾಗೆ ಯಾರಾದರೂ ಕೆಲಸ ಮಾಡುತ್ತಾರಾ? ಇದು ತಮಗೂ ಗೊತ್ತಿದೆ. ಆಮೇಲೆ ತಿಂಗಳಾನುಗಟ್ಟಲೆ ಕೆಲಸ ಮಾಡಿದರು ಎಂದು ಹೇಳಿದಿರಲ್ಲಾ ಅದು ತಿಂಗಳಾನುಗಟ್ಟಲೆ ಅಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಅವರು ಏಕೆ ಇದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗುತ್ತಾರೆ? ಮಾನ್ಯ ಮುಖ್ಯಮಂತ್ರಿಗಳು ಒಂದು ಕಾರ್ಯಕ್ರಮಕ್ಕೆ ಬರುವುದೆಂದರೆ ಹೇಗಿರಬೇಕು? ಈಗ ನಾನೇ ಒಂದು ಕಾರ್ಯಕ್ರಮಕ್ಕೆ ಕರೆಯುತ್ತಿದ್ದೆ. 2-3 ಸಲ, ನಮ್ಮ ಆಸ್ಪತ್ರೆ ಉದ್ಘಾಟನೆಗೆ ಬನ್ನಿ ಎಂದು. ಅಲ್ಲಿನ ಅಧಿಕಾರಿಗಳು ಏನು ಹೇಳಿದರು ಗೊತ್ತೇ? ಮಾನ್ಯ ಮುಖ್ಯಮಂತ್ರಿಗಳು ಬರುವುದು ಸ್ವಲ್ಪ ಎಚ್ಚರಿಕೆಯಿಂದ ಇರಿ. ಅಲ್ಲಿ ಕೆಲಸ ಪೂರ್ಣ ಆಗದೇ ತಾವು ಅವರ ಹತ್ತಿರ ಉದ್ಘಾಟನೆ ಮಾಡಿಸಬಾರದು, ಅದು ಒಳ್ಳೆಯದಲ್ಲ ಎಂದು ಹೇಳಿದರು. ಆಗ ನನಗೆ ಹೌದು ಅನ್ನಿಸಿತು. ಆದರೆ ನೀವು ದುಡ್ಡು ಕಾಸು ಏನೂ ಇಲ್ಲದೇ ಬರೀ ಕೈಯಲ್ಲಿ ಮುಖ್ಯ ಮಂತ್ರಿಗಳನ್ನು ಕರೆದುಕೊಂಡು ಹೋಗಿ, ಪ್ರೆಸ್‌ನೆಲ್ಲಾ ಕರೆದುಕೊಂಡು ಹೋಗಿ ತಾವು ಉದ್ಘಾಟನೆ ಮಾಡಿಸಿದರೆ, ರೈತರು ಮಾಡುವ ಕೆಲಸಕ್ಕೆ ಮುಖ್ಯಮಂತ್ರಿಗಳನ್ನು ಏಕೆ ಕರೆದುಕೊಂಡು ಹೋಗಬೇಕಾಗಿತ್ತು?

ಶ್ರೀ ಎಸ್.ಕುಮಾರ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ದುಡ್ಡು ಇಲ್ಲ ಎನ್ನುವುದನ್ನು ನೀವು ನೀವೇ ತೀರ್ಮಾನ ಮಾಡಿಕೊಳ್ಳುವಂತಹ ಅಗತ್ಯ ಇಲ್ಲ, ನಾವು ಹಣಕಾಸನ್ನು ಒದಗಿಸಿಕೊಂಡೇ ಈ ಕಾರ್ಯಕ್ರಮ ಮಾಡಿರತಕ್ಕಂಥಾದ್ದು. ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಅಲ್ಲಿ ಒಂದು ಮೇಜರ್ ಸಮಸ್ಯೆ ಏನು ಬರುತ್ತದೆ ಅಂದರೆ ಇದು ರೈತರನ್ನು ಇಟ್ಟುಕೊಂಡು ಮಾಡುವಂತಹ ಕೆಲಸ. ಟೆಂಡರ್ ಕರೆದರೆ ಕಂಟ್ರಾಕ್ಟರ್ ಬಂದು ಇನ್ನೂ ಸ್ವಲ್ಪ ದಿವಸ ಮುಂದೆ ಹೋಗುತ್ತಾನೆ ಎನ್ನುವ ವಾದದ ಮೇಲೆ ಆದಷ್ಟು ರೈತರನ್ನು ಇಟ್ಟುಕೊಂಡೇ ಕೆಲಸ ಮಾಡಬೇಕೆನ್ನುವ ಉದ್ದೇಶದಿಂದ ನಾವು ಸ್ವಲ್ಪ ತಡ ಮಾಡುತ್ತಿದ್ದೇವೆ. ನಾವು ಟೆಂಡರ್ ಕರೆದರೆ ಒಂದು ವರ್ಷವಾಗುತ್ತದೆ, ಆಮೇಲೆ ಆ ಕಂಟ್ರಾಕ್ಟರ್‌ನ್ನು ಹುಡುಕಿಕೊಂಡು ಬರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸ್ವಲ್ಪ ಸಮಯ ಕಾದರೆ ಎಲ್ಲರಿಗೂ

ಅನುಕೂಲವಾಗುತ್ತದೆ. ತಮ್ಮ ಮಾಹಿತಿಗೋಸ್ಕರ ಇನ್ನು ಎರಡು ಮೂರು ದಿವಸ ಸಮಯ ಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ತಾವು ಇದುವರೆಗೂ ಎಷ್ಟು ಹಣ ರಿಲೀಜ್ ಮಾಡಿದ್ದೀರಿ ಹೇಳಿ. ಆಯಿತು, ಇನ್ನೊಂದು ತಿಂಗಳಲ್ಲಿ ಶುರು ಮಾಡಿ.

ಶ್ರೀ ಕುಮಾರ್ ಬಂಗಾರಪ್ಪ: ಕರ್ನಾಟಕ ನೀರಾವರಿ ನಿಗಮದಿಂದ 20 ಕೋಟಿ ರೂಪಾಯಿಗಳನ್ನು ಅಲ್ಲಿಂದ ತೆಗೆದುಕೊಂಡಿದ್ದೇವೆ. ನಮ್ಮಲ್ಲಿರತಕ್ಕಂಥ ಹಣ 7 ಕೋಟಿ ರೂಪಾಯಿಗಳನ್ನು ಅದಕ್ಕೆ ಹೊಂದಿಸಿಕೊಂಡಿದ್ದೇವೆ. ಮೊದಲನೇ ಸ್ಟೇಜ್‌ಗೆ ಎಲ್ಲಾ ಸಂಪೂರ್ಣವಾಗಿ ಹೋಬಳಿಗೆ ಒಂದು ಕೆರೆಯಂತೆ 195 ಕೋಟಿ ರೂ. ಅದಕ್ಕೆ ಬೇಕಾಗಿರುವಂತಾದ್ದು. ಮೊದಲನೇ ಹಂತಕ್ಕೆ ಕ್ಷೇತ್ರವಾರು ಏನು ತೆಗೆದುಕೊಂಡಿದ್ದೇವೆ ಅದಕ್ಕೆ ಹಣಕಾಸಿನ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಮುಖ್ಯಮಂತ್ರಿಗಳು ಹೋದ ಅಧಿವೇಶನದಲ್ಲಿ ತಮ್ಮ ಪ್ರಾಮಾಣಿಕವಾದ ಅಭಿಪ್ರಾಯವನ್ನು ಹೇಳಿಕೊಂಡಿದ್ದಾರೆ. ಅದೇನೆಂದರೆ ವರ್ಲ್ಡ್ ಬ್ಯಾಂಕ್‌ನಿಂದ ದುಡ್ಡು ಬರಬೇಕು, ಅದು ಬಂದ ಮೇಲೆ ಮಾಡುತ್ತೇವೆಂದು ಏನೋ ಉದ್ಘಾಟನೆ ಮಾಡಿದ್ದೇವೆ ಎಂದು ಹೇಳಿದ್ದರು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಕಡತದಲ್ಲಿದೆ. ಹೋದ ಅಧಿವೇಶನದಲ್ಲಿ ಚರ್ಚೆಯಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ತಾವು ಮತ್ತೆ ತಪ್ಪು ಕಲ್ಪನೆ ಮಾಡಿಕೊಳ್ಳುತ್ತಿದ್ದೀರಿ. ಜಲ ಸಂವರ್ಧನೆ ಯೋಜನೆಗೂ ರೈತ ಕಾಯಕ ಕೆರೆಗೂ ಸಂಬಂಧಪಟ್ಟಂತೆ ಎರಡೂ ಬೇರೆ ಬೇರೆ ಕಾರ್ಯಕ್ರಮಗಳು. ಜಲ ಸಂವರ್ಧನ ಯೋಜನೆಯೇ ಸಪರೇಟ್. ರೈತ ಕಾಯಕ ಕೆರೆ ಯೋಜನೆ ಸಂಪೂರ್ಣವಾಗಿ ನಾವು ರಾಜ್ಯ ಹಣಕಾಸು ಯೋಜನೆಯಿಂದ ಮಾಡಿರತಕ್ಕಂಥ ಕಾರ್ಯಕ್ರಮ. ಅಫೈಸರ್ ಕಮಿಟಿಯವರು ಮಾಡಿಕೊಟ್ಟಿದ್ದೇವೆ ಎನ್ನುವ ಮಾತು ಬಂದಿದೆ. ಆದರೆ, ಅಧಿಕಾರಿಗಳಿಂದ ನಮಗೆ ಆ ಬಗ್ಗೆ ಇನ್ನೂ ಮಾಹಿತಿ ಬಂದಿಲ್ಲ. ಆದರೆ, ರೈತ ಕಾಯಕ ಕೆರೆ ಕಾರ್ಯಕ್ರಮವನ್ನು ಮಾತ್ರ ನಾವು ತತಕ್ಷಣ ಮಾಡುತ್ತೇವೆ. ಅದಕ್ಕೂ ವರ್ಲ್ಡ್ ಬ್ಯಾಂಕ್ ಸ್ಕೀಮ್‌ಗೂ ನಮಗೂ ಸಂಬಂಧವಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ನೀವು ಏನೂ ಹಣ ಇಲ್ಲದೇ ಬರೀ ಕೈಯಲ್ಲಿ ಎರಡೂವರೆ ವರ್ಷದಿಂದ ಸಾಕಷ್ಟು ಪ್ರಚಾರ ಪಡೆದುಕೊಂಡಿದ್ದೀರಿ. ಎಲ್ಲಾ ಕಡೆಯಿಂದ ಈ ಸರ್ಕಾರ ಭಾರಿ ದೊಡ್ಡ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಅಪ್ರಿಸಿಯೇಷನ್ ಬಂದಿದೆ. ಆದರೆ ಒಂದು ಕೆರೆಯನ್ನು ತಾವು ಎಲ್ಲಿಯಾದರೂ ಮಾಡಿದ್ದರೆ ಹೇಳಿ. ನಮ್ಮ ಹಳ್ಳಿಯವರನ್ನು, ರೈತರನ್ನು, ಮುಗ್ಧರಾಗಿರತಕ್ಕ ಜನರಿಗೆ ಇನ್ನು ಎಷ್ಟು ವರ್ಷ ಈ ರೀತಿಯ ಪ್ರಚಾರ ಮಾಡುತ್ತೀರಿ ಹೇಳಿ.

ಶ್ರೀ ಕುಮಾರ್ ಬಂಗಾರಪ್ಪ: ಒಂದು ಕೆರೆ ಮಾಡುವುದಕ್ಕೂ ಕಾನೂನು ಒಂದೇ, ನೂರು ಕೆರೆ ಮಾಡುವುದಕ್ಕೂ ಕಾನೂನು ಒಂದೇ. ನೂರು ಕೆರೆಗೆ ಕಾನೂನು ಸಪರೇಟಾಗಿ ಮಾಡಿಕೊಳ್ಳುತ್ತೀರಾ? ಒಂದು ಕೆರೆಗೆ ಏನು ಕಾನೂನು ಅನ್ವಯಿಸುತ್ತೆ ಅದನ್ನು ಇಡೀ ರಾಜ್ಯದ ಕೆರೆಗಳಿಗೆ ಅನ್ವಯ ಮಾಡಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ: ಒಂದು ಕೆರೆ ಮಾಡದೇ ಇರುವುದಕ್ಕೂ ಒಂದೇ ಕಾರಣ. ನೂರು ಕೆರೆ ಮಾಡದೇ ಇರುವುದಕ್ಕೂ ಅದೇ ಕಾರಣ ಅಷ್ಟೆ.

ಶ್ರೀ ಎಸ್.ಎನ್.ಪಾಟೀಲ್: ಮಾನ್ಯ ಜ್ಞಾನೇಂದ್ರರವರೇ, ಅದನ್ನು ನಾವು ಹೇಳುವುದಕ್ಕಾಗುವುದಿಲ್ಲ. ಬಯಲುಸೀಮೆ ಅಭಿವೃದ್ಧಿ ಮಂಡಳಿ ಎಂದು ಇದೆ. ನಬಾರ್ಡ್‌ನಿಂದ ದುಡ್ಡು ಮಂಜೂರು ಆಗಿದೆ. ಇವರು ಮೊದಲು ಹಣ ಖರ್ಚು ಮಾಡಿ, ತೆಗೆದುಕೊಳ್ಳಬೇಕು. ಇವತ್ತಿನವರೆಗೂ ದುಡ್ಡುಕೊಟ್ಟಿಲ್ಲ. ಅದಕ್ಕೆ 6 ತಿಂಗಳಾಯಿತು. ನಾನು ನಿನ್ನೆ ಫೋನ್ ಮಾಡಿದರೆ ಮಂತ್ರಿಗಳು ಕಛೇರಿಯಲ್ಲಿ ಹೇಳುತ್ತಾರೆ ಏನು ಮಾಡುವುದು ಸಾರ್ 6 ತಿಂಗಳಾಯಿತು, ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ದುಡ್ಡು ಬಂದಿಲ್ಲವೆಂದು ಹೇಳುತ್ತಾರೆ. ಹಾಗೆ ನಿಮ್ಮ ಸ್ಥಿತಿಯೂ ಇದೆ. ಸುಮ್ಮನೆ ಅದನ್ನು ಏತಕ್ಕೆ ಮುಚ್ಚಿಕೊಳ್ಳುವುದು?

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಈಗ ಒಟ್ಟಾರೆ ನಮ್ಮ ಮಾನ್ಯ ಮೈನರ್ ಇರಿಗೇಷನ್ ಮಿನಿಸ್ಟರನ್ನು ಎಬ್ಬಿಸಿ ನಿಲ್ಲಿಸುವುದರಲ್ಲಿ ಅರ್ಥವಿಲ್ಲ. ಬರಗಾಲ ಪರಿಸ್ಥಿತಿ ಬಗ್ಗೆ ಮೈನರ್ ಇರಿಗೇಷನ್‌ನವರಿಗೆ ಸಂಬಂಧವಿಲ್ಲವೇ? ಲಿಫ್ಟ್ ಇರಿಗೇಷನ್‌ಗಳು ಎಷ್ಟು ಕೆಲಸ ಮಾಡುತ್ತಿವೆ ಹೇಳಿ. ಲಿಫ್ಟ್ ಇರಿಗೇಷನ್‌ಗೆ ಮೈಂಟೆನೆನ್ಸ್ ಗ್ರಾಂಟ್ ಇಲ್ಲ. ನಮ್ಮ ಊರಿನಲ್ಲೆಲ್ಲಾ ಇದ್ದಂತಹ ಮೈನರ್ ಇರಿಗೇಷನ್ ಪಂಪ್‌ಸೆಟ್‌ಗಳೆಲ್ಲಾ ನಿಂತು ಹೋಗಿವೆ. ಇವರ ಮೈನರ್ ಇರಿಗೇಷನ್ ಮೋಟಾರು ತುಂಗಾ ನದಿಯಿಂದ ಲಿಫ್ಟ್ ಮಾಡಬೇಕು. ಮೋಟಾರು ರಿಪೇರಿ ಮಾಡಿ ಕೊಡುವವರು ಯಾರೂ ಇಲ್ಲ. ಮೋಟಾರು ರಿಪೇರಿ ಮಾಡಿಕೊಡುವ ಸಾಮಾನ್ಯ ಮೆಕ್ಯಾನಿಕ್ ಇವರ ಹತ್ತಿರ ಇಲ್ಲ. ಡಿಫಾಲ್ಟ್ ಆಗಿರುವ ಸರ್ಕಾರ ಇವರದು ಇದು ಇವರ ಸ್ಥಿತಿ. ಇವರ ಹತ್ತಿರ ದುಡ್ಡಿಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ರಿಲೀಜ್ ಆಗುವುದಿಲ್ಲ. ಅದರ ಬಗ್ಗೆ ಇವರ ಸರ್ಕಾರ ಕುಳಿತುಕೊಂಡು ಯೋಚನೆ ಮಾಡಲಿಲ್ಲ. ಅನಾವಶ್ಯಕವಾಗಿ ಯಾವುದೋ ಸಾಲ ತಂದ್ವಿ, ನಾವು ಮಾಡಿದ್ವಿ, ನಿಮದೇನು? ಈ ಲಿಫ್ಟ್ ಇರಿಗೇಷನ್‌ನಲ್ಲಿ 3-4 ವರ್ಷಗಳಿಂದ ಕೆಲಸ ಮಾಡುತ್ತಿವೆ, ಇದುವರೆಗೆ ಪೈಪ್ ತಂದು ಕೊಡುವುದಕ್ಕೆ ಆಗಿಲ್ಲ. ಪೈಪ್‌ಗಳನ್ನು ಸರಬರಾಜು ಮಾಡುವುದಕ್ಕಾಗುತ್ತಾ ಇಲ್ಲ. ನನ್ನ ಕ್ಷೇತ್ರದಲ್ಲಿ ಕೆಲಸ ನಿಂತುಹೋಗಿದೆ. ಸ್ವಾಮಿ, ಇಡೀ ರಾಜ್ಯದಲ್ಲಿ ಈ ಒಂದು ಪರಿಸ್ಥಿತಿ ಇದೆ. ಸರ್ಕಾರ ಪ್ರಾಮಾಣಿಕವಾಗಿ ಒಂದಿಷ್ಟು ಏನಾದರೂ ಕೆಲಸ ಮಾಡಬೇಕಾಗಿದೆ. ನಾವೆಲ್ಲಾ ಚುನಾಯಿತ ಪ್ರತಿನಿಧಿಗಳು, ಹಳ್ಳಿಗಳಲ್ಲಿ, ನಗರಗಳಲ್ಲಿ ಗೌರವಯುತವಾಗಿ ತಿರುಗಾಡುವಂತಾಗಬೇಕು. ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳು, ರೈತರಿಗೆ ನೀರು ಕೊಡತಕ್ಕಂತ

ಕೆಲಸಗಳು, ಡೀ-ಸಿಲ್ಟೇಷನ್, ಕೆರೆಗಳ ಅಭಿವೃದ್ಧಿ ಮಾಡುವಂತಹ ಕೆಲಸ ಇವೆಲ್ಲವೂ ಕೂಡ ಸ್ಥಗಿತಗೊಂಡಿವೆ. ಸರ್ಕಾರ ಯಾಂತ್ರಿಕವಾಗಿ ಚಲನೆಯಾಗುತ್ತಿದೆಯೇ ವಿನಹ ರೈತರಿಗೆ ಸ್ಪಂದಿಸತಕ್ಕಂತಹ ಮಟ್ಟದಲ್ಲಿ ಇದಿಲ್ಲ. ರೈತರ ಕಷ್ಟದಲ್ಲಿ ನೆರವಾಗುವಂತಹ ಪರಿಸ್ಥಿತಿಯಲ್ಲಿ ನೀವು ಇಲ್ಲ. ಇದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಇನ್ನು ಮುಂದೆಯಾದರೂ ನೀವು ಎಚ್ಚೆತ್ತು ತತಕ್ಷಣವೇ ತಾಲ್ಲೂಕು ಮಟ್ಟದಲ್ಲಿ ಒಂದೊಂದು ತಾಲ್ಲೂಕಿಗೂ ಹಣ ನಿಗದಿ ಮಾಡತಕ್ಕಂತಾದ್ದು ಅವರಿಗೆ ಕುಡಿಯುವ ನೀರಿನ ಯೋಜನೆಗಳು, ಇರತಕ್ಕಂಥ ಬೋರ್‌ವೆಲ್‌ಗಳನ್ನು ದುರಸ್ತಿ ಮಾಡತಕ್ಕಂಥಾದ್ದು, ಹೊಸ ಬೋರ್‌ವೆಲ್‌ಗಳನ್ನು ನಿರ್ಮಾಣ ಮಾಡತಕ್ಕಂಥಾದ್ದು - ಇದನ್ನು ಪ್ರಾಮಾಣಿಕವಾಗಿ ಮಾಡಬೇಕಾಗುತ್ತದೆ. ಬೇರೆ ಕೆಲಸಗಳು ಸ್ವಲ್ಪ ನಿಂತರೂ ಈ ಕುಡಿಯುವ ನೀರಿನ ಕೆಲಸ ಮಾತ್ರ ಅತ್ಯಂತ ಸಮರ್ಪಕವಾಗಿ ಆಗಬೇಕಾಗುತ್ತದೆ. ಈ ಮೈನರ್ ಇರಿಗೇಷನ್‌ಗೂ ಒಂದಷ್ಟು ಹೆಚ್ಚು ಹಣಕಾಸಿನ ನೆರವು ಕೊಡಬೇಕಾಗುತ್ತದೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಕೆಲಸವಾಗುತ್ತಾ ಇದೆ. ಸಾವಿರಾರು ಕೋಟಿ ಸಾಲ ಬರುತ್ತಾ ಇದೆ, ಅದನ್ನು ಕೊಟ್ಟಿದ್ದೀರಿ. ಆದರೆ, ನಾವೇನು ಮಾಡೋಣ? ಆ ಪ್ರಾಜೆಕ್ಟ್ ಏರಿಯಾದಲ್ಲಿ ಇಲ್ಲದೇ ಇರತಕ್ಕಂಥ ನಾವು ಸಾಮಾನ್ಯ ಜನರು ಯಾರಿದ್ದೇವೆ, ನಮಗೂ ಸಣ್ಣ ಸಣ್ಣ ಲಿಫ್ಟ್ ಇರಿಗೇಷನ್, ಕೆರೆ ದುರಸ್ತಿ ಕಾರ್ಯಗಳು ಆಗಬೇಕಾದಂತಹ ಪರಿಸ್ಥಿತಿಯಲ್ಲಿ ನೀವು ಹಣವೇ ಇಲ್ಲವೆಂದು ಕೈ ಎತ್ತಿಬಿಟ್ಟರೆ ಹೇಗೆ? ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಮುಕ್ಕಾಲು ಭಾಗ ಮೈನರ್ ಇರಿಗೇಷನ್ ಮೇಲೆ ನಿಂತಿದೆ.

೪.೪೦ ಪಿ.ಎಂ.

ಮೈನರ್ ಇರಿಗೇಷನ್‌ನ ಹಣಕಾಸಿನ ನೆರವು ಜಾಸ್ತಿಯಾದರೆ ಅಂತರ್ಜಲ ಜಾಸ್ತಿಯಾಗುತ್ತದೆ. ಇವತ್ತು ಕೆರೆ ಕಟ್ಟೆಗಳಲ್ಲಿ ನೀರು ನಿಂತರೆ ಅಂತರ್ಜಲ ಜಾಸ್ತಿಯಾಗುತ್ತದೆ. ಇಂತಹ ಪರಿಸ್ಥಿತಿಯನ್ನು ನಾವು ಚೆನ್ನಾಗಿ ನಿರ್ವಹಣೆ ಮಾಡಬೇಕಾಗುತ್ತದೆ. ಆ ಇಲಾಖೆಗೆ ಹೆಚ್ಚಿನ ಹಣಕಾಸಿನ ನೆರವನ್ನು ಕೊಡಬೇಕಾಗುತ್ತದೆ ಮತ್ತು ಕುಡಿಯುವ ನೀರಿನ ಯೋಜನೆಯನ್ನು ಸಮರ್ಪಕವಾಗಿ ನಿಭಾಯಿಸಬೇಕಾಗುತ್ತದೆ. ಈ ಕುಡಿಯುವ ನೀರಿನ ಯೋಜನೆಯನ್ನು ನಿಭಾಯಿಸಬೇಕಾದರೆ, ಕೆ.ಪಿ.ಟಿ.ಸಿ.ಎಲ್. ನವರು ಹಗಲು ರಾತ್ರಿ ಸಾಧ್ಯವಾದಷ್ಟು ಕೆಲಸ ಮಾಡಬೇಕಾಗುತ್ತದೆ. ಅದು ಇನ್ನೇನೋ ಆಯಿತು. ಸಿಂಗಲ್ ಫೇಸ್ ಬಂತು, ತ್ರೀ-ಫೇಸ್ ಕರೆಂಟ್ ಇಲ್ಲ ಇತ್ಯಾದಿ ನೆಪ ಹೇಳಿದರೆ ಖಂಡಿತವಾಗಿಯೂ ನಾವು ಬಿಡುವುದಿಲ್ಲ. ಇವತ್ತು ಕಛೇರಿಗಳಿಗೆ ಬೆಂಕಿ ಹಚ್ಚುವಂತಹ ಪರಿಸ್ಥಿತಿಗೆ ಜನ ಹೋಗಿದ್ದಾರೆ. ಇದನ್ನು ನಿಭಾಯಿಸುವುದು ಹೇಗೆ ಎಂಬುದನ್ನು ಆಲೋಚನೆ ಮಾಡುವ ಅವಶ್ಯಕತೆ ಇದೆ. ಇನ್ನಿರತಕ್ಕಂಥ ಮೂರು ತಿಂಗಳ ಅವಧಿ ಬಹಳ ಕ್ರೂಷಿಯಲ್ ಇದೆ. ಇದನ್ನು ನಿಭಾಯಿಸುವುದಕ್ಕೆ ಎಲ್ಲಾ ದಿಕ್ಕುಗಳಿಂದ ಇಡೀ ಸರ್ಕಾರ ಒಂದು ವಾರ್ ಫ್ರಂಟ್‌ನಲ್ಲಿ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇಷ್ಟು ಮಾತನಾಡಲು

ಸಮಯಾವಕಾಶ ಕೊಟ್ಟಿದ್ದಕ್ಕಾಗಿ , ಮಾನ್ಯ ಉಪಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಬೈರೇಗೌಡ(ವೇಮಗಲ್): ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಸದನದಲ್ಲಿ ನಾವು ಬಹಳ ಮುಖ್ಯವಾದಂಥ ವಿಚಾರವನ್ನು ಚರ್ಚೆ ಮಾಡುತ್ತಾ ಇದ್ದೇವೆ. ರಾಜ್ಯದಲ್ಲಿ ಬಂದೊದಗಿರತಕ್ಕಂಥ ಬರಗಾಲದ ಪರಿಸ್ಥಿತಿ ಮತ್ತು ಈ ಬರಗಾಲಕ್ಕೆ ಹೊಂದಿಕೊಂಡಿರತಕ್ಕಂಥಾದ್ದು ಇನ್ನೊಂದು ವಿದ್ಯುತ್ ಬರಗಾಲ, ಈ ವಿದ್ಯುತ್ ಬರ. ಇವೆರಡೂ ಪ್ರಮುಖವಾದಂಥವುಗಳು. ಇವೆರಡಕ್ಕೂ ಒಂದೊಂದಕ್ಕೆ ಸಂಬಂಧ ಇರತಕ್ಕಂಥಾದ್ದು. ನಾನು ಹಿಂದೆ ಒಂದುಸಾರಿ ಮಾತನಾಡುತ್ತಾ, ಒಂದು ತಾತ್ವಿಕವಾದಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಅದೇನೆಂದರೆ, ಎಲ್ಲಾ ವಿಚಾರಗಳಲ್ಲೂ ಕೂಡ ಕೇಂದ್ರ ಸರ್ಕಾರ, ಅದು ಯಾವುದೇ ಸರ್ಕಾರ ಇರಲಿ, ಈ ರಾಜ್ಯ ಸರ್ಕಾರಗಳು ಮಾಡಬೇಕಾಗಿರತಕ್ಕಂಥ ಕೆಲಸಗಳನ್ನು, ರಾಜ್ಯ ಸರ್ಕಾರಗಳಿಗೆ ಪರಮಾಧಿಕಾರ ಇರತಕ್ಕಂಥ ಕೆಲಸಗಳಲ್ಲಿ ಕೇಂದ್ರ ಸರ್ಕಾರ ಏಕೆ ಮೂಗು ತೂರಿಸಬೇಕು? ಇವತ್ತು ಆರ್ಥಿಕ ಸ್ವಾಯತ್ತತೆ ಎನ್ನತಕ್ಕಂಥಾದ್ದು ರಾಜ್ಯಗಳಿಗೆ ಇರಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕ. ಈ ಆರ್ಥಿಕ ಸ್ವಾಯತ್ತತೆ ಎನ್ನುವುದು ಇವತ್ತು ರಾಜ್ಯಗಳಿಗೆ ಸಂಪೂರ್ಣವಾಗಿ ಇಲ್ಲ. ಈ ಆರ್ಥಿಕ ಸ್ವಾಯತ್ತತೆ ಇಲ್ಲದೇ ಇರುವ ಕಾರಣಗಳಿಂದ, ಇವತ್ತು ಇಂತಹ ಬರಗಾಲ ಬಂದಂಥ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೂ ಕೂಡ, ನೀವು ಹಣ ಕೊಡಿ ಎಂದು ನಾವು ದೆಹಲಿ ಕಡೆ ನೋಡತಕ್ಕ ಪರಿಸ್ಥಿತಿ ಉಂಟಾಗಿದೆ. ಇನ್ನು ಅನೇಕ ಅಭಿವೃದ್ಧಿ ಕೆಲಸಕಾರ್ಯಗಳಾದ ರಸ್ತೆ ಅಭಿವೃದ್ಧಿ ಮಾಡುವುದಕ್ಕೂ ನಾವು ಕೇಂದ್ರ ಸರ್ಕಾರಕ್ಕೆ ಏಕೆ ಹೋಗಿ ಮೊರೆ ಇಡಬೇಕು? ವಿದ್ಯುತ್ ಉತ್ಪಾದನೆಗೆ ನಾವು ಕೇಂದ್ರ ಸರ್ಕಾರಕ್ಕೆ ಏಕೆ ಮೊರೆ ಇಡಬೇಕು? ಮತ್ತೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಣೆ ಮಾಡತಕ್ಕಂಥ ವಿದ್ಯಾರಂಗದಲ್ಲಿ, ಏಕೆ ನಾವು ಕೇಂದ್ರ ಸರ್ಕಾರದ ಮೊರೆ ಹೋಗಬೇಕು? ಹೀಗೆ ಈ ಆರ್ಥಿಕ ಸ್ವಾಯತ್ತತೆ ಎಂಬುದು ಸಂಪೂರ್ಣವಾಗಿ ರಾಜ್ಯ ಸರ್ಕಾರಗಳಿಗೆ ಇರಬೇಕಾಗಿರತಕ್ಕಂಥಾದ್ದು. ಆದರೆ, ಇವತ್ತಿನವರೆಗೂ ಈ ವಿಚಾರ ರಾಷ್ಟ್ರಮಟ್ಟದಲ್ಲಿ ಚರ್ಚೆ ಆಗುತ್ತಿದೆಯೋ ಇಲ್ಲವೋ ನನಗಂತೂ ಕೂಡ ಗೊತ್ತಿಲ್ಲ. ಒಂದುವೇಳೆ ಆಗಿದ್ದರೆ ನನಗಂತೂ ಜ್ಞಾಪಕವೂ ಕೂಡ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಇವತ್ತು ಬರಗಾಲ ಬಂದಿದೆ. ರಾಜ್ಯ ಸರ್ಕಾರಕ್ಕೆ ನಾವು ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿ ಎಂದು ಕೇಳಿದರೆ, ಇಲ್ಲ, ನಾವು ಯೋಜನೆಯಲ್ಲಿ ಇಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎಂದು ಆಗಲೇ ಮಾನ್ಯ ಮಂತ್ರಿಗಳು ಹೇಳುತ್ತಾ ಇದ್ದರು. ಕೇಂದ್ರ ಸರ್ಕಾರದಿಂದ ಬರಬೇಕಾದ 600 ಕೋಟಿ ರೂಪಾಯಿಗಳನ್ನು ನಮಗೆ ಕೇಂದ್ರದವರು ಕೊಟ್ಟಿಲ್ಲ, ಇದು ನಮ್ಮ ರಾಜ್ಯಕ್ಕೆ ಅಲ್ಲದೆ ಬೇರೆ ರಾಜ್ಯಗಳಿಗೂ ಕೊಟ್ಟಿಲ್ಲ ಎಂಬ ಮಾತನ್ನು ಮಾನ್ಯ ಮಂತ್ರಿಗಳೊಬ್ಬರು ಹೇಳುತ್ತಾ ಇದ್ದರು. ಈ ಪರಿಸ್ಥಿತಿ ಇವತ್ತಿನ ದಿವಸ ಉಂಟಾಗುವುದಕ್ಕೆ ಕಾರಣವೇನು? ನಾನು ಹಿಂದೆಯೇ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿದ್ದೆ. ಇದನ್ನು ರಾಷ್ಟ್ರಮಟ್ಟದಲ್ಲಿ ಎನ್.ಡಿ.ಸಿ. ಮುಂತಾದ

ಕಡೆ, ಈ ವಿಚಾರದಲ್ಲಿ ಚರ್ಚೆ ಮಾಡಿ ರಾಜ್ಯಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಮತ್ತು ಇನ್ನೂ ಹೆಚ್ಚಿನ ಸ್ವಾಯತ್ತತೆಯನ್ನು ಹಣಕಾಸಿನ ಪರಿಸ್ಥಿತಿಯಲ್ಲಿ ರಾಜ್ಯಗಳಿಗೆ ಕೊಡಬೇಕಾದ ಅವಶ್ಯಕತೆ ಇದೆ, ಇದಕ್ಕೆ ರಾಷ್ಟ್ರೀಯ ಚರ್ಚೆ ಆಗತಕ್ಕ ಅವಶ್ಯಕತೆ ಇದೆಯೆಂಬ ಮಾತನ್ನು ಹಿಂದೆಯೇ ಹೇಳಿದ್ದೆ. ಇದು ಉತ್ತಮವಾದ ಸಲಹೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ, ಇಲ್ಲಿಯವರೆಗೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಗಮನ ಹರಿಸಿದ ಬಗ್ಗೆಯಾಗಲೀ ಅಥವಾ ಆ ರೀತಿಯಾದಂಥ ಚರ್ಚೆ ರಾಷ್ಟ್ರಮಟ್ಟದಲ್ಲಿ ನಡೆದ ಬಗ್ಗೆಯಾಗಲೀ ಇಲ್ಲಿಯವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಆದ್ದರಿಂದ, ಇವತ್ತು ನಾನು ಪುನಃ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ಅಂದರೆ, ಬರ ಪರಿಸ್ಥಿತಿ ಬಂದಾಗ, ಅಧ್ಯಯನ ಮಾಡುವುದಕ್ಕೆ ಕೇಂದ್ರದಿಂದ ಒಂದು ತಂಡವನ್ನು ಇಲ್ಲಿಗೆ ಕಳುಹಿಸುತ್ತಾರೆ. ಇದು ನನಗಂತೂ ಅರ್ಥವಾಗುತ್ತಾ ಇಲ್ಲ. ಕೇಂದ್ರದ ತಂಡ ಇಲ್ಲಿಗೆ ಬಂದು ಬರ ಪರಿಸ್ಥಿತಿಯನ್ನು ಅಧ್ಯಯನ ಮಾಡತಕ್ಕ ಅವಶ್ಯಕತೆ ಏನಿದೆ? ಹಿಂದೆ ಬ್ರಿಟೀಷರ ಕಾಲದಲ್ಲಿ, ಯಾವ ರೀತಿ ಇಂಗ್ಲೇಂಡಿನ ಚಕ್ರವರ್ತಿಗೆ ಹೋಗಿ ಮೊರೆ ಇಡುತ್ತಾ ಇದ್ದೆವೋ, ನೀವು ದಯಪಾಲಿಸಬೇಕು, ನೀವು ದಯಪಾಲಿಸಬೇಕು ಎಂಬ ಮನವಿಯನ್ನು ಯಾವರೀತಿ ಸಲ್ಲಿಸುತ್ತಾ ಇದ್ದೆವೋ ಅದೇ ಪರಿಸ್ಥಿತಿ ಇವತ್ತಿನ ದಿವಸ ರಾಜ್ಯಗಳಲ್ಲೂ ಕೂಡ ಇದೆ. ಬರ ಬಂದಂಥ ಕಾಲದಲ್ಲಿ ಕೇಂದ್ರ ಸರ್ಕಾರಕ್ಕೆ ನಾವು ಇಲ್ಲಿಂದ ದೆಹಲಿಗೆ ಹೋಗಿ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ನೋಡಿ ನಮಗೆ ಒಂದು ತಂಡವನ್ನು ಕಳುಹಿಸಿ, ಅಧ್ಯಯನಕ್ಕೆ ತಂಡವನ್ನು ಕಳುಹಿಸಿ, ನಮಗೆ ಇಷ್ಟು ಹಣವನ್ನು ಬಿಡುಗಡೆ ಮಾಡಿ ಎಂಬ ಮೆಮೋರ್ಯಾಂಡಮ್‌ನ್ನು ಕೊಡಬೇಕು. ಅನೇಕ ಸಂದರ್ಭಗಳಲ್ಲಿ ಅದೇ ಒಂದು ದೊಡ್ಡ ಸಮಸ್ಯೆಯಾಗುತ್ತದೆ. ಮೆಮೊರ್ಯಾಂಡಮ್ ಕೊಡಲಿಲ್ಲವೆಂಬುದೇ ಒಂದು ರಾಜಕೀಯದ ಅಸ್ತ್ರವನ್ನಾಗಿ ಬಳಸಿರತಕ್ಕಂಥ ಸಂದರ್ಭಗಳು ಕೂಡ ಈ ದೇಶದಲ್ಲಿ ಇವೆ. ನಾವೇನು ಮೆಮೊರ್ಯಾಂಡಮ್ ಕೊಡುತ್ತೇವೆ, ಅದರಲ್ಲಿ ಕೇಳಿರತಕ್ಕಂಥ ಕೇವಲ ಕಾಲು ಭಾಗದಷ್ಟು ಹಣವೂ ಕೂಡ ರಾಜ್ಯಸರ್ಕಾರಗಳಿಗೆ ಬಂದಿಲ್ಲ. ಇದಕ್ಕೆ ಒಂದು ವ್ಯವಸ್ಥಿತವಾದ ಫಾರ್ಮುಲಾ ಕೂಡ ಇದೆ. ಅದರ ಪ್ರಕಾರ ಹಣ ಕೊಡತಕ್ಕಂಥಾದ್ದು ಇದೆ. ಇದನ್ನೆಲ್ಲಾ ಸರಿಪಡಿಸಬೇಕಾಗಿದ್ದರೆ, ಇದು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗತಕ್ಕ ಅವಶ್ಯಕತೆ ಇದೆ. ಕೇಂದ್ರದಿಂದ ತಂಡ ಬಂದು ಅಧ್ಯಯನ ಮಾಡಿ, ಅವರು ವರದಿ ಕೊಟ್ಟ ನಂತರವೂ ಸಹ ಪೂರ್ತಿಯಾಗಿ ಹಣ ಬಿಡುಗಡೆಯಾಗಿರತಕ್ಕಂಥ ಸಂದರ್ಭಗಳು ಇಲ್ಲವೇ ಇಲ್ಲ. ಇದು ಒಂದು ಎಕ್ಸರ್‌ಸೈಜಿಂಗ್ ಫ್ಯುಟಿಲಿಟಿ ಎಂದು ಏನು ಹೇಳುತ್ತಾರೆ, ಅದೊಂದು ಫ್ಯುಟೈಲ್ ಎಕ್ಸರ್‌ಸೈಜ್ ಆಗುತ್ತಾ ಇದೆ. ಇದು ಕಳೆದ 50 ವರ್ಷಗಳಿಂದಲೂ ಅಂದರೆ, ನಮ್ಮ ಪ್ಲಾನಿಂಗ್ ಡೆವಲಪ್‌ಮೆಂಟ್ ಯಾವತ್ತು ಪ್ರಾರಂಭವಾಯಿತೋ ಅಲ್ಲಿಂದ ಇಲ್ಲಿಯವರೆಗೂ ನಡೆದುಕೊಂಡು ಬಂದಿರತಕ್ಕಂಥಾದ್ದನ್ನು ನಾವು ನೋಡುತ್ತೇವೆ. ಇದನ್ನು ಕೊನೆಗಾಣಿಸತಕ್ಕ ಅವಶ್ಯಕತೆ ಇದೆ. ಈ ಬಗ್ಗೆ ರಾಜ್ಯಸರ್ಕಾರ, ಕೇಂದ್ರ ಸರ್ಕಾರದ ಜೊತೆ ಇದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗತಕ್ಕಂಥಾದ್ದನ್ನು ಇವರು ಮುಂದಾಳತ್ವವನ್ನು ವಹಿಸಿ, ಈ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ

ಇಷ್ಟಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಮಾತನಾಡಿದಂಥ ನನ್ನ ಸ್ನೇಹಿತರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮುಖ್ಯವಾಗಿ ವಿದ್ಯುತ್ ಪರಿಸ್ಥಿತಿ ಬಗ್ಗೆ ನನ್ನ ಮಾತನ್ನು ಮುಂದುವರಿಸಬೇಕೆಂದಿದ್ದೇನೆ. ಇವತ್ತಿನ ಒಂದು ಪ್ರಶ್ನೆ ಅನ್-ಸ್ಟಾರ್ಡ್ ಆಗಿ ಬಂದಿದ್ದು, ವಿದ್ಯುತ್ ಪರಿಸ್ಥಿತಿ ಬಗ್ಗೆ ಇಲ್ಲಿ ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ 1999ನೇ ಸಾಲಿನಿಂದ ಒಟ್ಟಾರೆ ಆದ ವಿದ್ಯುತ್ ಉತ್ಪಾದನೆ ಎಷ್ಟು? ಎಂಬುದು ಪ್ರಶ್ನೆ. ಅದಕ್ಕೆ ಕ್ರಮವಾಗಿ 17,066 ಮಿಲಿಯನ್ ಯೂನಿಟ್ಸ್ ಮತ್ತು 20,901 ಮಿಲಿಯನ್ ಯೂನಿಟ್‌ಗಳು ಹಾಗೆಯೇ 2000-01ರಲ್ಲಿ 21,890 ದಶಲಕ್ಷ ಮಿಲಿಯನ್ ಯೂನಿಟ್‌ಗಳು ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ವಿದ್ಯುತ್ ಉತ್ಪಾದನೆಯು ವರ್ಷ ವರ್ಷವೂ ಹೆಚ್ಚಾಗುತ್ತಿದೆ ಎಂಬ ಅಂಶವನ್ನು ಉತ್ತರದಲ್ಲಿ ಹೇಳಿದ್ದಾರೆ. ಇಷ್ಟು ವಿದ್ಯುತ್ ಉತ್ಪಾದನೆ ಹೆಚ್ಚಾದರೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಇವೊತ್ತು ವಿದ್ಯುತ್ ಸರಬರಾಜು ಆಗುತ್ತಾ ಇದೆ, ಎಂದರೆ ಯಾವ ಕಾಲದಲ್ಲಿಯೂ ಕೂಡ ಅಲ್ಲಿಗೆ ಆರು ಗಂಟೆಗಳ ಕಾಲ ಸರಬರಾಜು ಎಂದು ನಿಗದಿ ಮಾಡಿಲ್ಲ. ಆರು ಗಂಟೆಗಳು ಎಂದು ಅಧಿಕೃತವಾಗಿ ನಿಗದಿಪಡಿಸಿದ್ದರೂ ಕೂಡ, ವಾಸ್ತವವಾಗಿ ಸರಬರಾಜು ಆಗತಕ್ಕಂಥಾದ್ದು ದಿನಕ್ಕೆ 2-3 ಗಂಟೆಗಳು ಮಾತ್ರ. ಆ 2-3 ಗಂಟೆಗಳ ಕಾಲ ಸರಬರಾಜು ಆಗತಕ್ಕಂಥಾದ್ದು ಕೂಡ 440 ವೋಲ್ಟೇಜ್ ಇರತಕ್ಕಂಥಾದ್ದು ಕೇವಲ 200-250 ವೋಲ್ಟೇಜ್ ಮಾತ್ರ ಇರುತ್ತದೆ. ಹೀಗಾಗಿ ಅಲ್ಲಿ ಯಾವ ಪಂಪ್‌ಸೆಟ್‌ಗಳು ಕೂಡ ನಡೆಯುವುದಿಲ್ಲ. ಮಾನ್ಯ ಸ್ನೇಹಿತರು ಅನೇಕರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುತ್ತಿದ್ದರು. ದಿನಗಟ್ಟಳೆ ಕುಡಿಯುವ ನೀರಿಲ್ಲದ ಕೆಲವು ಹಳ್ಳಿಗಳು ಇವೆ. ಇದಕ್ಕೆ ಕಾರಣ ಏನೆಂದರೆ ನಮಗೆ ಕುಡಿಯುವ ನೀರಿಗೆ ಕೊಳವೆಬಾವಿಗಳೇ ಮುಖ್ಯ ಆಧಾರವಾಗಿವೆ. ವಿದ್ಯುತ್ ಇಲ್ಲದೆ ಕೊಳವೆಬಾವಿಗಳಿಂದ ನೀರು ಮೇಲೆ ಬರಲು ಸಾಧ್ಯವಿಲ್ಲ. ಕುಡಿಯುವ ನೀರಿನ ಸರಬರಾಜನ್ನಾದರೂ ಗಮನಿಸಿ, ಕುಡಿಯುವ ನೀರನ್ನೂ ಸೇರಿದಂತೆ ದಿನಕ್ಕೆ 10-12 ಗಂಟೆಗಳ ಕಾಲವಾದರೂ ಕರೆಂಟ್‌ನ ಸರಬರಾಜಿಗೆ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಗಮನಿಸಿ ಎಂಬ ಮನವಿಗಳು ನಿಮಗೆ ರಾಜ್ಯದ ಎಲ್ಲಾ ಮೂಲೆಗಳಿಂದಲೂ ಬಂದಿವೆ. ನಮ್ಮ ರಾಜ್ಯದಲ್ಲಿರತಕ್ಕಂಥ ನೀರಾವರಿ ಮೂಲಗಳ ಮೂಲಕ ಸಾಗುವಳಿಯಾಗತಕ್ಕಂಥಾದ್ದು ಶೇಕಡ 22-23ರಷ್ಟು ಭಾಗದ ಭೂಮಿಗಳು ಮಾತ್ರ. ಉಳಿದಂತೆ ಶೇಕಡ 28-29ರಷ್ಟು ಭಾಗಗಳು ಮಳೆಯಾಧಾರಿತವಾಗಿವೆ. ಅವುಗಳಿಗೆ ಪಂಪ್‌ಸೆಟ್‌ಗಳೇ ಆಧಾರವಾಗಿವೆ. ಈ ವಿಷಯವನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 16-17 ಲಕ್ಷಗಳಷ್ಟು ಪಂಪ್‌ಸೆಟ್‌ಗಳಿವೆ. 70 ರಿಂದ 80 ಲಕ್ಷ ಎಕರೆಗಳಷ್ಟು ಭೂಮಿಯು ದೊಡ್ಡ ಪ್ರಮಾಣದಲ್ಲಿ ಪಂಪ್‌ಸೆಟ್‌ಗಳ ಮೂಲಕ ನೀರನ್ನು ಪಡೆದುಕೊಳ್ಳುತ್ತಿದೆ. ಅದೇ ರೀತಿಯಲ್ಲಿ ಹೆಚ್ಚು ಮೌಲ್ಯದ ಕೃಷಿ ಉತ್ಪಾದನೆಯಾಗತಕ್ಕಂಥಾದ್ದೂ ಕೂಡ ಈ ಮೂಲಕವೇ ಎಂದು ಹೇಳಬಯಸುತ್ತೇನೆ. ಹಾಗೆಯೇ ಇಲ್ಲಿ ಬೇರೆ ಯಾರ ಬಂಡವಾಳವೂ ಇಲ್ಲ. ಇದಕ್ಕೆ ರೈತರೇ ತಮ್ಮ ಸ್ವಂತ ಬಂಡವಾಳವನ್ನು ಹಾಕಿಕೊಂಡಿದ್ದಾರೆ. ಬಾವಿ ತೆಗೆಸುವುದು, ಕೊಳವೆ ಬಾವಿಗಳನ್ನು ಹಾಕಿಸಿರುವುದು, ವಿದ್ಯುತ್ ಪಂಪ್‌ಸೆಟ್‌ನ್ನು ಅಳವಡಿಸಿರುವುದು, ವಿದ್ಯುತ್ ಬಳಕೆಗೆ ಹಣವನ್ನು ಕೊಡುವುದು ಮುಂತಾಗಿ ಎಲ್ಲವನ್ನೂ ಕೂಡ

ರೈತರು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಕೊಂಡಿದ್ದಾರೆ. ಒಂದು ಪಂಪ್‌ಸೆಟ್‌ನ್ನು ಹಾಕಿಕೊಂಡು ಬಳಕೆಗೆ ಅದನ್ನು ತರಬೇಕಾದರೆ ಒಂದರಿಂದ ಒಂದೂವರೆ ಲಕ್ಷ ರೂಪಾಯಿಗಳವರೆಗೆ ಅದಕ್ಕೆ ಖರ್ಚಾಗುತ್ತದೆ. ಇಷ್ಟು ಹಣವನ್ನು ರಾಜ್ಯದ ರೈತರು ಖರ್ಚು ಮಾಡಿರುವಂಥ ಕಡೆ ನೀವು ಆರು ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡುತ್ತೇವೆಂದು ಹೇಳಿ, ಅದರ ಬದಲಾಗಿ ದಿನಕ್ಕೆ 2-3 ಗಂಟೆಗಳ ಕಾಲ ಕೊಟ್ಟರೆ, ರೈತರು ಏನು ಮಾಡಬೇಕು ಮತ್ತು ಅವರ ಪರಿಸ್ಥಿತಿಯು ಏನು ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಇವೊತ್ತು ಅನೇಕ ಕಡೆಗಳಲ್ಲಿ ರೈತರು ಸರಕಾರದ ಕಚೇರಿಗಳಿಗೆ ನುಗ್ಗಿ ಬೆಂಕಿ ಇಟ್ಟಿರತಕ್ಕಂಥಾದ್ದು ಆಗಿದೆ, ಅಲ್ಲಿರತಕ್ಕಂಥ ಅಧಿಕಾರಿಗಳ ಮೇಲೆ ಕೈ ಮಾಡಿರತಕ್ಕಂಥದ್ದಾಗಿದೆ, ಇಷ್ಟಾದರೂ ಕೂಡ ಈ ಬಗ್ಗೆ ಎಚ್ಚೆತ್ತುಕೊಳ್ಳತಕ್ಕಂಥ ಪ್ರಯತ್ನ ಸರಕಾರದಿಂದ ಆಗಿಲ್ಲ. ಇಲ್ಲಿ ಸ್ವಾಭಾವಿಕವಾಗಿ ಒಂದು ಪ್ರಶ್ನೆ ಬರುತ್ತದೆ. ಇದೇ ವರ್ಷದಲ್ಲಿ ಮಾತ್ರ ವಿದ್ಯುತ್ ಕ್ಷಾಮ ಉಂಟಾಗಿದೆಯೇ? ಇಲ್ಲ, ಖಂಡಿತ ಇಲ್ಲ. ಹಿಂದೆಯೂ ಕೂಡ ವಿದ್ಯುತ್ ಕ್ಷಾಮ ಉಂಟಾಗಿತ್ತು. ಆದರೆ ನಾವು ಹಿಂದೆ ಇದ್ದಂಥ ಸರಕಾರವು ವಿದ್ಯುತ್ ಕ್ಷಾಮ ಬಂದಾಗ ಏನು ಮಾಡಿದ್ದೇವೆ ಅಂದರೆ, ಮೊದಲನೆಯದಾಗಿ ಹೊರ ರಾಜ್ಯಗಳಿಂದ ವಿದ್ಯುತ್‌ನ್ನು ತರತಕ್ಕಂಥ ಕೆಲಸವಾಗುತ್ತಾ ಇತ್ತು. ಹಾಗೆಯೇ ಕೈಗಾರಿಕೆಗಳ ಮೇಲೆ ವಿದ್ಯುತ್ ಕಡಿತವನ್ನು ಹಾಕಿ, ಅಲ್ಲಿ ಉಳಿತಾಯವಾಗತಕ್ಕಂಥ ವಿದ್ಯುತ್‌ನ್ನು ರೈತರ ಪಂಪ್‌ಸೆಟ್‌ಗಳಿಗೆ ಕೊಡತಕ್ಕಂಥಾದ್ದು ಕೂಡ ಆಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ: ಹಾಗಿದ್ದಲ್ಲಿ ನೀವು ಅರ್ಬನ್ ಏರಿಯಾದವರಿಗೆ ಯಾವ ಪ್ರಪೋರ್ಷನ್ ಮೇಲೆ ಕೊಡುತ್ತಾ ಇದ್ದಿರಿ? ರೂರಲ್‌ನವರಿಗೆ ಯಾವ ಪ್ರಪೋರ್ಷನ್‌ನಲ್ಲಿ ಕೊಡುತ್ತಾ ಇದ್ದಿರಿ? ನೀವೂ ಕೂಡ ಪೂರ್ಣವಾಗಿ ಐದು ವರ್ಷಗಳ ಕಾಲ ಅಧಿಕಾರ ಮಾಡಿದ್ದೀರಿ. ನಿಮ್ಮ ಅನುಭವವನ್ನು ನಮಗೂ ಸ್ವಲ್ಪ ಹೇಳಿ.

ಶ್ರೀ ಸಿ.ಭೈರೇಗೌಡ: ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಜಾಣರು!

ಶ್ರೀ ಕಾಗೋಡು ತಿಮ್ಮಪ್ಪ: ಇಲ್ಲ, ನಾವುಗಳು ದಡ್ಡರಿದ್ದೇವೆ. ಆಡಳಿತ ಮಾಡುವ ಅನುಭವವನ್ನು ನಾವು ಅವರಿಂದ ಕಲಿಯಬೇಕಾಗಿದೆ. ನಿಮ್ಮ ಐದು ವರ್ಷಗಳ ಆಡಳಿತದಲ್ಲಿ ರೂರಲ್‌ಗೆ ಯಾವ ರೇಶಿಯೋ, ಅರ್ಬನ್‌ಗೆ ಯಾವ ರೇಶಿಯೋ, ಇಂಡಸ್ಟ್ರೀಗಳಿಗೆ ಯಾವ ರೇಶಿಯೋ, ಎಂಬ ಬಗ್ಗೆ ಪ್ರಿನ್ಸಿಪಲ್‌ಗಳನ್ನು ಇವಾಲ್ವ್ ಮಾಡಿದ್ದರೆ ನಮಗೆ ಹೇಳಬಹುದಲ್ಲವೇ?

ಶ್ರೀ ಸಿ.ಭೈರೇಗೌಡ: ಆ ಕಡತಗಳನ್ನು ತೆಗೆದುಕೊಂಡು ನೋಡಿದರೆ ಅದು ನಿಮಗೇ ಗೊತ್ತಾಗುತ್ತದೆ. ಕೈಗಾರಿಕೆಗಳಿಗೆ ಕೊಡುತ್ತಾ ಇದ್ದಂಥ ವಿದ್ಯುತ್‌ನಲ್ಲಿ ಶೇಕಡ 10-15-20-25 ರಿಂದ 50ರವರೆಗೂ ಕೂಡ ಕಡಿತವಾಗಿರತಕ್ಕಂಥ ಸಂದರ್ಭಗಳೂ ಕೂಡ ಉಂಟು. ಈ ವಿಷಯಗಳು ಸರಕಾರದ ದಾಖಲೆಗಳಲ್ಲಿವೆ. ಇಂಥ ಸರಳವಾದ ವಿಚಾರ ಕೂಡ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿಲ್ಲವೆಂದು ಹೇಳಿದರೆ ನಾನು ಏನು ಹೇಳಬೇಕು ಇದನ್ನು

ಏತಕ್ಕೆ ಹಾಕುತ್ತಾ ಇದ್ದೆವು ಅಂದರೆ, ಕೈಗಾರಿಕೆಗಳಲ್ಲಿ ಉಳಿತಾಯ ಆಗುತ್ತಿದ್ದಂಥ ವಿದ್ಯುತ್‌ನ್ನು ರೈತರಿಗೆ ಕೊಡಲು ಕಾರಣ ಏನೆಂದರೆ, ರೈತರು, ಈ ಸಮಾಜವನ್ನು ಈ ದೇಶವನ್ನು, ಎಲ್ಲರನ್ನೂ ಕಾಪಾಡುತ್ತಾ ಇರತಕ್ಕಂಥವರು. ರೈತರು ಸಮಾಜದ ಬೆನ್ನೆಲುಬು ಆಗಿದ್ದಾರೆ. ರೈತರಿಗೆ ನಾವು ಆದ್ಯತೆಯನ್ನು ಕೊಡುತ್ತಾ ಇದ್ದೆವು. ಆದರೆ ಇವೊತ್ತು ರೈತರಿಗೆ ಆದ್ಯತೆಯು ಇಲ್ಲ. ಕೈಗಾರಿಕೆಗಳಿಗೆ ನೀವು ಎಷ್ಟು ಗಂಟೆಗಳ ಕಾಲ ವಿದ್ಯುತ್ ಕಡಿತ ಹಾಕಿದ್ದೀರಿ? ನನ್ನ ಮಾಹಿತಿಗಳ ಪ್ರಕಾರ ಮತ್ತು ನನಗೆ ಗೊತ್ತಿರುವ ಹಾಗೆ, ಒಂದು ಗಂಟೆ, ಒಂದು ನಿಮಿಷ ಕೂಡ ಕಡಿತ ವಿಧಿಸಿಲ್ಲ. 24 ಗಂಟೆಗಳ ಕಾಲ ಕೈಗಾರಿಕೆಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಾ ಇದ್ದೀರಿ. ಹಳ್ಳಿಗಳಲ್ಲಿ ನಿಮ್ಮ ಉತ್ತರದ ಪ್ರಕಾರವೇ ಗ್ರಾಮಾಂತರ ಪ್ರದೇಶಗಳಲ್ಲಿ ಪಂಪ್‌ಸೆಟ್‌ಗಳ ಬಳಕೆಗಾಗಿ ಹಗಲಿನಲ್ಲಿ ದಿನಕ್ಕೆ ಆರು ಗಂಟೆಗಳ ಕಾಲ ಸರಬರಾಜು ಮಾಡಲಾಗುತ್ತದೆ ಎಂದು ಹೇಳಿದ್ದೀರಿ. ಯಾವುದಾದರು ಕೈಗಾರಿಕೆಗಳಿಗೆ ನೀವು ದಿನಕ್ಕೆ ಆರು ಗಂಟೆಗಳ ಕಾಲ ಮಾತ್ರ ವಿದ್ಯುತ್ ಕೊಟ್ಟಿದ್ದೀರಿ ಎಂದು ಹೇಳಿ, ಯಾವುದಾದರೂ ಕೈಗಾರಿಕೆಗಳಿಗೆ ದಿನಕ್ಕೆ ಇಷ್ಟೇ ಗಂಟೆಗಳು ಎಂದು ನಿಗದಿ ಪಡಿಸಿದ್ದೀರಾ? ಮಾನ್ಯ ಶ್ರೀನಿವಾಸಗೌಡರು ಕೇಳಿದ ಪ್ರಶ್ನೆಗೆ ತಮ್ಮ ಸರಕಾರವು ಈ ರೀತಿಯಲ್ಲಿ ಉತ್ತರವನ್ನು ಕೊಟ್ಟಿದೆ. ನೀವು ಕೈಗಾರಿಕೆಗಳಿಗೆ ಯಾವುದೇ ವಿಧವಾದ ಕಡಿತವನ್ನು ಹಾಕಿಲ್ಲ. ಆದರೆ ಈ ಕೆಲಸವನ್ನು ಹಿಂದೆ ಇದ್ದಂಥ ಸರಕಾರವು ಮಾಡಿತ್ತು ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನಿಮ್ಮ ಆದ್ಯತೆಯು ಇರತಕ್ಕಂಥಾದ್ದು ರೈತ ಅಲ್ಲ. ನಿಮ್ಮ ಆದ್ಯತೆ ಇರತಕ್ಕಂಥಾದ್ದು ಹಳ್ಳಿಗಳಲ್ಲ. ನಿಮ್ಮ ಆದ್ಯತೆಗಳು ಕೇವಲ ಕೈಗಾರಿಕೆಗಳು ಮತ್ತು ಬೆಂಗಳೂರು ನಗರ ಮಾತ್ರ. ಬೆಂಗಳೂರಿನಲ್ಲಿರತಕ್ಕಂಥವರನ್ನು ನೀವು ಚೆನ್ನಾಗಿ ನೋಡಿಕೊಂಡರೆ ಸಾಕು. ಕೈಗಾರಿಕೆಗಳನ್ನು ಚೆನ್ನಾಗಿ ನೋಡಿಕೊಂಡರೆ ಸಾಕು ಎನ್ನುವಂಥ ಭಾವನೆ ನಿಮ್ಮಲ್ಲಿ ತುಂಬಿ ತುಳುಕಾಡುತ್ತಿರುವುದು, ಖಂಡನೀಯ ಎಂಬ ಪದವನ್ನು ಬಳಸಿ ಹೇಳಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರು ಕೆಇಬಿ ಇಲಾಖೆಯ ಬಗ್ಗೆಯಾಗಲೀ, ಅಥವಾ ವಿದ್ಯುತ್ ಸರಬರಾಜಿನ ಬಗ್ಗೆಯಾಗಲೀ ಸಾಕಷ್ಟು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಅವರು ಆ ಕಡೆಯಲ್ಲಿ ಕುಳಿತಾಗಲೂ ಮತ್ತು ಈ ಕಡೆ ಇದ್ದಾಗಲೂ ಆ ಕುರಿತು ಶ್ರಮಿಸಿದ್ದಾರೆ ಹಾಗೂ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಈ ಬಗ್ಗೆ ಒಂದು ರಿಪೋರ್ಟ್‌ನ್ನೂ ಕೂಡ ಅವರು ವಿರೋಧಪಕ್ಷದಲ್ಲಿದ್ದಾಗ, ಆಸಕ್ತಿ ವಹಿಸಿ ಕೊಟ್ಟಿದ್ದಾರೆ. ತಮಗೂ ಗೊತ್ತಿದೆ. ತಾವು ಕೊಡುತ್ತಿದ್ದಂಥ ವಿದ್ಯುತ್ ಸರಬರಾಜು ಹೈಡ್ರೋ ಎಲೆಕ್ಟ್ರಿಕ್ ಜನರೇಷನ್‌ನಿಂದ ಉತ್ಪತ್ತಿಯಾಗುತ್ತಿರುವುದು. ಅದರ ಕಾಸ್ಟ್ ಏನಿತ್ತು? 15-20 ಪೈಸೆಗಳಷ್ಟಿತ್ತು. ಈಗ ನಾವು ರೈತರಿಗೆ ಕೊಡತಕ್ಕಂಥಾದ್ದರ ಕಾಸ್ಟ್ ಇವೊತ್ತು 2-3 ರೂಪಾಯಿಗಳವರೆಗೆ ಇದೆ. ಇದನ್ನು ತಾವೇ ಲೆಕ್ಕ ಹಾಕಿ. ಇದನ್ನು ಯಾರಿಗೂ ಕೊಡಬಾರದು ಎಂಬುದು ಇಲ್ಲ. ಇವೊತ್ತು ಲಿಂಗನಮಕ್ಕಿ ಜಲಾಶಯದಲ್ಲಿ 800 ರಿಂದ 1000 ಮೆಗಾವ್ಯಾಟ್ ಉತ್ಪಾದನೆಯಾಗತಕ್ಕಂಥಾದ್ದರಲ್ಲಿ ಕೇವಲ 400 ಮೆಗಾವ್ಯಾಟ್‌ನಷ್ಟು ಅಂದರೆ ಅರ್ಧದಷ್ಟೂ

ಕೂಡ ಉತ್ಪಾದನೆಯಾಗುತ್ತಿಲ್ಲ. ಹೀಗೆ ಉತ್ಪಾದನೆಯಲ್ಲಿ ಅಲ್ಲಿಯೇ ಕೊರತೆ ಇದೆ. ಇದೇ ರೀತಿಯಲ್ಲಿ ಹೈಡ್ರೋ ಎಲೆಕ್ಟ್ರಿಕ್-2900 ಮೆಗಾವ್ಯಾಟ್ಸ್ ಈ ನಮ್ಮ ರಾಜ್ಯಕ್ಕೆ ತೆಗೆದುಕೊಂಡಾಗ, ಅಂದರೆ ಜಲಾಶಯಗಳಿಂದ ಆಗತಕ್ಕಂತಾದ್ದು ಅದು ಕಡಿಮೆ ರೇಟ್‌ನಲ್ಲಿ ಆಗುತ್ತಿತ್ತು. ಅದನ್ನು ನಾವು ರೈತರಿಗೆ ಕೊಟ್ಟರೂ ಕೂಡ ನಮಗೆ ಯಾವ ತೊಂದರೆಗಳೂ ಆಗುತ್ತಾ ಇರಲಿಲ್ಲ. ಈಗ ನಾವು ಹೊರರಾಜ್ಯಗಳಿಂದ ಖರೀದಿ ಮಾಡಿ ಅಥವಾ ರಾಯಚೂರು ಥರ್ಮಲ್ ಪ್ಲ್ಯಾಂಟ್‌ನಿಂದ ತೆಗೆದುಕೊಂಡು ಒಂದು ಯೂನಿಟ್‌ಗೆ ಮೂರು-ಮೂರೂವರೆ ರೂಪಾಯಿಗಳನ್ನು ಖರ್ಚು ಮಾಡಿ ನೀವು ಕೊಟ್ಟ ರೇಟ್‌ಗೆ ಕೊಡಲು ಸಾಧ್ಯವೇ ಎಂಬುದರ ಬಗ್ಗೆ ತಾವುಗಳು ಕನ್‌ಸ್ಟ್ರಕ್ಟೀವ್ ಆಗಿ ಸಲಹೆ ಕೊಡಿ. ಅದು ಪ್ರಾಕ್ಟಿಕಲ್ ಆಗಿದ್ದರೆ ಇಂಪ್ಲಿಮೆಂಟ್ ಮಾಡೋಣ. ಬರೀ ಇಂಡಸ್ಟ್ರೀಗೆ ಕೊಡುತ್ತೀರಿ ಎಂದು ಹೇಳುತ್ತೀರಿ. ನ್ಯಾಚುರಲಿ, ಪ್ರೈಸ್ ಪ್ರಕಾರ ಅವರು ಕೊಡುತ್ತಿದ್ದಾರೆ, ಅದರಿಂದ ಖರೀದಿ ಮಾಡಿ ಅವರಿಗೆ ಕೊಡುತ್ತಿದ್ದೇವೆ. ಅದರೆ ಗ್ರಾಮೀಣ ಪ್ರದೇಶದ ಬಗ್ಗೆ ತಮಗೆ ಗೊತ್ತಿದೆ ಸುಮಾರು 2000 ಕೋಟಿ ಸಬ್ಸಿಡಿಯನ್ನು ಸರ್ಕಾರವೇ ಕೊಡುತ್ತಿದೆ. ಕೇಂದ್ರದಿಂದ ಬರಬೇಕಾದ್ದರಲ್ಲಿ ನಮಗೆ 600 ಕೋಟಿ ರೂ. ಡೆವಲ್ಯೂಷನ್ ಆಫ್ ಫಂಡ್ಸ್‌ನಲ್ಲಿ ಕಡಿತವಾಗಿದೆ ಎಂದು ನೀವೂ ಒಪ್ಪಿಕೊಂಡಿದ್ದೀರಿ, ಪತ್ರಿಕೆಗಳಲ್ಲೂ ಓದಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳೂ ಸಹ ಅನೇಕ ಸಾರಿ ಹೇಳಿದ್ದಾರೆ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ನೀವು ಅಧಿಕಾರದಲ್ಲಿದ್ದೀರಿ ಅಂತಲೇ ತಿಳಿದುಕೊಂಡು ಯೋಚನೆ ಮಾಡಿ, ಹೀಗೆ ಮಾಡಬೇಕು ಎಂದು ಹೇಳಿ. ಸುಮ್ಮನೆ ನೀವು ಪಟ್ಟಣದಲ್ಲಿ ಕೊಡುತ್ತೀರಿ, ಹಳ್ಳಿಗ್ಯಾಕೆ ಕೊಡುತ್ತಾ ಇಲ್ಲ ಎಂದು ಹೇಳಿ ತಾವೊಬ್ಬರೇ ಹಳ್ಳಿಗರ ಬಗ್ಗೆ ಅಥವಾ ಕೃಷಿಕರ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತೀರಿ ಎಂಬ ಅಭಿಪ್ರಾಯ ಕೊಡಬೇಡಿ. ನಾವೂ ನಿಮ್ಮ ಜೊತೆಯಲ್ಲಿದ್ದೇವೆ. ಯಾವ ರೀತಿ ಮಾಡಿದರೆ ಇದು ಸಾಧ್ಯ ಎಂದು ಬೇಕಾದರೆ ಹೇಳಿ. ನಮ್ಮ ಕಾಲವಿರಲಿ, ನಿಮ್ಮ ಕಾಲವಿರಲಿ ಇವತ್ತು 7 ಸಾವಿರ ಕೋಟಿ ಸಂಬಳ ಪೆನ್‌ಷನ್‌ಗಳಿಗೆಂದು ಕೊಡುತ್ತೇವೆ. ಇನ್ನು 4000 ಕೋಟಿ ರೂ.ಯನ್ನು ನೀವೂ ನಾವು ಮಾಡಿದ ಸಾಲದ ಬಡ್ಡಿಗಾಗಿ ವಾಪಸ್ ಕೊಡಬೇಕು. 2000 ಕೋಟಿ ರೂ ಸಬ್ಸಿಡಿ ಕೊಡಬೇಕು. ಕೇಂದ್ರದಿಂದ ಬರುವುದರಲ್ಲೇ 600 ಕೋಟಿ ರೂ ಕಡಿಮೆಯಾಯಿತು. ಇಂಥ ಸಂದರ್ಭದಲ್ಲಿ ನೀವಿದ್ದರೆ ಏನು ಮಾಡುತ್ತಿದ್ದೀರಿ ಎಂದು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ: 1996ರಲ್ಲಿ ನವೆಂಬರ್, ಮತ್ತು ಡಿಸೆಂಬರ್ ತಿಂಗಳಲ್ಲಿ 6 hours power supply for 3 phase........

ಶ್ರೀ ಸಿ.ಭೈರೇಗೌಡ: ಅಧಿಕೃತ ದಾಖಲೆ ನೋಡಿ ಹೇಳುತ್ತಿದ್ದರೆ ನನ್ನ ತಕರಾರಿಲ್ಲ. ನನ್ನ ಜ್ಞಾಪಕದ ಪ್ರಕಾರ ಹಗಲು 6 ಗಂಟೆ, ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆವರೆಗೆ ನಾವು ವಿದ್ಯುತ್ ಕೊಡುತ್ತಿದ್ದೆವು.

ಶ್ರೀ ಕಾಗೋಡು ತಿಮ್ಮಪ್ಪ: ಸನ್ನಿವೇಶ, ಸಂದರ್ಭಗಳು ಒದಗಿದರೆ ಯಾರಿದ್ದರೂ ಇಂತಹ

ಕೆಲಸ ಮಾಡಲೇಬೇಕಾದ ಅನಿವಾರ್ಯತೆ ಬಂದಿದೆ ಎಂಬುದಕ್ಕಾಗಿ ಹೇಳಿದೆ, ತಮಗೂ ಆ ಸನ್ನಿವೇಶ ಒದಗಿ ಬಂದಾಗ 3 ಫೇಸ್‌ಗೆ 6 ಗಂಟೆ ಕಾಲಕ್ಕೆ ಇಳಿಸಿದ್ದಿರಿ. ಹಾಗೆಯೇ ಈ ಸನ್ನಿವೇಶಗಳು ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಿ.

ಶ್ರೀ ಡಿ.ಎ.ಸದಾನಂದಗೌಡ: ಹಿಂದಿನ ದಿನಗಳಲ್ಲಿ ಹಗಲು 6 ಗಂಟೆ, ಮತ್ತು ರಾತ್ರಿ 10 ರಿಂದ ಬೆಳಗಿನ 6 ಗಂಟೆವರೆಗೆ 3 ಫೇಸ್ ಕರೆಂಟ್ ಇರುತ್ತಿತ್ತು, ಅದರಲ್ಲಿ ಎರಡು ಮಾತಿಲ್ಲ. ನಾವು ಗ್ರಾಮಾಂತರದವರು ಹೇಳುತ್ತಿದ್ದೇವೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಖರ್ಗೆಯವರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಸ್ವಾಮಿ, ಮಂತ್ರ ಹಾಕಿದರೆ ವಿದ್ಯುತ್ ಉತ್ಪಾದನೆ ಆಗುವುದಿಲ್ಲ. ಅದು ನನಗೂ ಕೂಡ ಗೊತ್ತಿದೆ. ಇಲ್ಲಿ ಮಾತನಾಡುವಾಗ ಕನ್‌ಸ್ಟ್ರಕ್ಟೀವಾಗಿ ಮಾತನಾಡಬೇಕಾದ ಜವಾಬ್ದಾರಿ ನನ್ನ ಮೇಲೂ ಇದೆ. ಅಧಿಕಾರ ಮಾಡಿರುವವರು, ನಾಳೆ ಅಧಿಕಾರಕ್ಕೆ ಬರತಕ್ಕಂತಹವರು - ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಇವತ್ತು ನಾನು ಮಾತನಾಡುತ್ತಿರುವುದು. ನಮ್ಮ ಕಾಲದಲ್ಲಿ ಕೇವಲ ಕೈಗಾರಿಕೆಗಳ ಮೇಲೆ ವಿದ್ಯುತ್ ಕಡಿತ ಮಾತ್ರ ಮಾಡುತ್ತಾ ಇರಲಿಲ್ಲ, ರಾಜ್ಯದ ಹೊರಗಡೆಯಿಂದ ವಿದ್ಯುತ್ ತರಲು ಪ್ರಾಮಾಣಿಕ ಪ್ರಯತ್ನವನ್ನು ನಾವು ನಡೆಸಿದ್ದೆವು. ತಮಗೆ ಜ್ಞಾಪಕವಿರಬಹುದು, ಒಂದು ಸಾರಿ, ಕಾವೇರಿ ನದಿಯಿಂದ ನೀರನ್ನು ತಮಿಳ್ನಾಡಿಗೆ ಬಿಟ್ಟು ಆ ನೀರಿಗೆ ಬದಲಾಗಿ ವಿದ್ಯುತ್ ತಂದಿರುವ ಉದಾಹರಣೆ ಕೂಡ ಈ ರಾಜ್ಯದಲ್ಲಿ ಇದೆ. ಅಷ್ಟೇ ಅಲ್ಲ, ಮಹಾರಾಷ್ಟ್ರಕ್ಕೆ ನಮ್ಮ ಸಚಿವರು, ಮುಖ್ಯಮಂತ್ರಿಗಳು ಹೋಗಿ ಮಾತನಾಡಿ ರಾತ್ರಿ ವೇಳೆ ಅಲ್ಲಿಂದ ವಿದ್ಯುತ್ ತಂದಿರುವ ಉದಾಹರಣೆ ಕೂಡ ಇದೆ. ಕೇಂದ್ರ ಗ್ರಿಡ್‌ನಿಂದ ಹೆಚ್ಚು ವಿದ್ಯುತ್ ತರುವ ಪ್ರಯತ್ನ ನಡೆಸಿದ ಉದಾಹರಣೆಗಳು ಇವೆ. ನೀವು ಯಾವುದನ್ನು ಮಾಡಿದ್ದೀರಿ ಸ್ವಾಮಿ? ನಿಮ್ಮ ಕೆಪಿಟಿಸಿಎಲ್ ಅಧ್ಯಕ್ಷರು ಹಾಗೂ ಮಾನ್ಯ ಮಂತ್ರಿಗಳು ಪತ್ರಿಕಾಗೋಷ್ಠಿ ನಡೆಸಿದಾಗ ಪ್ರಜಾವಾಣಿಯಲ್ಲಿ ವರದಿಯಾಗಿರುವುದನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ: ಕ್ಯಾಪ್ಷನ್ ಕೊಟ್ಟಿರುವುದು: ಅನಿಮಿಟಿ - ಹೆಚ್ಚಿನ ವಿದ್ಯುತ್ ಕಡಿತ ಇಲ್ಲ ಎಂದು ಹೇಳಿ, ವಿದ್ಯುತ್ ಪೂರೈಕೆಗಿಂತ ಬೇಡಿಕೆ ಹೆಚ್ಚಾಗಿದೆ - ಇದನ್ನು ನಾವೂ ಒಪ್ಪಿಕೊಳ್ಳುತ್ತೇವೆ. ಇಲ್ಲದಿದ್ದರೆ ಇಲ್ಲಿ ಚರ್ಚೆಯೇ ಅನಾವಶ್ಯಕ. ಮೊನ್ನೆ 10ನೇ ತಾರೀಖು ಭಾನುವಾರ ಸುಮಾರು 92 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು..........

ಶ್ರೀ ಕಾಗೋಡು ತಿಮ್ಮಪ್ಪ: ನೀವು ಮಾತುಕತೆ ವಿಚಾರ ಹೇಳುತ್ತಿದ್ದೀರಿ, ನಾನು ಹೇಳಬಯಸುತ್ತೇನೆ. 125 ಮೆಗಾವ್ಯಾಟ್‌ನಷ್ಟು ವಿದ್ಯುತ್ ಈಗ ಹೊರಗಡೆಯಿಂದ ಬರುತ್ತಾ ಇದೆ. ಅದರ ಜೊತೆಗೆ ಬೇರೆಯವರ ಜೊತೆ ಒಡಂಬಡಿಕೆ ಮಾಡಿರುವುದು ಬೇರೆ ಇದೆ. ಮತ್ತೆ ಏಪ್ರಿಲ್‌ನಲ್ಲಿ 37 ಮೆಗಾವ್ಯಾಟ್ ಸಿಗುವುದಕ್ಕೆ ಕೂಡ ಒಡಂಬಡಿಕೆ ಆಗಿದೆ.

ಶ್ರೀ ಸಿ.ಬೈರೇಗೌಡ: ನಾವಿದ್ದಾಗಲೂ ಈ ಪ್ರಯತ್ನ ನಡೆಯುತ್ತಾ ಇತ್ತು. ಆದರೆ ಇವತ್ತಿನ

ಭೀಕರತೆಗೆ ತಕ್ಕಂತೆ ಪ್ರಯತ್ನ ನಡೆದಿಲ್ಲ. ಕಾರಣವೇನೆಂದರೆ ಅವರೇ ಪತ್ರಿಕಾ ಗೋಷ್ಠಿಯಲ್ಲಿ ಹೇಳಿರುವಂತೆ, ಯಾವುದೇ ವಿದ್ಯುತ್ ಮೂಲಕದಿಂದ ಖರೀದಿಸಲು ಮಾರ್ಚ್ ಅಂತ್ಯದ ವೇಳೆಗೆ ಟೆಂಡರ್ ಕರೆಯಲಾಗುವುದು. ಅಂದರೆ ಈಗ ಟೆಂಡರ್ ಕರೆಯಲು ಹೊರಟಿದ್ದಾರೆ! ಆಮೇಲೆ ಅವರ ಜೊತೆ ಮಾತುಕತೆ ನಡೆಸುತ್ತಾರೆ, ಯಾವಾಗ ಸ್ವಾಮಿ? ನಮ್ಮ ಕಡೆ ಗಾದೆ ಇರುವುದು ಏನೆಂದರೆ 'ಮನೆಗೆ ಬೆಂಕಿ ಬಿದ್ದಾಗ ಬಾವಿ ಅಗೆದರು' ಅಂತ. ಬೆಂಕಿ ಬಿದ್ದು ಬೂದಿಯಾಗುವ ಪರಿಸ್ಥಿತಿಯನ್ನು ರಾಜ್ಯದ ರೈತರು ಈಗಾಗಲೇ ಅನುಭವಿಸುತ್ತಿದ್ದಾರೆ. ಇನ್ನೂ ನೀವು ಬಾವಿ ತೋಡಲೂ ಪ್ರಯತ್ನ ಪಟ್ಟಿಲ್ಲವಲ್ಲಾ! ಇವರಿಗೆ ಮೊದಲು ಟೆಂಡರ್ ಕರೆಯಬೇಡಿ ಎಂದು ಯಾರು ಹೇಳಿದ್ದರು ಸ್ವಾಮಿ? ಹೇಳಿ ನೋಡೋಣ. ದೆಹಲಿಗೆ ಹೋಗಿ ಯಾರಿಂದಾದರೂ ಇದಕ್ಕೆ ಅನುಮತಿ ತರಬೇಕಾಗಿತ್ತಾ? ಮೊದಲೇ ಟೆಂಡರ್ ಕರೆಯಬೇಕಾಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ: 150 ಮೆಗಾವ್ಯಾಟ್‌ಗೆ ಹೆಚ್ಚು ಇದ್ದರೆ.......

ಶ್ರೀ ಸಿ.ಭೈರೇಗೌಡ: ಅದು ಇಲ್ಲ ಎಂದು ನಾನು ಹೇಳುತ್ತಿಲ್ಲ. ಈವತ್ತು ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಅವಶ್ಯಕತೆ ಇದೆಯೋ, ಯಾವ ಪ್ರಮಾಣದಲ್ಲಿ ನೀವು ಪ್ರಯತ್ನವನ್ನು ನಡೆಸಬೇಕಾಗಿತ್ತೋ, ಆ ಪ್ರಯತ್ನವನ್ನು ನಡೆಸಿಲ್ಲ ಎಂಬುದು ನನ್ನ ವಾದ. ಅದಕ್ಕೆ ಉದಾಹರಣೆ ಅವರೇ ಹೇಳಿದ್ದಾರೆ. ಸರ್ಕಾರದಿಂದ ಮಾನ್ಯ ಮಂತ್ರಿಗಳು, ಕೆಪಿಟಿಸಿಎಲ್‌ನ ಅಧ್ಯಕ್ಷರು ಮಂಗಳವಾರ 12ನೇ ತಾರೀಖಿನ ಪ್ರಜಾವಾಣಿ ಪತ್ರಿಕೆಯನ್ನು ತಾವು ಓದಿ ನೋಡಿ ಅವರೇ ಹೇಳಿರತಕ್ಕದ್ದನ್ನು ನಾನು ಈ ಸಭೆಯ ಗಮನಕ್ಕೆ ಮತ್ತು ರಾಜ್ಯದ ಜನತೆಯ ಗಮನಕ್ಕೆ ತರುವ ಪ್ರಯತ್ನ ನಡೆಸಿದ್ದೇನೆ. ನಮ್ಮ ಜಲಾಶಯಗಳ ನೀರಿನ ಮಟ್ಟ ನಿಮಗೆ ನಮಗೆ ಎಲ್ಲರಿಗೂ ಗೊತ್ತಿತ್ತು. ಎರಡು ತಿಂಗಳ ಹಿಂದೆ ನೀವೆ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟಿದ್ದಿರಿ, ಇಲ್ಲ ಎಂದು ನಾನು ಹೇಳುವುದಿಲ್ಲ. ಈ ಸಾರಿ ಹೀಗೆ ವಿದ್ಯುತ್ ಕೊರತೆ ಉಂಟಾಗುತ್ತದೆ, ಆದ್ದರಿಂದ ಬೆಳೆಗಳನ್ನು ಕಡಿಮೆ ಮಾಡಿಕೊಳ್ಳಿ ಎಂದು ಆಗಲೇ ನಿಮಗೆ ಗೊತ್ತಿತ್ತು. ಅಂದರೆ ಆಗಿನಿಂದಲೇ ಇಂತಹ ಪ್ರಯತ್ನವನ್ನು ನೀವು ಯಾಕೆ ನಡೆಸಲಿಲ್ಲ? ನಡೆಸದಿರಲು ಕಾರಣಗಳೇನು? ಇದನ್ನು ಹೇಳಬೇಕಾಗುತ್ತದೆ. ಮತ್ತೆ ಪತ್ರಿಕೆಯಲ್ಲಿ, ಈಗ ಒರಿಸ್ಸಾದಿಂದ 100 ಮೆಗಾವ್ಯಾಟ್ ವಿದ್ಯುತ್ ಖರೀದಿಗೆ ಸಹಿ ಹಾಕಿದ್ದು ಈ ಹೆಚ್ಚುವರಿ ವಿದ್ಯುತ್ ಪಡೆಯಲು ರಾಜ್ಯಸರ್ಕಾರಕ್ಕೆ ಮಾಸಿಕವಾಗಿ 10 ಕೋಟಿ ಖರ್ಚು ತಗುಲಲಿದ್ದು ಅದನ್ನು ಭರಿಸುವ ಭರವಸೆಯನ್ನು ರಾಜ್ಯಸರ್ಕಾರ ನೀಡಿದೆ ಎಂದು ಶ್ರೀ ಬಾಳಿಗಾರ್ ತಿಳಿಸಿದರಂತೆ. ಸಹಿ ಹಾಕಿದ್ದೀರಿ ಅಷ್ಟು ವಿದ್ಯುತ್ ಬರುತ್ತಿದೆಯೇನು ಈಗ? ನೀವು ಹೇಳಿದಷ್ಟು ವಿದ್ಯುತ್ತನ್ನು ಯಾವ ಮೂಲದಿಂದ ಪಡೆಯುತ್ತೀರೆಂಬುದು ನನಗೆ ಗೊತ್ತಿಲ್ಲ. ಆದರೆ ಪತ್ರಿಕೆ ಓದಿದಾಗ ವ್ಯಕ್ತವಾಗುವುದೇನೆಂದರೆ....

೫.೧೦ ಪಿ.ಎಂ.

ನೂರು ಮೆಗಾವ್ಯಾಟ್ ವಿದ್ಯುತ್ತನ್ನು ಒರಿಸ್ಸಾದಿಂದ ತರಿಸುವುದಕ್ಕೆ ಈಗ ಪ್ರಯತ್ನಪಟ್ಟಿದ್ದೀರಿ.

ಈ ಪ್ರಯತ್ನವನ್ನು ಮೊದಲೇ ಏಕೆ ಮಾಡಲಿಲ್ಲವೆಂಬುದು ನನ್ನ ಪ್ರಶ್ನೆ ಇರತಕ್ಕಂಥಾದ್ದು. ಅದೂ ಅಲ್ಲದೆ ಆಂಧ್ರದಿಂದ ಸಿಂಹಾದ್ರಿ ವಿದ್ಯುತ್ ಸ್ಥಾವರದಿಂದ ನೂರು ಮೆಗಾವ್ಯಾಟ್ ವಿದ್ಯುತ್‌ನ್ನು ಪಡೆಯಲು ಅಲ್ಲಿನ ಸರ್ಕಾರದೊಂದಿಗೆ ಚರ್ಚೆ ನಡೆದಿದೆ. ಈ ಚರ್ಚೆಯನ್ನು ಮೊದಲೇ ಮಾಡಬೇಕಿತ್ತು ಎಂದು ಯಾರಾದರೂ ಹೇಳಿದ್ದರೇ? ಯಾವಾಗ? ಇವತ್ತು ಇನ್ನು ಮಳೆಗಾಲ ಪ್ರಾರಂಭವಾಗುತ್ತಿದೆ. ಮಲೆನಾಡಿನಲ್ಲಿ ಯಾವಾಗ ಮಳೆ ಪ್ರಾರಂಭವಾಗುತ್ತದೆ ಎಂದು ತಮಗೆ ಗೊತ್ತಿದೆ. ಜೂನ್ ತಿಂಗಳಲ್ಲಿ ಮೊದಲನೇ ವಾರದಿಂದ ಮಳೆಗಾಲ ಪ್ರಾರಂಭವಾಗುತ್ತದೆ. ಮೊದಲನೇ ವಾರದಲ್ಲಿಯೇ ಶರಾವತಿಗೆ ನೀರು ಬರುವುದಕ್ಕೆ ಪ್ರಾರಂಭವಾಗುತ್ತದೆ. ಈಗ ಇವತ್ತಿನ ದಿವಸ ಹತ್ತಿರ ಬರುತ್ತಿದೆ. ಆದರೆ ಕೊರತೆ ಬಗ್ಗೆ ನಿಮಗೆ ಮೂರು ನಾಲ್ಕು ತಿಂಗಳಲ್ಲಿ ಮಳೆಗಾಲ ನಿಂತಾಗಲೇ ಶರಾವತಿ ಮತ್ತು ನಾಗಝರಿಯಲ್ಲಿ ಎಷ್ಟೆಷ್ಟು ನೀರು ನಿಂತಿತ್ತು ಎಂದು ಇವತ್ತು ಲೆಕ್ಕ ಹಾಕಬೇಕಾಗಿಲ್ಲ. ಸುಮಾರು ಆರು ತಿಂಗಳಿಂದಲೇ ನಿಮಗೆ ಗೊತ್ತಾಗಿತ್ತು. ಆರು ತಿಂಗಳಿಂದ ನಾವು ಎಷ್ಟು ವಿದ್ಯುತ್‌ನ್ನು ಉತ್ಪಾದನೆ ಮಾಡಬಹುದು ಎನ್ನುವುದೂ ಗೊತ್ತಾಗಿತ್ತು. ಆದರೆ ಆಗ ಈ ಪ್ರಯತ್ನ ನಡೆಯಲಿಲ್ಲ. ಈಗ ಈ ಪ್ರಯತ್ನವನ್ನು ನಡೆಸುವುದಕ್ಕೆ ಹೊರಟಿದ್ದೀರಲ್ಲಾ, ಇದು ಈ ರಾಜ್ಯದ ರೈತರ ದೃಷ್ಟಿಯಿಂದ ಸಕಾಲದಲ್ಲಿ ನೀವು ಕ್ರಮ ತೆಗೆದುಕೊಳ್ಳುವುದರಲ್ಲಿ ವೈಫಲ್ಯತೆ ಎದ್ದು ಕಾಣುತ್ತಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲೇಬೇಕಾಗಿದೆ. ಈ ಕೆಲಸವನ್ನು ಮೊದಲೇ ಮಾಡಬೇಕಾಗಿತ್ತು, ಕೊರತೆ ಕಂಡ ತಕ್ಷಣವೇ ಮಾಡಬೇಕಾಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ: ಛತ್ತೀಸ್‌ಗಡ್‌ದಿಂದ 120 ಮೆಗಾವ್ಯಾಟ್ ವಿದ್ಯುತ್‌ಗೆ ಪ್ರಯತ್ನ ಮಾಡಿರುವ ಕಾರಣದಿಂದಲೇ ಬಂದಿದ್ದು.

ಶ್ರೀ ಸಿ. ಭೈರೇಗೌಡ: ಈಗ ಮಾತುಕತೆ ನಡೆಸುತ್ತಿದ್ದೀರಿ ಎಂದು ನಾನೇ ಹೇಳುತ್ತಿದ್ದೇನೆ. ಈ ಪ್ರಯತ್ನವನ್ನು ಮೊದಲೇ ಏಕೆ ಮಾಡಲಿಲ್ಲ ಎನ್ನತಕ್ಕಂಥಾದ್ದು ನನ್ನ ವಾದ ಇರತಕ್ಕದ್ದು. ಇದು ಅಷ್ಟೇ ಅಲ್ಲದೆ ಈಗ ಕೆಪಿಟಿಸಿಎಲ್‌ನವರು ಸಕ್ರಮಗೊಳಿಸುವ ಕೆಲಸವನ್ನು ಮಾಡಿದ್ದಾರೆ. ಬಹಳ ಸಂತೋಷ ನನಗೆ. ನಾನಂತೂ ಅದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಸರ್ಕಾರ ಯಾರೇ ನಡೆಸಲಿ ಸ್ವಾಮಿ, ಇದೇನೂ ಧರ್ಮಛತ್ರವಲ್ಲ. ಕೆಪಿಟಿಸಿಎಲ್ ಎಂದರೆ ಧರ್ಮಛತ್ರ ನಡೆಸಿದಂತೆ ನಡೆಸುವುದಕ್ಕಾಗುವುದಿಲ್ಲ. ಯಾರು ಅನುಕೂಲ ಪಡೆಯುತ್ತಾರೋ, ಅನುಕೂಲ ಪಡೆಯತಕ್ಕಂಥವರು ಪೂರ್ತಿಯಾಗಿ ಅಲ್ಲದಿದ್ದರೂ ಅದರ ಬಹುಭಾಗವಾದರೂ ವಾಪಸ್ ಬರಬೇಕಾಗುತ್ತದೆ. ಆ ಸಂಸ್ಥೆ ಕೂಡ ಉಳಿಯಬೇಕಾಗುತ್ತದೆ. ಕೆಪಿಟಿಸಿಎಲ್ ಉಳಿದಿದ್ದರೆ, ಕೆಪಿಸಿ ಉಳಿದಿದ್ದರೆ ನೀವು ವಿದ್ಯುತ್ ಕೊಡಲಿಲ್ಲ, ಅಥವಾ ಸರಿಯಾದ ವೋಲ್ಟೇಜ್ ಇಲ್ಲವೆಂದು ಹೇಳಿ ನಾವು ದೂರನ್ನು ಕೊಡಬಹುದು. ಆ ಸಂಸ್ಥೆಯೇ ಪತ್ತೆ ಇಲ್ಲ, ಅದು ದಿವಾಳಿಯಾದರೆ ನಾವು ಯಾರನ್ನು ಕೇಳುವುದಕ್ಕಾಗುತ್ತದೆ? ಯಾರನ್ನೂ ಕೇಳುವುದಕ್ಕಾಗುವುದಿಲ್ಲ. ಯಾರು ಅನುಕೂಲವನ್ನು ಪಡೆಯುತ್ತಾರೋ, ಹಾಗೆ ಅನುಕೂಲ ಪಡೆಯತಕ್ಕಂಥವರು ಸ್ವಲ್ಪ

ಭಾಗವಾದರೂ ಕೂಡ ವಾಪಸ್ ಕೊಡಬೇಕು. ಕೆಪಿಟಿಸಿಎಲ್ ಎಂದರೆ ಎಲ್ಲರಿಗೂ ಭಿಕ್ಷೆ ಕೊಡುವ ಸಂಸ್ಥೆಯಲ್ಲ. ಅವರು ಅದನ್ನು ಆರ್ಥಿಕವಾಗಿ ನೋಡಬೇಕಾಗುತ್ತದೆ. ಲಾಭ-ನಷ್ಟ ಕೂಡ ಲೆಕ್ಕ ಹಾಕಬೇಕಾಗುತ್ತದೆ. ಆ ಲಾಭ-ನಷ್ಟ ಲೆಕ್ಕ ಹಾಕಿ ವ್ಯವಹಾರಿಕವಾಗಿ ಆ ಸಂಸ್ಥೆಯನ್ನು ನಡೆಸಬೇಕಾಗುತ್ತದೆ. ಈ ಕೆಲಸ ಮಾಡುವುದನ್ನು, ಇವತ್ತು ಸಕ್ರಮಗೊಳಿಸುವುದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಆದರೆ ಇವತ್ತು ಸಕ್ರಮಗೊಳಿಸುವ ಸಂದರ್ಭದಲ್ಲಿ ಮುಖ್ಯವಾಗಿ ಪಂಪಸೆಟ್‌ಗಳ ಬಗ್ಗೆ ನೋಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ 15 ರಿಂದ 16 ಲಕ್ಷ ಪಂಪ್‌ಸೆಟ್‌ಗಳು ಇವೆ. ಅದರಲ್ಲಿ ನನ್ನ ಲೆಕ್ಕಚಾರದ ಪ್ರಕಾರ ಸುಮಾರು 3 ಲಕ್ಷ ಪಂಪ್‌ಸೆಟ್‌ಗಳು ಅನಧಿಕೃತವಾಗಿವೆ. ಅವುಗಳನ್ನು ನಮ್ಮ ಕಾಲದಲ್ಲೇ ಅದನ್ನು ಸಕ್ರಮಗೊಳಿಸ ಬೇಕೆನ್ನುವ ಪ್ರಯತ್ನ ಕೂಡ ನಡೆಯಿತು. ಹಾಗೆ ಪ್ರಯತ್ನ ನಡೆದು ಅನೇಕ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸತಕ್ಕ ಕೆಲಸ ಕೂಡ ಆಯಿತು. ಏಕೆಂದರೆ ರೈತರು ಇವತ್ತು ನಮ್ಮ ಆಡಳಿತ ಯಂತ್ರದ ಕೈಗೆ ಸಿಕ್ಕಿ ತೊಂದರೆಗೊಳಗಾಗಿದ್ದಾರೆ. ರೈತ ಬಾವಿ ತೆಗೆಯುತ್ತಾನೆ, ಅವನಿಗೆ ನೀರು ಸಿಗುತ್ತದೆ. ತತ್‌ಕ್ಷಣ ನೀರನ್ನು ಬಳಕೆ ಮಾಡಿಕೊಂಡು ನಾಲ್ಕು ಕಾಸನ್ನು ಸಂಪಾದನೆ ಮಾಡಿಕೊಳ್ಳಬೇಕೆನ್ನುವ ಆಸೆ ಇದೆ. ಸಮಾಜದಲ್ಲಿ ಬೇರೆ ವರ್ಗಗಳ ಜೊತೆ ರೈತನೂ ಕೂಡ ಬದುಕಬೇಕಾಗಿದೆ. ಈ ದೇಶದಲ್ಲಿ, ಈ ಸಮಾಜದಲ್ಲಿ ರೈತನೇನೂ ಪಾಪ ಮಾಡಿ ಹುಟ್ಟಿಲ್ಲ. ಅವನೂ ಕೂಡ ಬದುಕಬೇಕಾಗಿದೆ. ಬದುಕತಕ್ಕಂಥ ಆಸೆ ಇಟ್ಟುಕೊಂಡು ಆ ಆಸೆಯಿಂದ ಕೊಳವೆ ಬಾವಿ ಹಾಕುತ್ತಾನೆ ಅಥವಾ ಒಂದು ಬಾವಿಯನ್ನು ತೋಡಿಸುತ್ತಾನೆ. ಬಾವಿಯಾಗಲಿ, ಕೊಳವೆ ಬಾವಿಯಾಗಲಿ ಅದರಲ್ಲಿ ನೀರು ಸಿಕ್ಕಿದರೆ ರೈತರಿಗೆ ಅದಕ್ಕಿಂತ ಬಂಗಾರದ ಗಣಿ ಮತ್ತೊಂದಿಲ್ಲ. ಆ ಬಂಗಾರವನ್ನು ನೋಡುತ್ತಿರುತ್ತಾನೆ ರೈತ. ಅದನ್ನು ನೋಡಿದಾಗ....

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರು ಮಾತನಾಡುತ್ತಾ ಅಕ್ರಮ ಇರುವುದನ್ನು ಸಕ್ರಮ ಮಾಡುತ್ತಾರೆ ಎಂದು ಹೇಳಿದರು. ಆದರೆ ಒಂದು ವಿಪರ್ಯಾಸ ಇವತ್ತು ಬಂಟ್ವಾಳ ತಾಲ್ಲೂಕಿನಲ್ಲಿ ನಡೆಯುತ್ತಿದೆ. ನಮ್ಮ ಉಸ್ತುವಾರಿ ಮಂತ್ರಿಗಳು ಇದ್ದಾರೆ. ಬಂಟ್ವಾಳ ತಾಲ್ಲೂಕಿನಲ್ಲಿ ವಿಶೇಷವಾಗಿ ಕಪ್ಪು ಪ್ರದೇಶ ಎಂದು ಘೋಷಣೆ ಮಾಡಿ ಅಲ್ಲಿ ಈಗ ಇರುವ ಯಾವುದೇ ಕನೆಕ್ಷನ್‌ಗಳನ್ನು ಸಕ್ರಮ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಈಗಾಗಲೇ ನೋಟೀಸ್ ಇಷ್ಯೂ ಮಾಡುತ್ತಿದ್ದಾರೆ. ಬಂಟ್ವಾಳ ತಾಲ್ಲೂಕಿನಲ್ಲಿ ಪೂರ್ತಿ ಕಪ್ಪು ಪ್ರದೇಶವಾದ ಕಾರಣ ಅಲ್ಲಿ ಯಾವುದೇ ಕನೆಕ್ಷನ್ನನ್ನು ಕೊಡುತ್ತಿಲ್ಲ. 3 ಹಾರ್ಸ್‌ಪವರ್ ಇದ್ದುದನ್ನು ಈಗ 5 ಹಾರ್ಸ್ ಪವರ್‌ಗೆ ಅಳವಡಿಸಿದರೆ ಅದನ್ನು ಸಕ್ರಮ ಮಾಡುವುದಿಲ್ಲ. ತಕ್ಷಣ ಅದನ್ನು ಡಿಸ್-ಕನೆಕ್ಟ್ ಮಾಡುತ್ತೇವೆಂದು ಹೇಳಿ ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ನಾನು ಇವತ್ತೇ ಸರ್ಕಾರವನ್ನು ಆಗ್ರಹ ಮಾಡುತ್ತಿದ್ದೇನೆ, ಆ ಬಂಟ್ವಾಳ ತಾಲ್ಲೂಕಿನಲ್ಲಿರುವ ಕಪ್ಪು ಪ್ರದೇಶವಲ್ಲಿ ಈಗಾಗಲೇ ಯಾರು ಕನೆಕ್ಷನ್ನನ್ನು ಪಡೆದುಕೊಂಡು ಮೂರು ಹಾರ್ಸ್‌ಪವರ್, ಐದು ಹಾರ್ಸ್‌ಪವರ್‌ನ ಪಂಪ್‌ನ್ನು ಹಾಕಿದ್ದಾರೋ, ಮತ್ತೊಂದು ಮಾಡಿದ್ದಾರೋ, ಇದನ್ನು

ಯಾವುದೇ ಸಂದರ್ಭದಲ್ಲಿ ಕೂಡ ಡಿಸ್‌ಕನೆಕ್ಟ್ ಮಾಡುವುದಿಲ್ಲವೆಂದು ಆದೇಶವನ್ನು ಕೊಡಬೇಕು. ಮೊನ್ನೆಯಿಂದೀಚೆಗೆ ಅಲ್ಲಿಂದ ತುಂಬಾ ಜನರು ಬರುತ್ತಿದ್ದಾರೆ, ಬಂದು ಏನು ಹೇಳುತ್ತಿದ್ದಾರೆಂದರೆ ಅಧಿಕಾರಿಗಳು ಏಕಾಏಕಿ ನೋಟೀಸ್ ಕೊಡುತ್ತಿದ್ದಾರೆ, 6ನೇ ತಾರೀಖಿಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡುವ ಸಂದರ್ಭದಲ್ಲಿ ನಿಮ್ಮದನ್ನು ಮಾಡುವುದಕ್ಕಾಗುವುದಿಲ್ಲ, ನಿಮ್ಮದು ಕಪ್ಪು ಪ್ರದೇಶ. ಕಪ್ಪು ಪ್ರದೇಶದಲ್ಲಿರತಕ್ಕಂಥದ್ದನ್ನು ನಾವು ಸಕ್ರಮೀಕರಣ ಮಾಡುವುದಕ್ಕಾಗುವುದಿಲ್ಲ. 3 ಹಾರ್ಸ್‌ಪವರ್‌ಗಿಂತ ಸ್ವಲ್ಪ ಜಾಸ್ತಿ ಹಾಕಿಕೊಂಡಿದ್ದರೆ ತಕ್ಷಣ ರಿಮೂವ್ ಮಾಡುತ್ತೇವೆಂದು ಹೇಳಿ ನೋಟೀಸ್‌ಗಳನ್ನು ಮತ್ತು ಬಲಾತ್ಕಾರವಾಗಿ ಅದನ್ನು ನಿಲ್ಲಿಸುವ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ಬಗ್ಗೆ ಪರಿಶೀಲನೆಯಾಗಬೇಕು. ತಕ್ಷಣ ಯಾವುದೇ ರೀತಿಯಾದಂಥ ಡಿಸ್‌ಕನೆಕ್ಷನ್ಸ್, ಮತ್ತೊಂದು ಆಗದ ರೀತಿಯಲ್ಲಿ ರೈತನನ್ನು ನೋಡಿಕೊಳ್ಳಬೇಕು ಎನ್ನುವ ಒಂದು ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೇ, ಬಂಟ್ವಾಳ ಒಂದೇ ಅಲ್ಲ, ಎಲ್ಲಾ ಡಾರ್ಕ್ ಏರಿಯಾ ಇರುವ ತಾಲ್ಲೂಕುಗಳು ಎಂದು ಹೇಳಿ.

ಶ್ರೀ ಡಿ.ವಿ.ಸದಾನಂದಗೌಡ: ವಿಶೇಷವಾಗಿ ನನ್ನ ಭಾಗದ ಜನರು ಬಂದು ನನ್ನಲ್ಲಿ ಹೇಳಿದ್ದು, ಈ ರೀತಿ ಕಪ್ಪು ಪ್ರದೇಶದಲ್ಲಿರುವುದನ್ನು ಯಾವುದೇ ರೀತಿಯಲ್ಲಿ ಡಿಸ್‌ಕನೆಕ್ಟ್ ಮಾಡಬಾರದು ಮತ್ತು ಸಕ್ರಮೀಕರಣ ಮಾಡಬೇಕು. ತಕ್ಷಣ ಕೊಡುತ್ತಿರುವ ಅಂಥ ನೋಟೀಸ್‌ಗಳನ್ನು ನಿಲ್ಲಿಸಬೇಕೆನ್ನುವ ವಿನಂತಿಯನ್ನು ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ: ಇದಕ್ಕೋಸ್ಕರ ಒಂದು ಯೋಜನೆಯನ್ನು ಕೂಡ ಕೆಪಿಟಿಸಿಎಲ್‌ನವರು ಸಕ್ರಮಗೊಳಿಸುವ ಬಗ್ಗೆ ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಸರ್ಕಾರ 15-02-2002 ರಂದು ಒಪ್ಪಿಗೆಯನ್ನೂ ಕೂಡ ಕೊಟ್ಟಿದೆ. ಅದೇ ದಿವಸ ಕೆಪಿಟಿಸಿಎಲ್ ನವರೂ ಸಹ ಒಂದು ಯೋಜನೆಯನ್ನು ಜಾರಿಗೆ ಕೊಟ್ಟಿದ್ದಾರೆ. ಅಂದರೆ ಏಪ್ರಿಲ್ ತಿಂಗಳಿಂದ 4ನೇ ತಾರೀಖು ಅಥವಾ 10ನೇ ತಾರೀಖಿನ ಒಳಗಾಗಿ ಎಲ್ಲಾ ಇನ್‌ಸ್ಟಾಲೇಷನ್ಸ್ ಏನು ಇದ್ದಾವೆ, ಇವೆಲ್ಲಾ ಸಕ್ರಮಗೊಳ್ಳಬೇಕು ಎನ್ನುವ ಒಂದು ಯೋಜನೆಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ನಾನು ಈ ಯೋಜನೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ ಮತ್ತು ಇದಕ್ಕೆ ಈ ಸದನ ಕೂಡ ಒಪ್ಪಿಗೆ ಕೊಟ್ಟಿದೆ. ಯಾರು ಕಳ್ಳತನದಿಂದ ಈ ವಿದ್ಯುತ್ತನ್ನು ಬಳಸುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಈ ಮನೆ ಈಗಾಗಲೇ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದೆ. ಅದನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೆ ಕೊಡಬೇಕಾಗಿರುವ ಅವಶ್ಯಕತೆ ಇದೆ. ಇವತ್ತಿನ ದಿವಸ ಇದರ ಹಿನ್ನೆಲೆ ಕೂಡ ಏನೆಂದರೆ, ಮೊನ್ನೆ ತಾನೇ ಕೆಪಿಟಿಸಿಎಲ್‌ನ ಒಬ್ಬ ಅಧಿಕಾರಿಯ ಮನೆಯನ್ನು ವಿಜಿಲೆನ್ಸ್‌ನವರು ರೈಡ್ ಮಾಡಿದ್ದಾರೆ. ಎಷ್ಟು ಸಿಕ್ಕಿತು? 4 ರಿಂದ 5 ಕೋಟಿ ರೂಪಾಯಿಗಳು!

ಒಬ್ಬ ಮುಖ್ಯ ಇಂಜಿನಿಯರ್ ಮನೆಯನ್ನು ಜಪ್ತಿ ಮಾಡಿದರೆ 4 ರಿಂದ 5 ಕೋಟಿ ರೂಪಾಯಿಗಳು ಸಿಗುತ್ತದೆ. ಒಬ್ಬ ಕೆಪಿಟಿಸಿಎಲ್‌ನ ಮೆಕ್ಯಾನಿಕ್ ಮನೆಯನ್ನು ರೈಡ್ ಮಾಡಿದರೆ ಸುಮಾರು ಮೂರು ಕೋಟಿ ರೂಪಾಯಿಗಳು ಸಿಗುತ್ತದೆ. ಇದೆಲ್ಲಾ ನಡೆದಿದೆ. ಇವರೆಷ್ಟು ಧನಿಕರಾಗಿದ್ದಾರೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂತಹ ಪರಿಸ್ಥಿತಿ ಒಂದು ಕಡೆ ಉಂಟಾದರೆ ಇವತ್ತು ಹಣದ ಕಣಜಗಳನ್ನು ಕಟ್ಟಿಸಿಕೊಂಡಿರತಕ್ಕ ಅಧಿಕಾರಿಗಳು ಕೆಪಿಟಿಸಿಎಲ್‌ನಲ್ಲಿ ಸಾಕಷ್ಟು ಜನರು ಇದ್ದಾರೆ. ಇವತ್ತು ಈ ಖಾಯಿಲೆ ಇಡೀ ಕರ್ನಾಟಕದಲ್ಲಿಯೇ ಅಲ್ಲ, ಇಡೀ ದೇಶಾದ್ಯಂತ ಇದೆ. ಒರಿಸ್ಸಾದಲ್ಲಿ ಖಾಸಗಿ ಸಂಸ್ಥೆಯವರು ಒಂದು ಸಮೀಕ್ಷೆಯನ್ನೂ ಕೂಡ ನಡೆಸಿದ್ದಾರೆ. ಅಲ್ಲಿ ಶೇಕಡ 60ರಷ್ಟು ವಿದ್ಯುತ್ ಕಳ್ಳತನವಾಗುತ್ತದೆ ಎನ್ನುವ ಒಂದು ಸಮೀಕ್ಷೆಯಿಂದ ತಿಳಿದುಬಂದಿದೆ. ಆದ್ದರಿಂದಲೇ ನಾನು ಹೇಳಿದ್ದು, ಇವತ್ತು ಈ ಸಂಸ್ಥೆಗಳು ಬದುಕಿ ಉಳಿಯಬೇಕು. ಅದು ಆರ್ಥಿಕವಾಗಿ ಸಬಲವಾಗಿರಬೇಕು. ಆ ಸಬಲತೆಯನ್ನು ಕಾಪಾಡಿಕೊಳ್ಳತಕ್ಕಂಥಾದ್ದಕ್ಕೆ ಇಂಥ ಯೋಜನೆಗಳು ಸಹಕಾರಿಯಾಗುತ್ತವೆ. ಇದನ್ನು ನಾನು ಸ್ವಾಗತಿಸುತ್ತಾ, ಇವತ್ತು ಹೇಳಿರುವ ಎಲ್ಲವನ್ನೂ ಕೂಡ ಮೇಲಿನಿಂದ ಕೆಳಗಡೆವರೆಗೂ ನಾನು ಓದಿದೆ. ಇದರಲ್ಲಿ ಏನು ಇದೆ ಎಂದರೆ ಮಾತೆತ್ತಿದರೆ ಐಪಿ ಸೆಟ್‌ಗಳೇ. ಈ ಮಾರಿ ಕಣ್ಣೆಲ್ಲಾ ಯಾರ ಮೇಲೆ ಎಂದರೆ ಹೋತನ ಮೇಲೆ ಎನ್ನುವ ಹಾಗೆ. ಇದು ಕೆಪಿಟಿಸಿಎಲ್ ಇರಬಹುದು, ಸರ್ಕಾರ ಇರಬಹುದು, ಇವರ ಕಣ್ಣೆಲ್ಲಾ ಉರಿಗಣ್ಣನ್ನೂ ರೈತರ ಮೇಲೆ ಬಿಡುವ ಪರಿಸ್ಥಿತಿ ಇವತ್ತಿನ ದಿವಸ ಇದೆ. ರೈತರು ಬಳಸುತ್ತಿರುವ ಅನಧಿಕೃತ ಪಂಪ್‌ಸೆಟ್‌ಗಳನ್ನು ಕೂಡ ಸಕ್ರಮಗೊಳಿಸಿ, ಬಹಳ ಸ್ವಾಗತ. ಯಾವುದೇ ಕಾರಣದಿಂದಲೂ ಯಾರೇ ಇರಬಹುದು, ಅವನು ಅಕ್ರಮವಾಗಿ ವಿದ್ಯುತ್ತನ್ನು ಬಳಸುವುದಕ್ಕೆ ಅವಕಾಶ ಇರಬಾರದು. ಅದನ್ನು ತಾವು ತೀಕ್ಷ್ಣವಾಗಿ ಜಾರಿಗೆ ಕೊಡಬೇಕಾಗಿರುವ ಅವಶ್ಯಕತೆ ಕೂಡ ಇದೆ. ಇದನ್ನೆಲ್ಲಾ ಓದಿದಾಗ ಅವರೇನು ಮಾಡಿದ್ದಾರೆಂದರೆ, ಪ್ರತಿ ಹಂತದಲ್ಲೂ ಕೂಡ ಡಾರ್ಕ್ ಅಂಡ್ ಗ್ರೇ ಏರಿಯಾದಲ್ಲಿರುವ ಈ ಪಂಪ್ ಸೆಟ್‌ಗಳನ್ನು ಸಕ್ರಮ ಮಾಡಕೂಡದು ಎಂದು ಇದೆ. ಸುಮಾರು 3 ಲಕ್ಷ ಅನಧಿಕೃತವಾಗಿರುವ ಪಂಪ್ ಸೆಟ್‌ಗಳಲ್ಲಿ ನಮ್ಮ ರಾಜ್ಯದಲ್ಲಿರುವ 43 ತಾಲ್ಲೂಕುಗಳು ಡಾರ್ಕ್ ಮತ್ತು ಗ್ರೇ ಎನ್ನತಕ್ಕಂಥಾದ್ದನ್ನು ವಿಂಗಡಿಸಿದ್ದಾರೆ. ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯಿಂದ ಅದು ಡಾರ್ಕ್, ಗ್ರೇ ಎಂದು ಹೇಳಿ ವಿಂಗಡಿಸಿದ್ದಾರೆ ಆ ತಾಲ್ಲೂಕುಗಳಲ್ಲಿರತಕ್ಕಂತಹ ಪಂಪ್ಪುಸೆಟ್ಟುಗಳನ್ನು ಸಕ್ರಮಗೊಳಿಸುವುದಕ್ಕೆ ಸಾಧ್ಯ ಇಲ್ಲ ಎನ್ನತಕ್ಕದ್ದನ್ನು ಕೂಡ ಈ ಯೋಜನೆಯಲ್ಲಿ ಹೇಳಿದ್ದಾರೆ. ಏನು ಮಾಡುತ್ತೀರಿ? ಇದರ ಉದ್ದೇಶ ಏನು ಎಂಬುದಕ್ಕೆ ಕೊನೆಯಲ್ಲಿ ಒಂದು ಪದವನ್ನು ಬಳಸಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

"Action shall be taken to disconnect unauthorised installations which are not regularised after the amended Anti-theft law comes into force with effect from 10.4.2002 and book cases under provisions of Electricity Act as an amendment by the provisions of the Electricity

(Karnataka Amendment) Act, 2000.........

Under the scheme, the public may regularise the unauthorised connections and may become honourable consumers."

ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಬಹಳ ಸುಂದರವಾದಂತಹ ಪದವನ್ನು ಬಳಸಿದ್ದಾರೆ. ಆನರಬಲ್ ಕನ್ಸೂಮರ್ಸ್ ಆಗಬೇಕು ನೀವೆಲ್ಲರೂ ಎಂದು ಹೇಳಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಸುಮಾರು ಒಂದು ಲಕ್ಷ ಡಾರ್ಕ್ ಮತ್ತು ಗ್ರೇ ಏರಿಯಾದಲ್ಲಿರತಕ್ಕ ರೈತರ ಬಗ್ಗೆ ಏನು ಮಾಡುತ್ತೀರಿ? ಏಪ್ರಿಲ್ 10ನೇ ತಾರೀಖು ಆದ ಮೇಲೆ ಅವರನ್ನೆಲ್ಲಾ ಜೈಲಿಗೆ ಕಳುಹಿಸುತ್ತೀರಾ? ಒಬ್ಬರನ್ನು ಜೈಲಿಗೆ ಕಳುಹಿಸಿರಿ ನೋಡೋಣ. It is a challenge I am throwing. ಒಬ್ಬ ರೈತನನ್ನು ಜೈಲಿಗೆ ಕಳುಹಿಸಿರಿ ನೋಡೋಣ. ಡಿಸ್ಕಷನ್ ಮಾಡಲಿ ನೋಡೋಣ. ನೀವು ಏನೆಂದು ತಿಳಿದುಕೊಂಡಿದ್ದೀರಿ? ಇಲ್ಲಿಯವರೆಗೂ ಬದುಕಬೇಕೆಂದು ಆಸೆ ಇಟ್ಟುಕೊಂಡಿರುವವರಿಗೆ ನೀವು ಏನು ಮಾಡುತ್ತಿದ್ದೀರಿ? ಇವತ್ತಿನ ದಿವಸ ಅದು ಡಾರ್ಕ್ ಏರಿಯಾನೋ ಅಥವಾ ಗ್ರೇ ಏರಿಯಾನೋ ಎಂಬುದು ಗೊತ್ತಿಲ್ಲ. ಪಂಪುಸೆಟ್ಟು ಹಾಕಿದ್ದು ಆಗಿದೆ. ಹತ್ತಾರು ವರ್ಷಗಳಿಂದ ಆ ಪಂಪುಸೆಟ್ಟನ್ನು ಬಳಸುತ್ತಿದ್ದಾನೆ. ಅಲ್ಲಿ ಅರ್ಜಿ ಕೊಟ್ಟರೆ ಅವರ ಕೋಟಾ ವರ್ಷಕ್ಕೆ ಇಷ್ಟೇ ಪಂಪುಸೆಟ್ಟಿಗೆ ನಾವು ಸರ್ವೀಸ್ ಮಾಡತಕ್ಕದ್ದು ಎಂದು ಹೇಳುತ್ತಾರೆ. ನಮಗೆ ಸ್ಕೀಮ್ ಇರುವುದು ಇಷ್ಟಕ್ಕೇ ಎಂದು ಹೇಳುತ್ತಾರೆ. ಉಳಿದಿರತಕ್ಕದ್ದು ಎಷ್ಟು? ನಾನು ಆಗಲೇ ಹೇಳಿದೆ. ನೀರು ಸಿಕ್ಕಿದರೆ ಅವನಿಗೆ ಬಂಗಾರದ ಗಣಿ ಸಿಕ್ಕಿದ ಹಾಗೆ. ಅದರ ಪ್ರಯೋಜನ ಪಡೆಯಬೇಕೆಂದು ಹೇಳಿ ಅದು ಕಳ್ಳತನವೋ ಮತ್ತೊಂದೋ ಮಾಡಿ ಬದುಕಬೇಕು ಎಂಬ ಆಸೆಯಿಂದ ಆ ಪಂಪುಸೆಟ್ಟನ್ನು ಹಾಕಿದ್ದಾನೆ. ಅವನನ್ನು ನೀವು ಕಳ್ಳನನ್ನಾಗಿ ಮಾಡಲು ಹೊರಟಿದ್ದೀರಿ. ಒಂದು ಲಕ್ಷ ರೈತರನ್ನು ಇವತ್ತು ಕಳ್ಳರನ್ನಾಗಿ ರಾಜ್ಯದಲ್ಲಿ ಮಾಡಬೇಕೆಂದು ಹೊರಟಿದ್ದೀರಾ? ಅದರಿಂದ ಡಾರ್ಕ್ ಏರಿಯಾನೋ ಅಥವಾ ಗ್ರೇ ಏರಿಯಾನೋ ಗೊತ್ತಿಲ್ಲ. ನೀವು ಯಾವ ರೀತಿ ಎಲ್ಲಾ ಕನ್ಸೂಮರ್ಸನ್ನು ಸಕ್ರಮಗೊಳಿಸುವುದಕ್ಕೆ ಹೊರಟಿದ್ದೀರೋ ಅದೇ ರೀತಿಯಲ್ಲಿ ಈ ಪಂಪುಸೆಟ್ಟುಗಳನ್ನೂ ಸಕ್ರಮಗೊಳಿಸಿ. ಒಂದು ಲಕ್ಷ ರೈತರನ್ನು ಜೈಲಿಗೆ ಕಳುಹಿಸುವುದಕ್ಕೆ ಕರ್ನಾಟಕದಲ್ಲಿ ಅಲ್ಲ ಇಡೀ ದೇಶದಲ್ಲಿನ ಜೈಲನ್ನು ತುಂಬಿದರೂ ಕೂಡ ಸಾಧ್ಯವಾಗುವುದಿಲ್ಲ, ಜಾಗ ಸಾಕಾಗುವುದಿಲ್ಲ. ನೀವು ತಿಳಿದುಕೊಳ್ಳಿ, ಇದನ್ನು ನಾನು ಹೇಳಿದ್ದೇನೆ. ಮತ್ತೆ ಮುಂದೆ ಕೂಡ ಇದನ್ನು ತೆಗೆದು ಹಾಕಬೇಕಾದ ಅವಶ್ಯಕತೆ ಇದೆ. ನೀವು ತೆಗೆದು ಹಾಕಿದರೆ ಈಗಲೇ ಅಂತರ್ಜಲ ಮಟ್ಟ 600, 700 ಅಡಿ ಇಳಿದಿದೆ, ತೊಂದರೆ ಆಗುತ್ತದೆ. ಅದು ವೈಜ್ಞಾನಿಕವಾಗಿ ಇರತಕ್ಕದ್ದು. ನಾನು ಅವೈಜ್ಞಾನಿಕವಾದ ಮಾತನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕೆ ನೀರು ಬಳಕೆ ಮಾಡುವುದಕ್ಕೆ ಈಗ ಹೊಸ ಹೊಸ ವಿಧಾನಗಳು ಬಂದಿದ್ದಾವೆ. ನೀರು ಬಳಕೆ ತಂತ್ರಜ್ಞಾನ ಬಹಳ ಅಭಿವೃದ್ಧಿ ಆಗಿದೆ. ಒಂದು ಕಾಲದಲ್ಲಿ ಸ್ಪ್ರಿಂಕ್ಲರ್ ಅಂದರೆ ಅಲ್ಟ್ರಾ ಲೋ ಸ್ಪ್ರಿಂಕ್ಲರ್ ಇದ್ದುದು ಡ್ರಿಪ್ ಇರಿಗೇಷನ್ ಇರತಕ್ಕದ್ದು ಇವತ್ತು ಫಲ್ಸ್ ಇರಿಗೇಷನ್ ಎನ್ನತಕ್ಕದ್ದು ಜಾರಿಗೆ ಬಂದಿದೆ. ಮನುಷ್ಯನಲ್ಲಿ ನಾಡಿ ಯಾವರೀತಿ

ಮಿಡಿಯುತ್ತದೋ ಅದೇ ರೀತಿ ನಾಡಿ ಮಿಡಿವ ರೂಪದಲ್ಲಿ ನೀರನ್ನು ಗಿಡಗಳಿಗೆ ಕೊಡತಕ್ಕದ್ದು, ನೇರವಾಗಿ ಬೆಳೆಗಳಿಗೆ ಕೊಡತಕ್ಕಂತಹ ತಂತ್ರಜ್ಞಾನ ಕೂಡ ಇವತ್ತಿನ ದಿವಸ ಬಂದಿದೆ. ಇದನ್ನು ಬಳಸುವುದಕ್ಕೆ ರೈತರಿಗೆ ಅವಕಾಶ ಮಾಡಿಕೊಡಿ. ಆ ತಂತ್ರಜ್ಞಾನವನ್ನು ರೈತರಿಗೆ ಪರಿಚಯ ಮಾಡಿಕೊಡತಕ್ಕಂಥ ಕೆಲಸ ಸರ್ಕಾರದಿಂದ ಆಗಬೇಕು. ಹಾಗಾದರೆ ಅದನ್ನು ಬಳಸಿದಂತಹ ರೈತರಿಗೆ ನೀವು ವಿನಾಯಿತಿ ಕೊಡಿ.... ಯಾರು ಡ್ರಿಪ್ ಇರಿಗೇಷನ್ ಅನ್ನು ಮಾಡುತ್ತಾರೆ, ಸ್ಪ್ರಿಂಕ್ಲರ್ ಇರಿಗೇಷನ್ ಮಾಡುತ್ತಾರೆ, ಮುಂದೆ ಬರತಕ್ಕ ಡಾರ್ಕ್ ಏರಿಯಾ ಇರಬಹುದು, ಗ್ರೇ ಏರಿಯಾ ಇರಬಹುದು, ಆ ಏರಿಯಾದಲ್ಲಿ ಯಾರಿಂದಲಾದರೂ ಕೂಡ ಪಂಪುಸೆಟ್ಟಿಗೆ ಬೇಡಿಕೆ ಬಂದಲ್ಲಿ, ನೀವು ಇಂತಹದನ್ನು ಅಳವಡಿಸಿಕೊಳ್ಳಿ, ಆಧುನಿಕವಾದಂತಹ ನೀರಿನ ತಂತ್ರಜ್ಞಾನವನ್ನು ಬಳಸಿಕೊಂಡರೆ ನಾವು ವಿದ್ಯುತ್ತನ್ನು ಕೊಡುತ್ತೇವೆಂಬ ಪದ್ಧತಿಯನ್ನು ಜಾರಿಗೆ ತನ್ನಿ. ಅದನ್ನು ಬಿಟ್ಟು ನೀವು ಸಾರಾಸಗಟಾಗಿ ಇವತ್ತಿನ ದಿವಸ ವಿದ್ಯುತ್ತೇ ಕೊಡುವುದಿಲ್ಲ ಎಂದರೆ ಆ ಭಾಗದಲ್ಲಿರತಕ್ಕ ರೈತರು ಏನು ಮಾಡಬೇಕು? ಈ ವಿದ್ಯುತ್ತಿನ ಕೊರತೆಯಿಂದ ಏನಾಗಿದೆ ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೈಗಾರಿಕಾ ರಂಗದಲ್ಲಿ ನೀವೇನು ಹೇಳುತ್ತಿದ್ದೀರಿ? ನೀವು ವಿಶ್ವ ಕೈಗಾರಿಕಾ ಹೂಡಿಕೆದಾರರ ಸಮಾವೇಶ ಮಾಡಿದಿರಿ. ಐಟಿ ಡಾಟ್ ಕಾಂ ಆಯಿತು, ಈಗ ಬಿಟಿ ಡಾಟ್ ಕಾಂ, ಐಟಿ ಡಾಟ್ ಕಾಂ, ಬಿಟಿ ಡಾಟ್ ಕಾಂ ಇವೆಲ್ಲಾ ಆಯಿತು. ಎಷ್ಟು ಜನಕ್ಕೆ ಉದ್ಯೋಗ ಸಿಗುತ್ತಿದೆ? ಇಷ್ಟೆಲ್ಲಾ ಮಾಡಿದರೂ ಕೂಡ ಇವತ್ತು ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಮೊದಲನೇ ಐದನೇ ಸ್ಥಾನದಲ್ಲಿ ಹೂಡಿಕೆಯಲ್ಲಿ ಇಲ್ಲ. ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮತ್ತು ಆಂಧ್ರಪ್ರದೇಶ ಹೀಗೆ ಹೂಡಿಕೆದಾರರ ಪಟ್ಟಿಯಲ್ಲಿ ಕರ್ನಾಟಕ ಹೆಸರು ಪತ್ತೆ ಇಲ್ಲ. ಮಹಾರಾಷ್ಟ್ರದಲ್ಲಿರತಕ್ಕ ಒಂದು ಸಂಸ್ಥೆಯಾದ ಮಹಾರಾಷ್ಟ್ರ ಎಕನಾಮಿಕ್ ಡೆವಲಪ್‌ಮೆಂಟ್ ಕೌನ್ಸಿಲ್, ಒಂದು ಸಮೀಕ್ಷೆಯನ್ನು ನಡೆಸಿದ್ದಾರೆ. ಆ ಸಮೀಕ್ಷೆ ಏನು ಹೇಳುತ್ತದೆ ಎಂದರೆ ಮೊದಲನೇ ನಾಲ್ಕು, ಐದು ಸ್ಥಾನದಲ್ಲಿ ಕರ್ನಾಟಕ ಇಲ್ಲ, ಮುಖ್ಯ ಕಾರಣ ಏನು ಎಂದರೆ ವಿದ್ಯುತ್ತಿನ ಅಭಾವ ಇಲ್ಲಿ ಎದ್ದು ಕಾಣುತ್ತಿದೆ. ಒಂದು ಕಡೆ ಕೈಗಾರಿಕಾ ರಂಗದಲ್ಲೂ ಉದ್ಯೋಗ ಸಿಗುತ್ತಿಲ್ಲ. ಮತ್ತೊಂದು ಕಡೆ ವ್ಯವಸಾಯವಾದರೂ ಮಾಡಿ ಜೀವನ ಮಾಡೋಣ ಎಂದರೆ, ಪ್ರಯತ್ನ ಪಡೋಣ ಎಂದರೆ ವ್ಯವಸಾಯಕ್ಕೆ ವಿದ್ಯುತ್ ಕೊಡುವುದಕ್ಕೆ ಸಾಧ್ಯ ಇಲ್ಲ. ಮತ್ತೆ ಹಳ್ಳಿಯಲ್ಲಿ ಹುಟ್ಟಿ ಬೆಳೆದಿರತಕ್ಕಂತಹ ಯುವಕರು ಏನಾಗಬೇಕು? ವ್ಯವಸಾಯಗಾರರಾಗಿ ಬದುಕಿರತಕ್ಕವರ ಗತಿ ಏನಾಗಬೇಕು? ಅಲ್ಲೂ ಉದ್ಯೋಗ ಇಲ್ಲ, ಇಲ್ಲೂ ಉದ್ಯೋಗ ಇಲ್ಲ. ವ್ಯವಸಾಯ ರಂಗದಲ್ಲಾದರೂ ಬದುಕೋಣ ಎಂದರೆ ಅದಕ್ಕೆ ವಿದ್ಯುತ್ ಇಲ್ಲ. ಮುಂದೆ ಏನಾಗಬೇಕು? ನೀವು ಯಾವ ರೀತಿ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೀರಿ? ಆ ಸೃಷ್ಟಿ ಮಾಡತಕ್ಕ ದೃಷ್ಟಿಯಿಂದ ಆಧುನಿಕ ತಂತ್ರಜ್ಞಾನವನ್ನು ಬಳಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ತಂತ್ರಜ್ಞಾನದ ಬಗ್ಗೆ ಹೇಳುತ್ತಾರೆ. ನಾನು ಒಪ್ಪುತ್ತೇನೆ. ತಂತ್ರಜ್ಞಾನ ಬಳಕೆ ಆಗಬೇಕಾದಂತಹ ಅವಶ್ಯಕತೆ ಕೂಡ ಇದೆ. ಅದು ಒಂದರಲ್ಲಿ ಮಾತ್ರವಲ್ಲ. ಸಾಫ್ಟ್‌ವೇರ್‌ನಲ್ಲೋ, ಐಟಿ ಡಾಟ್ ಕಾಂನಲ್ಲೋ ತಂತ್ರಜ್ಞಾನ ಬಳಕೆ ಆಗಬೇಕು ಎಂದಲ್ಲ. ಅದು ಎಲ್ಲಾ ರಂಗದಲ್ಲೂ ಆಗಬೇಕು.

ಮುಖ್ಯವಾಗಿ ಕೃಷಿ ರಂಗದಲ್ಲಿ ಕೂಡ ತಂತ್ರಜ್ಞಾನದ ಬಳಕೆ ಆಗಬೇಕಾಗಿದೆ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಬಳಕೆ ಆಗಬೇಕು. ಇವತ್ತು ನೀರಿನ ಅವಶ್ಯಕತೆ ಇದೆ. ವಿದ್ಯುತ್ ಅಭಾವದಿಂದ ರೈತರಿಗೆ ಸರಿಯಾದಂತಹ ರೀತಿಯಲ್ಲಿ ವಿದ್ಯುತ್ ಕೊಡಲು ಸಾಧ್ಯ ಇಲ್ಲ. ಅಲ್ಲಿ ಇವತ್ತು ತಂತ್ರಜ್ಞಾನ ಬಳಕೆ ಆಗಬೇಕಾದಂತಹ ಅವಶ್ಯಕತೆ ಇದೆ. ಅಂತಹ ಯಾರು ಬಳಕೆ ಮಾಡಿಕೊಳ್ಳುತ್ತಾರೋ ಅವರಿಗಾದರೂ ಕೂಡ ನೀವು ಆದ್ಯತೆ ಕೊಡಿ. ಆದ್ಯತೆ ಕೊಟ್ಟು ಡಾರ್ಕ್ ಏರಿಯಾ, ಗ್ರೇ ಏರಿಯಾ ಎಂದು ಮೊದಲು ನೀವು ತೆಗೆಯಬೇಕಾದ ಅವಶ್ಯಕತೆ ಇದೆ. ನೀರೂ ಉಳಿಯುತ್ತದೆ. ವಿದ್ಯುತ್ ಕೂಡ ಉಳಿಯುತ್ತದೆ. ಈ ರೀತಿಯಾದಂತಹ ಕ್ರಮಗಳನ್ನು ಅಂದರೆ ಪ್ರೋಗ್ರೆಸೀವ್ ಆಗಿರತಕ್ಕಂತಹ ಕ್ರಮಗಳನ್ನು ತಾವು ತೆಗೆದುಕೊಳ್ಳಬೇಕೇ ವಿನಹ ಒಂದೇ ಸಾರಿ ನೀವು ಡಿಕ್ಟಟೋರಿಯಲ್ ಆಗಿ ಏನು ಮಾಡುವುದಕ್ಕೆ ಹೊರಟಿದ್ದೀರಿ, ಈ ಡಿಕ್ಟೇಟರ್‌ಷಿಪ್ ರೈತರ ಹತ್ತಿರ ನಡೆಯುವುದಿಲ್ಲ. ಇದನ್ನು ದಯವಿಟ್ಟು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ನಿಮ್ಮ ಈ ಆಜ್ಞೆ ಸರಿಯಲ್ಲ. This is not even a piece of paper. ರೈತರು ಇದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈಗಾಗಲೇ ನಡೆಯುತ್ತಿದೆ. ಅಜ್ಜಂಪುರದಲ್ಲಿ ಒಬ್ಬ ಮಹಿಳೆಗೆ ಬಟ್ಟೆ ಬಿಚ್ಚಿಸಿದ್ದು ಅಪಮಾನ. ಅದು ಆಗಬಾರದು, ನಾನು ಅದನ್ನೆಲ್ಲಾ ಬಯಸುವುದಿಲ್ಲ. ಅದನ್ನು ಒಪ್ಪತಕ್ಕವನೂ ಅಲ್ಲ. ಆ ರೀತಿಯಾದಂತಹ ಪರಿಸ್ಥಿತಿಗೆ ರೈತರನ್ನು ನೀವು ದೂಡುತ್ತಿದ್ದೀರಿ. ಪ್ರತಿ ಹಳ್ಳಿಯೂ ಅಜ್ಜಂಪುರ ಆಗುತ್ತದೆ. ನೀವು ಈ ರೀತಿಯಾಗಿ ಏನಾದರೂ ಡಿಸ್ಕನೆಕ್ಷನ್ ಎಂದು ಮಾಡಿ ಡಾರ್ಕ್ ಏರಿಯಾ, ಗ್ರೇ ಏರಿಯಾ ಎಂದು ಕ್ರೈಟೀರಿಯಾ ಇಟ್ಟುಕೊಂಡು ನೀವು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆ ಎಂದು ಮುಂದಾದರೆ ಪ್ರತಿ ಹಳ್ಳಿ ಕೂಡ ಅಜ್ಜಂಪುರ ಆಗುತ್ತದೆ. ಇದಕ್ಕೆ ನೀವು ದಯಮಾಡಿ ಅವಕಾಶ ಮಾಡಿಕೊಡಬೇಡಿ. ಇದನ್ನು ಮೊದಲು ತತ್‌ಕ್ಷಣದಿಂದಲೇ ವಾಪಸ್ ಪಡೆದು ಎಲ್ಲಾ ಇರತಕ್ಕ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಿ. ನಿಮಗೆ ಹಣ ಕೂಡ ಬರುತ್ತದೆ. ಯಾವ ರೀತಿ ನೀವು ಬೇರೆ ಪ್ರದೇಶದಲ್ಲಿ ಅಕ್ರಮ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸುತ್ತಿದ್ದೀರೋ ಅದೇ ರೀತಿಯಲ್ಲಿ ಈ ಪ್ರದೇಶದಲ್ಲಿರತಕ್ಕ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸುವುದಕ್ಕೆ ಮುಂದಾಗಿ. ಮುಂದೆ ಕೂಡ ಡಾರ್ಕ್ ಏರಿಯಾ, ಗ್ರೇ ಏರಿಯಾ ಎಂದೇನಿದೆ, ಇದನ್ನು ನೀವು ಬಿಡಿ. ಈ ಹೊಸ ತಂತ್ರಜ್ಞಾನವನ್ನು ನೀರಿನ ಬಳಕೆಯಲ್ಲಿ ಅಳವಡಿಕೆ ಮಾಡಿಸುವುದರ ಮೂಲಕ ಅಲ್ಲೂ ಕೂಡ ಡಿಸ್ಕ್ರಿಮಿನೇಷನ್ ಏನು ಇದೆ, ರಿಸ್ಟ್ರಿಕ್ಷನ್ಸ್ ಏನು ಇದೆ, ಇದನ್ನು ತೆಗೆಯಬೇಕಾಗಿರತಕ್ಕ ಅವಶ್ಯಕತೆ ಇದೆ ಎನ್ನತಕ್ಕದ್ದನ್ನು ನಾನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಅಲ್ಲಿ ಅಕ್ರಮ ಸಕ್ರಮ ಹೇಗಾಗುತ್ತದೆ ಎಂದು ಹೇಳಿದರೆ, ಈಗಾಗಲೇ ಬೋರ್‌ವೆಲ್‌ಗಳು ಇವೆ. ಈಗಾಗಲೇ ಮೂರು ಹಾರ್ಸ್ ಪವರ್‌ನ ಪಂಪುಗಳನ್ನು ಅಳವಡಿಸಿದ್ದಾರೆ. ಈಗ ಅಲ್ಲಿ ಜಾಸ್ತಿ ಯೀಲ್ಡ್ ಇದೆ ಎಂದು ಹೇಳುವುದಕ್ಕೆ ಬೇಕಾಗಿಯೇ ಮೂರು ಇದ್ದುದ್ದನ್ನು ಐದು ಮಾಡುತ್ತಾರೆ, ಐದು ಇದ್ದುದ್ದನ್ನು ಏಳೂವರೆ ಮಾಡುತ್ತಾರೆ. ಈ ರೀತಿ ಮಾಡಿದ್ದನ್ನು ಕೂಡ ಸಕ್ರಮ ಮಾಡಬೇಕು. ಈಗ ಅಲ್ಲಿ ಹಿಂದೆ ಕನೆಕ್ಷನ್ಸ್ ಇಲ್ಲದೇ ಇದ್ದರೂ

ಸರಿ ಇನ್-ಟೋಟಲ್ ಆದರೆ ಅದನ್ನೂ ಕೂಡ ಮಾಡಬೇಕು. ಅದರಲ್ಲಿ ಏನೂ ತಪ್ಪಿಲ್ಲ. ಆದರೆ ಹಿಂದೆ ಇದ್ದುದ್ದನ್ನು ಕೂಡ ನೀವು ಎನ್‌ಹ್ಯಾನ್ಸ್ ಮಾಡಬಾರದು ಎಂದು ಹೇಳುವಂತಹ ರೀತಿಯಲ್ಲಿ ಒಂದು ಹೆರಾಸ್‌ಮೆಂಟ್ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಸ್ವಲ್ಪ ಹೆಚ್ಚು ಗಮನ ಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಸಿ.ಭೈರೇಗೌಡ: ಮೊದಲು ಕೊಳವೆ ಬಾವಿಯಲ್ಲಿ 100, 150 ಅಡಿಗಳಿಗೆ ನೀರು ಸಿಗುತ್ತಿತ್ತು. ಈಗ 600, 800 ಅಡಿ ಸಾಮಾನ್ಯ ಆಗುತ್ತಿದೆ. ಮೊದಲು 5 ಅಡಿ ಹೆಚ್‌ಪಿ ಹಾಕಿದರೆ ಅದೇ ದೊಡ್ಡದು ಆಗುತ್ತಿತ್ತು. ಇವತ್ತು 5 ಹೆಚ್‌ಪಿ, 10 ಹೆಚ್‌ಪಿ ಸಾಕಾಗುತ್ತಲೇ ಇಲ್ಲ. ಕೆಲವು ಕಡೆ 10, 15 ಹೆಚ್‌ಪಿ ಪಂಪುಸೆಟ್ಟು ಹಾಕಿ ರೈತರು ಕೊಳವೆ ಬಾವಿ ಉಪಯೋಗಿಸುತ್ತಿದ್ದಾರೆ. ಈಗ ತಾವು 10 ಹೆಚ್‌ಪಿಯವರೆಗೆ ಏನು ವಿನಾಯಿತಿ ಕೊಡುತ್ತಿದ್ದೀರಿ, ಇದನ್ನು ಕನಿಷ್ಟ 15 ಹೆಚ್‌ಪಿವರೆಗಾದರೂ ವಿನಾಯಿತಿಯನ್ನು ಕೊಡಬೇಕಾಗುತ್ತದೆ. ಮತ್ತೆ ರೈತರಿಗೆ ವಿದ್ಯುತ್ ಛಾರ್ಜನ್ನು ವಿಧಿಸುವಾಗಲೂ ಕೂಡ ಪುಕ್ಕಟೆಯಾಗಿ ಕೊಡಿ ಎಂದು ನಾನು ಹೇಳುವವನಲ್ಲ. ಪುಕ್ಕಟೆಯಾಗಿ ಕೊಡಕೂಡದು, ಪುಕ್ಕಟೆಯಾಗಿ ಕೊಡಬೇಡಿ. ನಾನು ಕೃಷಿ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ರಾಜ್ಯದ ನಾನಾ ಭಾಗಗಳಲ್ಲಿ ಸಂಚರಿಸುವಾಗ ಉಚಿತವಾಗಿ ವಿದ್ಯುತ್ ಬೇಕೇ ಎಂದು ರೈತಾಪಿ ವರ್ಗದವರನ್ನು ಕೇಳಿದಾಗ ತಮಗೆ ಉಚಿತವಾಗಿ ವಿದ್ಯುತ್ ಒದಗಿಸುವುದು ಬೇಡವೆಂದೂ, ಉತ್ತಮ ಗುಣಮಟ್ಟದ ವಿದ್ಯುತ್ ಸೌಲಭ್ಯ ಪೂರೈಸಿ ದರ ವಿಧಿಸಿ ಎಂದು ಕೇಳಿದ್ದಾರೆ. ಇವೊತ್ತು ಅದೇ ಮಾತನ್ನು ಇಲ್ಲಿಯೂ ನಾನು ಹೇಳಬಯಸುತ್ತೇನೆ. ಪುಕ್ಕಟ್ಟೆಯಾಗಿ ರೈತರಿಗೆ ವಿದ್ಯುತ್ ಕೊಡಬೇಡಿ, ಕೊಡಬಾರದೆಂದು ನಾನು ಒತ್ತಿ ಹೇಳಬಯಸುತ್ತೇನೆ. ಆದರೆ, ನೀವು ದರ ವಿಧಿಸುವಂಥ ಹಂತದಲ್ಲಿ ಆತ ಎಷ್ಟು ಪ್ರಮಾಣದಲ್ಲಿ ಯಾವ ಬೆಳೆ ಬೆಳೆಯುತ್ತಾನೆ, ಆದರಿಂದ ಎಷ್ಟು ಆದಾಯ ಬರುತ್ತದೋ ಅದಕ್ಕನುಗುಣವಾಗಿ ವಿದ್ಯುತ್ ದರ ವಿಧಿಸಬೇಕೇ ವಿನಃ ಕಣ್ಣು ಮುಚ್ಚಿಕೊಂಡು ಎಲ್ಲರಿಗೂ ಒಂದೇ ರೀತಿಯ ದರ ನಿಗದಿಪಡಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಮತ್ತು ಯದ್ವಾತದ್ವಾ ದರ ಏರಿಸಿದರೂ ತಾವು ವಿಫಲರಾಗುತ್ತೀರಿ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ವಿಂಗಡಿಸಿರುವುದನ್ನು ತಕ್ಷಣದಿಂದ ತೆಗೆದುಹಾಕಿ ಎಲ್ಲಾ ಪ್ರದೇಶದಲ್ಲಿರುವ ಪಂಪ್‌ಸೆಟ್ಟುಗಳನ್ನು ಸಕ್ರಮಗೊಳಿಸಲು ಮುಂದಾಗಬೇಕು. ಏಕೆಂದರೆ, ಇವೊತ್ತು ರೈತರು ಬದುಕಬೇಕು. ರೈತರ ಮಕ್ಕಳಿಗೆ ಉದ್ಯೋಗ ಎಲ್ಲಿಯೂ ಇಲ್ಲ, ಅವರು ಎಲ್ಲಿಗೆ ಹೋಗಬೇಕು? ಅವರು ಬೀದಿ ಭಿಕಾರಿಗಳಾಗಲು ತಾವು ಅವಕಾಶ ಕೊಡಬಾರದು. ಕೃಷಿಯಲ್ಲಿ ರೈತರ ಮಕ್ಕಳು ನ್ಯಾಯಯುತವಾದ ಜೀವನ ನಡೆಸಲು ಅವಕಾಶಗಳಿರಬೇಕಾಗುತ್ತದೆ. ಕೃಷಿಕನಿಗೆ ಕೃಷಿಯಲ್ಲದೆ ಬೇರೆ ಕಸುಬು ಗೊತ್ತಿಲ್ಲ. ಉದಾಹರಣೆಗೆ, ನನಗೆ ಕೃಷಿ ಹೊರತುಪಡಿಸಿ ಬೇರೆ ಕಸುಬು ಮಾಡಬೇಕೆಂದು ಹೇಳಿದರೆ ನನಗೆ ಸಾಧ್ಯವಾಗುವುದಿಲ್ಲ. ಅದೇ ತರಹ ನನ್ನ ಮಕ್ಕಳಿಗೂ ಬೇರೆ ಕಸುಬು ಮಾಡಲು ಸಾಧ್ಯವಿಲ್ಲ, ಅವರು ಭೂಮಿಯನ್ನೇ ನಂಬಿರುವವರು. ಅವರು ಎಲ್ಲಿ ಹೋಗಬೇಕು? ರೈತರ

ಎಲ್ಲಾ ಜಮೀನಿಗೂ ನಾಲೆ ಮುಖಾಂತರ ನೀರನ್ನು ಕೊಡಿಸುವುದಾದರೆ ಪಂಪ್‌ಸೆಟ್ಟುಗಳ ಅಗತ್ಯವೇ ಇರುವುದಿಲ್ಲ. ಆದರೆ, ಇಲ್ಲಿ ಶೇಕಡ 70-80ರಷ್ಟು ಭೂಮಿ ಮಳೆಯಾಧಾರಿತವಾಗಿರುವುದರಿಂದ ವ್ಯವಸಾಯ ಮಾಡಲು ಕೊಳವೆ ಬಾವಿಯೇ ಪ್ರಮುಖ ಆಧಾರವಾಗಿದೆ. ಆ ಕಾರಣದಿಂದ ಡಾರ್ಕ್ ಮತ್ತು ಗ್ರೇ ಏರಿಯಾ ಎಂಬುದನ್ನು ತೆಗೆದುಹಾಕಬೇಕೆಂದು ನಾನು ಪ್ರಬಲವಾಗಿ ಒತ್ತಾಯಿಸುತ್ತಾ ಸರ್ಕಾರ ಇದಕ್ಕೆ ಅನುಕೂಲಕರವಾಗಿ ಪ್ರತಿಕ್ರಿಯಿಸಬೇಕೆಂಬ ಮನವಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಿ ಇಷ್ಟು ಮಾತನಾಡಲು ಅವಕಾಶ ನೀಡಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ.ಚನ್ನಿಗಪ್ಪ(ಕೊರಟಗೆರೆ): ಸನ್ಮಾನ್ಯ ಉಪಾಧ್ಯಕ್ಷರೆ, ಈ ಬಗ್ಗೆ ನಿಲುವಳಿ ಸೂಚನೆ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದಿಸುತ್ತಾ, ಈ ಗಂಭೀರವಾದ ವಿಚಾರ ಕುರಿತಂತೆ ಈಗಾಗಲೇ ನಮ್ಮ ನಾಯಕರು ಪ್ರಸ್ತಾಪಿಸಿದ್ದಾರೆ. ಅದರಲ್ಲೂ ರಾಜ್ಯದ ಕುಡಿಯುವ ನೀರಿನ ಸಮಸ್ಯೆ ಬರಗಾಲ, ವಿದ್ಯುಚ್ಛಕ್ತಿ ಸಮಸ್ಯೆ ಬಗ್ಗೆ ಅನೇಕ ಜನರು ಸರ್ಕಾರದ ಗಮನ ಸೆಳೆದು ತಮ್ಮದೇ ಆದ ವಿಚಾರಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ವಿಷಯ ಹೇಳಬಯಸುವುದೇನೆಂದರೆ, ಇವೊತ್ತು ಕರ್ನಾಟಕ ಸರ್ಕಾರ ತನ್ನ ಎರಡನೆಯ ಆಯವ್ಯಯ ಪತ್ರದಲ್ಲಿ ಕೂಡ ಹಳ್ಳಿಗಾಡಿನ ರೈತರಿಗೆ ಸುಮಾರು ಹತ್ತು ಗಂಟೆಗಳ ಕಾಲ ತಡೆಯಿಲ್ಲದಂತೆ ವಿದ್ಯುತ್ ಸೌಕರ್ಯ ಕಲ್ಪಿಸಿ ಅನುಕೂಲ ಮಾಡಿಕೊಡುವುದಾಗಿ ಹೇಳಿತ್ತು. ಅದೇ ರೀತಿ ಬರಗಾಲದ ಅಂಚಿಗೆ ಸಿಲುಕಿರುವ ರಾಜ್ಯದ ರೈತರಿಗೆ ನೆರವಾಗುವ ದಿಸೆಯಲ್ಲಿ ಬರಗಾಲದ ಕಾಮಗಾರಿ ಕೈಗೊಳ್ಳುವುದಾಗಿ ತಿಳಿಸಿ ಅನೇಕ ಕಾಮಗಾರಿಗಳನ್ನು ಪ್ರಾರಂಭಿಸಲಾಗಿತ್ತು. ಆದರೆ, ಕೈಗೆತ್ತಿಕೊಂಡ ಕಾಮಗಾರಿಯನ್ನು ಅರ್ಧ ಭಾಗ ಮುಗಿಸಿ ಇನ್ನರ್ಧ ಭಾಗ ನಿಂತು ಹೋದ ಪರಿಣಾಮವಾಗಿ ಕಾಮಗಾರಿಯನ್ನು ಪೂರೈಸಿದ ಗುತ್ತಿಗೆದಾರರಿಗೆ ಒಂದು ಪೈಸೆಯಷ್ಟೂ ಹಣ ಸಂದಾಯವಾಗಿಲ್ಲ. ಅದೇ ರೀತಿ ರಾಜ್ಯದ ಎಲ್ಲಾ ಮೂಲೆಗಳಲ್ಲಿ, ಎಲ್ಲಾ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಅಭಾವ ಸಾಕಷ್ಟಿದ್ದು, ಜೊತೆಗೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬೀದರ್, ಬಳ್ಳಾರಿ, ಗುಲ್ಬರ್ಗ, ರಾಯಚೂರು, ಧಾರವಾಡ, ಹುಬ್ಬಳ್ಳಿ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಕೊಳವೆ ಬಾವಿಗಳ ಮೂಲಕ ನೀರು ತೆಗೆದುಕೊಳ್ಳಲು ಎರಡು ಗಂಟೆಯಷ್ಟೂ ವಿದ್ಯುತ್ ಸರಿಯಾಗಿ ಪೂರೈಕೆಯಾಗುವುದಿಲ್ಲ. ಇದರಿಂದಾಗಿ ಹಳ್ಳಿಗಾಡಿನಲ್ಲಿ ನೀರಿನ ಬರ ಬಂದಿದೆಯೆಂದು ಹೇಳಬಯಸುತ್ತೇನೆ. ಪರಿಣಾಮ ದನ-ಕರುಗಳಿಗೆ ನೀರು, ಜೊತೆಗೆ ಮೇವು ಇಲ್ಲದೆ ಅನೇಕ ದನ-ಕರುಗಳು ಸಾಯುವ ಸಂಭವವಿದೆ. ರೈತರೂ ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ, ಕುಡಿಯುವ ನೀರಿನ ಅಭಾವ, ಬರಗಾಲ ಮತ್ತು ವಿದ್ಯುಚ್ಛಕ್ತಿ ಪೂರೈಕೆ ಸಹ ಸರಿಯಾಗಿ ಸಕಾಲದಲ್ಲಿ ಆಗುತ್ತಿಲ್ಲವಾದ ಕಾರಣ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ. ಬಡತನಕ್ಕೆ ಸಿಲುಕಿದ ಅನೇಕ ರೈತರು ತಮ್ಮ ಪ್ರಾಣ ತೆರುತ್ತಿದ್ದಾರೆ. ಆದರೆ, ನಾನು ಸರ್ಕಾರದ ಗಮನ ಸೆಳೆಯಬಯಸುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದ ಅನೇಕ

ಭಾಗಗಳಲ್ಲಿ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ರೈತಾಪಿ ವರ್ಗದ ಸಮಸ್ಯೆಗಳು ಅವರ ಅರಿವಿಗೆ ಬಂದಿದೆ. ಕೆಲವು ತಾಲ್ಲೂಕುಗಳಲ್ಲಿ 15-20 ದಿವಸಗಳಾದರೂ ಕುಡಿಯುವ ನೀರು ಸಿಗುವುದಿಲ್ಲ. ಇಂತಹ ಭೀಕರ ಬರ ಪರಿಸ್ಥಿತಿಯಿರುವಾಗ ಸರ್ಕಾರ ಕೂಡಲೇ ಅಂತಹ ಭಾಗಗಳಲ್ಲಿ ಕೊಳವೆ ಬಾವಿ ಕೊರೆಸುವ ವಿಚಾರವಾಗಬಹುದು, ಅಥವಾ ವಿದ್ಯುಚ್ಛಕ್ತಿ ಸೌಲಭ್ಯ ಕಲ್ಪಿಸುವ ವಿಚಾರವಾಗಬಹುದು ಇದರ ಬಗ್ಗೆ ಕೂಡಲೇ ಗಮನ ಹರಿಸಿ ಅಗತ್ಯವಾದ ಕೆಲಸ ಮಾಡಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ವರ್ಷ ಬರ ಪರಿಹಾರದ ನಿಮಿತ್ತ ಅನೇಕ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳ ಮುಖಾಂತರ ಆಯಾ ತಾಲ್ಲೂಕಿನ ಹೆಡ್‌ಕ್ವಾರ್ಟರ್ಸ್‌ಗೆ ಕೊಟ್ಟರು. ಜಿಲ್ಲಾಧಿಕಾರಿಗಳು ಈ ಬಗ್ಗೆ ಒಂದು ಓ.ಎಂ. ಇಶ್ಯೂ ಮಾಡಿ ಕೆಲಸ ಮಾಡಿಸಬೇಕೆಂದಾಗ ಅರ್ಧ ಕಾಮಗಾರಿಯನ್ನು ಮುಗಿಸಿದ ಗುತ್ತಿಗೆದಾರರಿಗೆ ಬಾಕಿ ಹಣ ಪಾವತಿ ಮಾಡದಿರುವುದರಿಂದ ಅನೇಕ ಗುತ್ತಿಗೆದಾರರು ಸಾಯುವಂಥ ಪರಿಸ್ಥಿತಿ ಬಂದಿದ್ದು, ತಾಲ್ಲೂಕು ಕಚೇರಿ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿ ಮುಂದೆ ಸುತ್ತುವಂಥ ಪರಿಸ್ಥಿತಿ ಬಂದಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ರಾಜ್ಯದ ಎಲ್ಲಾ ಮೂಲೆಗಳಲ್ಲಿ ಅರ್ಧಕ್ಕೆ ನಿಂತಿರುವ ಬರ ಪರಿಹಾರ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಂಡು ಮುಗಿಸಿ ಗುತ್ತಿಗೆದಾರರಿಗೆ ಪಾವತಿಸಬೇಕಾಗಿರುವ ಬಾಕಿ ಹಣವನ್ನು ಸಂದಾಯ ಮಾಡಲು ಸರ್ಕಾರ ಮುಂದಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯದ 27 ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಭಾರಿ ಹದಗೆಟ್ಟಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ದಾಬಸ್‌ಪೇಟೆಯಲ್ಲಿ ವಿದ್ಯುಚ್ಛಕ್ತಿ ಸಮಸ್ಯೆ ಕುರಿತಂತೆ ಅನೇಕ ರೈತರು ಸ್ಟ್ರೈಕ್ ಮಾಡುತ್ತಿದ್ದು, ನೀವು ಸ್ಟ್ರೈಕ್ ಮಾಡಬಾರದು, ನಾವು ಬಂದು ನಿಮ್ಮೊಂದಿಗೆ ಮಾತನಾಡುತ್ತೇವೆಂದಾಗ ಸ್ಥಳಕ್ಕೆ ಎಂಎಲ್‌ಎ ಬಂದರೆ ಬೆಂಕಿಯಿಟ್ಟು ಸುಟ್ಟು ಬಿಡುವುದಾಗಿ ಹೇಳುತ್ತಾರೆ. ಆದುದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವೂ ಸಹ ಹಳ್ಳಿಗಾಡಿನಿಂದ ಬಂದವರಾಗಿದ್ದು ತಮಗೂ ರೈತರ ಸಮಸ್ಯೆಗಳು ಏನೆಂದು ಗೊತ್ತಿರುವುದರಿಂದ ಹಾಗೂ ಕಳೆದ ಎರಡೂವರೆ ವರ್ಷಗಳಲ್ಲಿ ರಾಜ್ಯದಲ್ಲಿ ಉತ್ತಮವಾಗಿ ಕೆಲಸ ಮಾಡಿದ್ದು ಆಡಳಿತ ಯಂತ್ರವನ್ನು ಆಧುನಿಕವಾಗಿ ನಡೆಸಿರುವುದಕ್ಕೆ ಅಭಿನಂದಿಸಿ ಈ ಮೂಲಕ ನನ್ನ ಸಂತೋಷ ವ್ಯಕ್ತಪಡಿಸುತ್ತೇನೆ. ಇವೊತ್ತು ಕುಡಿಯುವ ನೀರು, ವಿದ್ಯುಚ್ಛಕ್ತಿ ಹಾಗೂ ಬರ ಪರಿಹಾರಕ್ಕೆಂದು, ದನ-ಕರುಗಳಿಗೆ ಒದಗಿಸುವ ಮೇವಿನ ವಿಚಾರವಾಗಬಹುದು, ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಬೋರ್‌ವೆಲ್ ಕೊರೆಸಲು ಹಣ ಒದಗಿಸಬೇಕೆಂದು ಜಿಲ್ಲಾಧಿಕಾರಿಗಳನ್ನು ಕೇಳಿದರೆ ಸರ್ಕಾರದಿಂದ ಹಣ ಬಂದಿಲ್ಲವಾದ್ದರಿಂದ ಒದಗಿಸುವುದಕ್ಕಾಗುವುದಿಲ್ಲವೆನ್ನುತ್ತಾರೆ. ಆದುದರಿಂದ, ಈ ನಿಟ್ಟಿನಲ್ಲಿ ಆಯಾ ತಾಲ್ಲೂಕಿನ ಶಾಸಕರುಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ಕುಡಿಯುವ ನೀರಿನ ಅಭಾವ ನೀಗಿಸಲು ತಾಲ್ಲೂಕು ಕೇಂದ್ರಗಳಿಗೆ 20 ಲಕ್ಷ, 50 ಲಕ್ಷ, 75 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಆಜ್ಞೆ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ವಿಚಾರವಾಗಿ

ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ಈಗಾಗಲೇ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿರುವುದರಿಂದ ಹಾಗೂ ಮತ್ತೊಬ್ಬ ಸದಸ್ಯರಾದ ಮಾನ್ಯ ಸದಾನಂದಗೌಡರು ಡಾರ್ಕ್ ಮತ್ತು ಗ್ರೇ ಏರಿಯಾ ಬಗ್ಗೆ ತಿಳಿಸಿರುವುದರಿಂದ ಅವರ ತಾಲ್ಲೂಕಿನ ಭಾಗದಲ್ಲಲ್ಲದೆ ನಮ್ಮ ತಾಲ್ಲೂಕಿನ ಬಹು ಭಾಗದಲ್ಲಿ ಮಧುಗಿರಿ ತಾಲ್ಲೂಕಿನಲ್ಲಿ ಹಾಗೂ ಕೋಲಾರ ಜಿಲ್ಲೆಯ ಡಾರ್ಕ್ ಮತ್ತು ಗ್ರೇ ಏರಿಯಾದಲ್ಲೂ ನೀರು ಬಂದಿದೆ. ರೈತರು ಬಾವಿ ಕೊರೆಸಿ ಸರ್ಕಾರ ವಿದ್ಯುಚ್ಛಕ್ತಿ ಸೌಕರ್ಯ ಕಲ್ಪಿಸಿಕೊಡದಿದ್ದರೂ ಪಂಪುಸೆಟ್ಟುಗಳಿಗೆ ಮೋಟಾರುಗಳನ್ನು ಅಳವಡಿಸಿಕೊಂಡು ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡು 10-20-30 ಎಕರೆ ಪ್ರದೇಶದಲ್ಲಿ ಕಬ್ಬು ಮುಂತಾದ ಬೆಳೆ ಬೆಳೆಯುತ್ತಿದ್ದಾರೆ. ಇಂತಹುವನ್ನು ಸಕ್ರಮೀಕರಣಗೊಳಿಸಲು ಮಾನ್ಯ ಮುಖ್ಯಮಂತ್ರಿಗಳು ಹೊರಟಿರುವುದಕ್ಕೆ ನಮ್ಮ ಆಭ್ಯಂತರವೇನೂ ಇಲ್ಲ. ಸಕ್ರಮಗೊಳಿಸುವ ಮೂಲಕ ಇಲಾಖೆಗೆ ಹಣ ಬರಬೇಕು. ಇಲ್ಲದಿದ್ದರೆ ಇಲಾಖೆಯನ್ನು ನಡೆಸುವುದಕ್ಕಾಗುವುದಿಲ್ಲ. ಈ ಹಿಂದೆ ಒಂದು ಹೆಚ್‌ಪಿಗೆ ಮುನ್ನೂರು ರೂಪಾಯಿಗಳನ್ನು ಸರ್ಕಾರ ವಿಧಿಸಿದ್ದು, ಅದನ್ನೇ ಮುಂದುವರೆಸುವಂತಾಗಬೇಕು. ಇಲ್ಲವೆಂದರೆ ರಾಜ್ಯದ ರೈತರ ಕ್ಷೇಮಾಭಿವೃದ್ಧಿಗೋಸ್ಕರ ಸರ್ಕಾರ ಹೆಚ್ಚು ಹಣ ವಿನಿಯೋಗ ಮಾಡಿ ಅವರ ಅಭಿವೃದ್ಧಿ ಮಾಡುವುದಾಗಿ ಹೇಳಿರುವುದು ಸ್ವಾಗತಾರ್ಹವಾದ ವಿಚಾರ. ಆದರೆ, ಸರ್ಕಾರ ಒಂದು ಹೆಚ್‌ಪಿಗೆ ಆರು ನೂರು ರೂಪಾಯಿಗಳಂತೆ ವಿಧಿಸಿ ದಿನಕ್ಕೆ ಹತ್ತು ಗಂಟೆ ಕಾಲ ವಿದ್ಯುತ್ ಸೌಲಭ್ಯ ಕೊಡುವಂತಾಗಬೇಕು. ಈಗ ದಿವಸಕ್ಕೆ ಎರಡು ಗಂಟೆ ಮಾತ್ರ ವಿದ್ಯುತ್ ಪೂರೈಕೆಯಾಗುತ್ತಿದೆ. ಇವೊತ್ತು ಡಿಫಿಸಿಟ್ ಎಲೆಕ್ಟ್ರಿಸಿಟಿಯಿಂದ ನೂರಕ್ಕೆ ಎಂಭತ್ತರಷ್ಟು ಪಂಪ್‌ಸೆಟ್ಟುಗಳು ಸುಟ್ಟುಹೋಗುತ್ತಿವೆ. ಪಂಪ್‌ಸೆಟ್ ಒಮ್ಮೆ ಸುಟ್ಟು ಹೋದರೆ ಎರಡು ಸಾವಿರ ರೂಪಾಯಿಗಳಷ್ಟು ನಷ್ಟವುಂಟಾಗುತ್ತದೆ. ಹಾಗೂ ಅದನ್ನು ಮತ್ತೆ ದುರಸ್ತಿ ಮಾಡಿಸಬೇಕಾದರೆ ಒಂದು ವಾರ ಬೇಕಾಗುತ್ತದೆ. ಆಗ ಜಮೀನಿನಲ್ಲಿ ಬೆಳೆ ಬೆಳೆದು ನಿಂತಿದ್ದು ನೀರು ಪೂರೈಕೆಯಾಗದಿದ್ದರೆ ಬೆಳೆ ಒಣಗಿ ಹೋಗುತ್ತದೆ. ಬೆಳೆ ಕೈಗೆ ಸಿಗದಿದ್ದರೆ ಅತ ಬ್ಯಾಂಕ್ ಮತ್ತು ಸಹಕಾರ ಸಂಘಗಳಿಂದ ಮಾಡಿದ ಸಾಲ ತೀರಿಸುವುದಕ್ಕಾಗುವುದಿಲ್ಲ ಹಾಗೂ ಬಡ್ಡಿಯನ್ನೂ ಕಟ್ಟುವುದಕ್ಕಾಗುವುದಿಲ್ಲ. ಈ ನಿಟ್ಟಿನಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ರಾಜ್ಯದ ರೈತರ ಪರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪಿಎಲ್‌ಡಿ ಬ್ಯಾಂಕ್ ಮತ್ತು ಸೊಸೈಟಿ ಮುಖಾಂತರ ರೈತರು ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕು ಹಾಗೂ ಆ ಮೂಲಕ ಅವರಿಗೆ ಅನುಕೂಲ ಕಲ್ಪಿಸಿಕೊಡಬೇಕು. ಸಾಲ ವಸೂಲಾತಿ ಮಾಡುವ ವಿಚಾರದಲ್ಲಿ ಅಧಿಕಾರಿಗಳು ರೈತರ ಮನೆಗಳಿಗೆ ಹೋಗಿ ಮನೆಯಲ್ಲಿರುವ ಪಾತ್ರೆ, ಟಿ.ವಿ. ಹಾಗೂ ಇನ್ನಿತರ ಸಾಮಾನುಗಳನ್ನು ಹರಾಜು ಮಾಡಲು ಹೊರಟಿದ್ದಾರೆ.

5.40 ಪಿ.ಎಂ.

ಇದು ಯಾವುದೇ ಒಂದು ಆಧುನಿಕ ಸರ್ಕಾರದ ಲಕ್ಷಣವಲ್ಲ, ಸರ್ಕಾರದ ಲಕ್ಷಣವೆಂದರೆ

ಬಡವರನ್ನು ರಾಜ್ಯದಲ್ಲಿ ನಾವು ಸಮತೋಲನವಾಗಿ ಕಾಣುವುದು. ಬಡವರಿಗೆ, ರೈತರಿಗೆ ಆದ್ಯತೆ ಕೊಡುವುದು ಸರ್ಕಾರದ ಕರ್ತವ್ಯ. ಈ ಸರ್ಕಾರ ಹೆಚ್ಚಿನ ರೈತರಿಗೆ ಆದ್ಯತೆಯನ್ನು ಕೊಟ್ಟಿದೆ, ಇಲ್ಲ ಎಂದು ಅಲ್ಲ. ಆದರೆ ಇಂತಹ ಬರಗಾಲದಲ್ಲಿ ಮಳೆ ಇಲ್ಲದೇ ಇರುವ ಕಾಲದಲ್ಲಿ ಈ ಪರಿಸ್ಥಿತಿಯನ್ನು ನೋಡಿ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಳ್ಳಬೇಕು. ಆ ವರದಿ ಪ್ರಕಾರ ಅಂತಹ ಜಿಲ್ಲೆಗಳಲ್ಲಿ, ಅಂತಹ ತಾಲ್ಲೂಕುಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರ ಮುಂದಾಗಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಮಿನಿ ವಾಟರ್ ಸಿಸ್ಟಂ ಮತ್ತು ಓವರ್ ಹೆಡ್ ಟ್ಯಾಂಕ್ ಸಿಸ್ಟಂ ಅನ್ನು ಒಂದು ತಾಲ್ಲೂಕಿನಲ್ಲಿ ನೂರಕ್ಕೆ 25-30 ಓವರ್ ಹೆಡ್ ಟ್ಯಾಂಕ್‌ನ್ನು ಸರ್ಕಾರ ಮಾಡಿದೆ. ಅಲ್ಲಿ ಏನಾಗಿದೆ ಅಂದರೆ ಒಂದೇ ಟ್ರಾನ್ಸ್‌ಫಾರ್ಮರ್‌ನಲ್ಲಿ ಸುಮಾರು 70-80 ಜನ ರೈತರಿಗೆ ಸಂಪರ್ಕ ಕೊಟ್ಟಿರುವ ಕಾರಣ ಕುಡಿಯುವ ನೀರಿನ ಪಂಪ್‌ಸೆಟ್‌ಗೆ ಹೋಗುವಂತಹ ವಿದ್ಯುತ್ ಸಂಪರ್ಕದಲ್ಲಿ ಹೆಚ್ಚು ಕಡಿಮೆ ಆಗಿ ಒಂದು ಸಲ ಮೋಟಾರ್ ಕೆಟ್ಟು ಹೋಯಿತು ಅಂದರೆ ಅದನ್ನು ರಿಪೇರಿಗಾಗಿ ಪಂಚಾಯತಿಯವರ ವಶಕ್ಕೆ ಕೊಟ್ಟಿದ್ದಾರೆ. ಪಂಚಾಯತಿಯವರು ಒಂದು ತಿಂಗಳಾದರೂ ಆ ಮೋಟಾರ್‌ನ್ನು ರಿಪೇರಿ ಮಾಡಿಸುವುದಿಲ್ಲ. ಅಲ್ಲಿಗೆ ಸಾವ್ಯಾರಾದರೂ ಶಾಸಕರು ಹೋದರೆ, ಏನಯ್ಯ ಮೋಟಾರ್ ಕೆಟ್ಟು ಒಂದು ತಿಂಗಳಾಗಿದೆ, ನಮಗೆ ಕುಡಿಯುವ ನೀರು ಇಲ್ಲ ಎಂದರೆ 'ನೀವು ಈಗ ಬಂದಿದ್ದೀರಿ' ಎಂದು ಹೇಳುತ್ತಾರೆ. ಆದರೆ ಆ ಅಧಿಕಾರ ನಮಗೆ ಇಲ್ಲ. ಈಗ ಏನಾಗಿದೆ ಎಂದರೆ ತಾಲ್ಲೂಕು ಪಂಚಾಯತಿ ಸದಸ್ಯರು, ಜಿಲ್ಲಾ ಪಂಚಾಯತಿ ಸದಸ್ಯರು, ಪಂಚಾಯತಿ ಅಧ್ಯಕ್ಷರು ಕಾರ್ಯದರ್ಶಿ ಅವರವರೇ ಸಹಿ ಮಾಡಿಕೊಂಡು ಹೋಗುತ್ತಾರೆ, ಇಂಡೆಂಟ್ ಕೊಡುತ್ತಾರೆ. ಒಂದು ತಿಂಗಳು ಎರಡು ತಿಂಗಳು ಆದ ಮೇಲೆ ರಿಪೇರಿ ಮಾಡಿಸುತ್ತಾರೆ. ಆದರೆ ಶಾಸಕರ ಮನೆ ಬಾಗಿಲಿಗೆ ಜನ ಬಂದು 24 ಗಂಟೆಗಳ ಕಾಲ ಲೆಟರ್ ಕೊಡಿ, ಇಂಜಿನಿಯರ್‌ಗೆ ಹೇಳಿ, ಅವರಿಗೆ ಹೇಳಿ, ಇವರಿಗೆ ಹೇಳಿ ಎಂದು ನಮ್ಮ ಮನೆ ಬಾಗಿಲಿಗೆ ಬರುತ್ತಾರೆ. ಎಲ್ಲಾ ಶಾಸಕರಿಗೂ ಸಂಬಂಧಪಟ್ಟ ಹಾಗೆ ಇದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಬೇಕಾಗಿದೆ. ಅದಕ್ಕೆ ನಾನು ಹೇಳುತ್ತೇನೆ, ಈಗ ಏನು ಪಂಪ್‌ಸೆಟ್‌ಗಳಿಗೆ ಕೊಡತಕ್ಕಂಥ ವಿದ್ಯುತ್ ಸಂಪರ್ಕಗಳು ಇವೆ ಅದಕ್ಕೆ ಸೆಪರೇಟ್ ಲೈನ್ ಮಾಡಿದರೆ, ಈಗ ಏನು ಕುಡಿಯುವ ನೀರಿನ ಅಭಾವ ಇದೆ ಅದನ್ನು ನೀಗಿಸಬಹುದು. ತದನಂತರ ಬೋರ್‌ವೆಲ್ ವಿಚಾರದಲ್ಲಿ ಡೀಪನಿಂಗ್ ಮಾಡುವುದು. ಕೆಲವು ಕಡೆ 200 ರಿಂದ 300 ಅಡಿಗಳಷ್ಟು ಕೊರೆದಿದ್ದಾರೆ. ಅಲ್ಲಿ ಎರಡು ಇಂಚು, ಮೂರು ಇಂಚು ನೀರು ಬಂದಿದೆ. ಅದೇ ಬೋರ್‌ವೆಲ್‌ನ್ನು 400 ರಿಂದ 500 ಅಡಿಗಳವರೆಗೂ ಕೊರೆದರೆ ಅಲ್ಲಿ 10 ರಿಂದ 15 ಸಾವಿರ ಗ್ಯಾಲನ್ ನೀರು ಸಿಗುವಂತಹ ಬೋರ್‌ವೆಲ್‌ಗಳನ್ನು ಈಗಾಗಲೇ ಗುರುತು ಮಾಡಿದ್ದಾರೆ. ಈ ಕಡೆ ಸರ್ಕಾರ ಕೂಡಲೇ ಗಮನಹರಿಸಬೇಕು. ಇವತ್ತು ಏನು ಬೋರ್‌ವೆಲ್ ಡೀಪನಿಂಗ್ ಆಗಿಲ್ಲ ಆ ಡೀಪನಿಂಗ್ ಆಗದೇ ಜೂನಿಯರ್ ಇಂಜಿನಿಯರ್ ಏನು ವರದಿ ಕೊಟ್ಟಿದ್ದಾರೆ ಜಿಲ್ಲಾಧಿಕಾರಿಗಳಿಗೆ ಅದನ್ನು ತರಿಸಿಕೊಂಡು ಆ ಡೀಪನಿಂಗ್ ಮಾಡುವ ವಿಚಾರದಲ್ಲಿ ಸರ್ಕಾರ ಮುಂದಾದರೆ ಸರ್ಕಾರಕ್ಕೆ

ಖರ್ಚು ಕಡಿಮೆ ಆಗುತ್ತದೆ. ಜನರಿಗೆ ಕುಡಿಯುವ ನೀರಿನ ಬರ ಕಡಿಮೆ ಆಗುತ್ತದೆ. ಆದ್ದರಿಂದ ಈ ವಿಚಾರದ ಬಗ್ಗೆ ಗಮನ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು, ತದನಂತರ ರೈತರ ಪಂಪ್‌ಸೆಟ್‌ಗಳ ಬಗ್ಗೆ ಮಾನ್ಯ ಸದಾನಂದಗೌಡರು ಒಂದು ಒಳ್ಳೆಯ ಮಾತನ್ನು ಹೇಳಿದರು. ರೈತರ ಪಂಪ್‌ಸೆಟ್ ಏನಾಗಿದೆ ಅಂದರೆ ನಮ್ಮ ತಾಲ್ಲೂಕಿನಲ್ಲಿ ಸಹ ಇವತ್ತು 4380 ಪಂಪ್‌ಸೆಟ್‌ಗಳನ್ನು ರೈತರು ಹಾಕಿದ್ದಾರೆ. ಟಿ.ಸಿ.ಗಳು ಏನು ಸಪ್ಲೈ ಆಗಿದೆ ಅಲ್ಲಿ ಸಿಂಗಲ್ ಫೇಸ್ ಕರೆಂಟ್ ಬಂದ ತಕ್ಷಣ ಎಲ್ಲರೂ ಪ್ರಿವೆಂಟರ್ ಕಾಯಿಲ್‌ಗಳನ್ನು ಹಾಕಿಕೊಂಡು ಮೋಟಾರ್ ಆನ್ ಮಾಡುತ್ತಾರೆ. ಅದರಿಂದ ಏನಾಗುತ್ತದೆ ಅಂದರೆ ಕರೆಂಟ್ ಹೆಚ್ಚು ಬರುವಂತಹ ಕಾಲದಲ್ಲಿ ಪಂಪ್‌ಸೆಟ್ ಮೋಟಾರ್‌ಗಳು ಸುಟ್ಟು ಹೋಗುತ್ತವೆ. ಒಂದೊಂದು ತಾಲ್ಲೂಕಿನಲ್ಲಿ 10-20 ಮೋಟಾರ್‌ಗಳು ಸುಟ್ಟು ಹೋಗುತ್ತವೆ. ಇದರಿಂದ ಸರ್ಕಾರಕ್ಕೆ ಬಹಳ ನಷ್ಟವಾಗುತ್ತದೆ. ದಯಮಾಡಿ ಎಷ್ಟು ಪವರ್ ಇದೆ ಆಷ್ಟು ಟಿ.ಸಿ.ಗಳನ್ನು ಹಾಕಬೇಕೆಂದು ಹೇಳಿ, ಟೆಕ್ನಿಕಲ್ ರಿಪ್ರೋರ್ಟ್ ಏನು ಕೆ.ಪಿ.ಟಿ.ಸಿ.ಎಲ್.ನವರು ಕೊಟ್ಟಿರುತ್ತಾರೆ ಆ ಪ್ರಕಾರವಾಗಿ ಟಿ.ಸಿ.ಗಳನ್ನು ಅಳವಡಿಸಿದರೆ ಸರ್ಕಾರಕ್ಕೆ ಲಾಸ್ ಆಗುವುದಿಲ್ಲ ಮತ್ತು ವಿದ್ಯುತ್ ಡಿಫಿಸಿಟ್ ಆಗಿ ರೈತರಿಗೆ ತೊಂದರೆಯಾಗುವುದಿಲ್ಲ. ಅದನ್ನೂ ಸಹ ಮಾನ್ಯ ಮುಖ್ಯಮಂತ್ರಿಗಳು ಟೆಕ್ನಿಕಲ್ ಆಗಿ ಚೆಕ್ ಮಾಡಿಸಿ ಅನುಕೂಲ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಂಡು, ಇವತ್ತು ರೈತರ ವಿದ್ಯುತ್ ಬಾಕಿಯನ್ನು ವಸೂಲಿ ಮಾಡಲು ಏನು ನೋಟೀಸ್ ಕೊಟ್ಟಿದ್ದಾರೆ ಅದನ್ನು ವಸೂಲಿ ಮಾಡಲಿ, ಏಕೆಂದರೆ ಸರ್ಕಾರಕ್ಕೆ ಹಣ ಬರಬೇಕು, ರೈತರು ಆ ಹಣವನ್ನು ತುಂಬುವುದು ಅವರ ಕರ್ತವ್ಯ. ಆದರೆ ಬರಗಾಲದಲ್ಲಿ ರೈತರಿಂದ ಹೆಚ್ಚು ಹಣವನ್ನು ವಸೂಲಿ ಮಾಡುವುದು ಸರಿಯಲ್ಲ. ಇವತ್ತು ರೈತರ ಮಕ್ಕಳು ಬಿ.ಎ. ಮಾಡಿಕೊಂಡಿದ್ದಾರೆ, ಬಿ.ಇ. ಮಾಡಿಕೊಂಡಿದ್ದಾರೆ, ಎಂ.ಬಿ.ಬಿ.ಎಸ್. ಮಾಡಿಕೊಂಡಿದ್ದಾರೆ, ಅವರೆಲ್ಲರೂ ಮನೆಯಲ್ಲಿದ್ದಾರೆ, ಅವರು ಈಗ 10 ಎಕರೆ ಜಮೀನು ಇಟ್ಟುಕೊಂಡಿರುತ್ತಾರೆ. ವಿದ್ಯುತ್ ಇಲ್ಲದಿದ್ದರೆ ಆ ಹುಡುಗರು ಸಾಲ ಮಾಡಿಕೊಂಡು ಆ ಸಾಲ ತೀರಿಸಲು ಕಳ್ಳರಾಗುತ್ತಾರೆ. ಬೆಂಗಳೂರಿಗೆ ಬರುತ್ತಾರೆ, ಇಲ್ಲಿ ಕೆಲಸ ಸಿಗುವುದಿಲ್ಲ. ಆಗ ಅವರು ಪಿಕ್-ಪಾಕೆಟ್ ಮಾಡುತ್ತಾರೆ, ಮರ್ಡರ್ ಮಾಡುತ್ತಾರೆ. ಇಲ್ಲ ದೇಶ ಬಿಟ್ಟು ಹೋಗುತ್ತಾರೆ. ಆದ್ದರಿಂದ ನಾನು ಸರ್ಕಾರದವರಲ್ಲಿ ವಿನಂತಿ ಮಾಡುತ್ತೇನೆ. ಈ ಬಗ್ಗೆ ಚಿಂತನೆಯನ್ನು ಮಾಡಬೇಕು. ಇವತ್ತು ನಮ್ಮಲ್ಲಿರುವ ಯುವಶಕ್ತಿ ಹಾಳಾಗಿ ಹೋಗುತ್ತಿದೆ. ಇವತ್ತು ಊರುಗಳಲ್ಲಿ ಹುಡುಗರು ಗೋಲಿ ಆಡುತ್ತಾರೆ. ಹಳ್ಳಿಯಲ್ಲಿರುವ ವಿದ್ಯಾವಂತ ಯುವಕರಿಗೆ ಕೆಲಸ ಇಲ್ಲ. ಅಪ್ಪ, ಅಮ್ಮ ಅವರನ್ನು ಕೇಳುವ ಶಕ್ತಿ ಇಲ್ಲ. ಏಕೆಂದರೆ ಅವರು ಚೆನ್ನಾಗಿ ಬೆಳೆದಿರುತ್ತಾರೆ, ಕೇಳಿದರೆ ಕೆಲಸ ಕೊಡಿ ಎಂದು ಹೇಳುತ್ತಾರೆ. ನಾನು ಸರ್ಕಾರವನ್ನು ಬ್ಲೇಮ್ ಮಾಡುತ್ತಿಲ್ಲ. ಸರ್ಕಾರ ಎಲ್ಲರಿಗೂ ಕೆಲಸ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ರೈತರಿಗೆ ಕೊಡುವಂತಹ ವಿದ್ಯುತ್‌ನಲ್ಲಿ ರಿಯಾಯಿತಿ ಕೊಡುವುದು. ವಿದ್ಯುತ್ ಇಲ್ಲದಿದ್ದರೆ ಬೇರೆ ರಾಜ್ಯಗಳಿಂದ ತರಿಸಿಕೊಂಡು ಕೊಡಬೇಕು ಇದು ಸರ್ಕಾರ ಮಾಡುವ ಕೆಲಸ. ವಿದ್ಯುತ್ ಅಭಾವವನ್ನು ನೀಗಿಸಿದರೆ ಹಳ್ಳಿಗಳ ಯುವ ಜನರಿಗೆ ಕೆಲಸ ಕೊಟ್ಟಂತೆ ಆಗುತ್ತದೆ. ರೈತರಿಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ.

ಈ ಬಗ್ಗೆ ನಮ್ಮ ಅನೇಕ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಉದಾಹರಣೆಗೆ ಮಾನ್ಯ ನಾಯಕರಾದ ಸಿಂಧ್ಯಾರವರು, ಉಪಾಧ್ಯಾಯರಿಗೆ ಸಂಬಳ ಕೊಟ್ಟಿಲ್ಲ, ಟ್ರಜರಿ ಬ್ಯಾನ್ ಆಗಿದೆ ಎಂದು ಹೇಳುತ್ತಿದ್ದರು. ಇದು ಮಾರ್ಚ್ 31ರ ನಂತರ ಸರಿಯಾಗಬಹುದು ಎಂದು ನನಗನ್ನಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಸಚಿವರಾದ್ದರಿಂದ ಅವರಿಗೆ ಆ ಶಕ್ತಿ ಇದೆ ಎಂಬುದು ನನ್ನ ಭಾವನೆ. ಅವರು ಈ ಸಮಸ್ಯೆಯನ್ನು ನಿವಾರಣೆ ಮಾಡುತ್ತಾರೆ. ಆದರೆ ಒಂದೇ ಒಂದು ಅಂಶವೇನೆಂದರೆ, ಓ.ಎ.ಪಿ. ನಿವೃತ್ತಿ ವೇತನ ಕೊಡುವುದೂ ಸಹ 6-7 ತಿಂಗಳುಗಳಿಂದ ಬಾಕಿ ಇದೆ ಎಂಬುದು ನನಗೆ ಗೊತ್ತಾಗಿದೆ. ಬ್ಲಾಕ್ ಬೋರ್ಡ್ ಟೀಚರ್‌ಗೂ ಸಂಬಳ ಕೊಟ್ಟಿಲ್ಲ. ಸರ್ಕಾರ ಕಂಟ್ರಾಕ್ಟರ್‌ಗೆ ಕೊಡುವಂತಹ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ ಬಿಲ್‌ಗಳು ಇದ್ದರೆ ಒಂದು ವಾರ ಬಿಟ್ಟು ಬನ್ನಿ ಎಂದು ಹೇಳುತ್ತಾರೆ. ಈ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಗಳು ನಾಳೆ ಏನು ಬಜೆಟ್ ಮಂಡನೆ ಮಾಡುತ್ತಾರೆ ಅಲ್ಲಿಯವರೆಗೂ ನೋಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಓ.ಎ.ಪಿ. ವಿಚಾರ ಇರಬಹುದು, ಸಂಬಳ ಕೊಡುವಂತಹ ವಿಚಾರ ಇರಬಹುದು, ಈ ಬಗ್ಗೆ ಗಮನ ಹರಿಸಿ ಸರಿ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಂಡು, ಈ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುವುದಕ್ಕೆ ಬದಲು ನಾವೂ ಸಹ ಸರ್ಕಾರದ ಬಗ್ಗೆ ಚಿಂತನೆ ಮಾಡುವ ರೀತಿಯಲ್ಲಿ ಹೋದರೆ ಯಾವ ಸರ್ಕಾರಗಳೂ ಸಹ ಕೆಲಸ ಮಾಡುವ ವಿಚಾರದಲ್ಲಿ ಹಿಂದಾಗುವುದಿಲ್ಲ ಎನ್ನುವ ಮಾತನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಇನ್ನು ಕೆರೆಗಳಲ್ಲಿ ಹೂಳು ಎತ್ತುವ ವಿಚಾರದಲ್ಲಿ ಹೋಬಳಿಗೆ ಒಂದು ಕೆರೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಜಲಸಂವರ್ಧನೆ ಯೋಜನೆಯನ್ನು ಮಾಡುತ್ತೇವೆಂದು ಹೇಳಿದರು. ಅದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು ಮತ್ತು ಹಿಂದಿನ ಕಾಲದ ರಸ್ತೆಗಳು ಮತ್ತು ಚರಂಡಿಗಳ ಕಾಮಗಾರಿಗಳನ್ನು ನಾವು ಮಾಡುತ್ತೇವೆಂದು ಹೇಳಿದಾಗ ನನಗೆ ಬಹಳ ಸಂತೋಷವಾಯಿತು.

ಶ್ರೀ ಬಿ.ಎಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇನ್ನೂ ತಮ್ಮ ಬಜೆಟ್‌ನ್ನು ಈ ಸದನದಲ್ಲಿ ಮಂಡನೆ ಮಾಡಿಲ್ಲ. ಇವತ್ತು ಇಲ್ಲಿ ನಡೆದಿರತಕ್ಕಂಥ ಚರ್ಚೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ, ವಿದ್ಯುತ್ ಸಮಸ್ಯೆ ಬಗ್ಗೆ ಚರ್ಚೆ ನಡೆಯುತ್ತಿದೆ. ಬಜೆಟ್ ಆಗಲೇ ಮಂಡನೆ ಆಗಿದೆ ಎನ್ನುವ ರೀತಿಯಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ವಿಷಯಕ್ಕೆ ಸೀಮಿತವಾಗಿ ಮಾತನಾಡಿದರೆ ಒಳ್ಳೆಯದು.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ನಾನು ಅದನ್ನೇ ಮಾತನಾಡುತ್ತಿರುವುದು. ಸರ್ಕಾರವನ್ನು ಕೇಳಲು ನನಗೆ ಅಧಿಕಾರ ಇದೆ, ನಾನು ಕೇಳುತ್ತಿದ್ದೇನೆ. ಜಲಸಂವರ್ಧನೆ ಯೋಜನೆ ವಿಷಯವಾಗಿ ಮಾನ್ಯ ಸಚಿವರು ಹೇಳುತ್ತಿದ್ದರು, ಹೋಬಳಿಗೆ ಒಂದು ಕೆರೆಯಲ್ಲಿ ನಾವು ಹೂಳು ಎತ್ತುತ್ತೇವೆಂದು ಹೇಳಿದರು. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಸಹ

ಪ್ರಾರಂಭ ಮಾಡಿದರು. ಒಂದು ವರ್ಷವಾಯಿತು, ಅಲ್ಲಿ ಏನೂ ಕೆಲಸ ಆಗಿಲ್ಲ. ಆ ಕಾರ್ಯಕ್ರಮದಲ್ಲಿ ನಾವು ಎಷ್ಟೇ ಹಣ ತೊಡಗಿಸಿದರೂ ವ್ಯರ್ಥವಾಗುವುದಿಲ್ಲ, ಅಂತರ್ ಜಲ ಜಾಸ್ತಿಯಾಗುವುದು. ನಮ್ಮ ರೈತರಿಗೆ ಅನುಕೂಲವಾಗುವುದು. ಜಲಸಂವರ್ಧನೆ ಯೋಜನೆಯಡಿಯಲ್ಲಿ ಪ್ರತಿ ಹೋಬಳಿಗೆ ಒಂದು ಕೆರೆಯಲ್ಲಿ ಹೂಳು ಎತ್ತುವ ಕೆಲಸ ಮಾಡಬೇಕೆಂದು ನಾನು ಹೇಳುತ್ತೇನೆ. ಇದರಿಂದ ಕುಡಿಯುವ ನೀರು ಮತ್ತು ಅಂತರ್ ಜಲ ಜಾಸ್ತಿ ಮಾಡಬಹುದು. ಇದರಿಂದ ರೈತರ ಜಮೀನು ಇರಿಗೇಟ್ ಆದಾಗ ಲಕ್ಷಾಂತರ ಎಕರೆ ಜಮೀನು ಅಭಿವೃದ್ಧಿಯಾಗಿ ಒಳ್ಳೆಯ ಬೆಳೆ ಬರುವುದಕ್ಕೆ ಅನುಕೂಲವಾಗುತ್ತದೆ. ಕೃಷಿ ವಿಮೆ ಬಗ್ಗೆ, ರೈತ ಸೇವಾ ಸಹಕಾರ ಸಂಘ, ರೈತ ಸೇವಾ ಕೇಂದ್ರ ಎಂದು ಮಾಡುತ್ತಾರೆ. ಇವತ್ತು ಹೋಬಳಿಗೆ ಒಂದೊಂದು ಕೇಂದ್ರವನ್ನು ಸ್ಥಾಪನೆ ಮಾಡಿದ್ದಾರೆ. ಮಾನ್ಯ ಕೃಷಿ ಸಚಿವರು ಅನೇಕ ಮೀಟಿಂಗ್‌ಗಳನ್ನು ಮಾಡಿ ನಮ್ಮ ಕ್ಷೇತ್ರದಲ್ಲಿಯೂ ಸಹ ಬಂದು ಆ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡು ವಿಮೆ ಕೊಡುತ್ತೇವೆ, ನಾವು ಒಂದು ಅರ್ಜಿ ಕೊಡಿ ಎಂದು ಹೇಳಿ ಬೆಳೆ ಇಲ್ಲದೆ ಹಾಳಾದಾಗ ಅನೇಕ ಅರ್ಜಿಗಳನ್ನು ಅವರು ಪಡೆದುಕೊಂಡರು. ಅನೇಕ ಜನ ಹಣವನ್ನು ಕಟ್ಟಿದ್ದಾರೆ. ಅಲ್ಲಿ ಹೋಗಿ ರೈತರು ಕೇಳಿದರೆ ಯಾರೂ ಸಿಗುವುದಿಲ್ಲ. ರೈತರಿಗೆ ಬೆಳೆ ಇಲ್ಲ, ರೈತರು ಸಾಲ ಕಟ್ಟುವುದಕ್ಕೆ ಆಗುತ್ತಿಲ್ಲ, ಇಂತಹ ಕಾಲದಲ್ಲಿ ಆ ವಿಮೆ ಹಣವನ್ನು ವಾಪಸ್ಸು ಕೊಡುತ್ತಿಲ್ಲ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಆದೇಶ ಮಾಡಿ ರೈತರಿಗೆ ಕೊಡುವಂತಹ ವಿಮೆ ಹಣವನ್ನು ಕೊಡಿಸಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಂಡು, ಇಂತಹ ಬರಗಾಲ ಪರಿಸ್ಥಿತಿಯಲ್ಲಿ ರಾಜ್ಯದ ಜನತೆಗೆ ಸರ್ಕಾರ ಅನುಕೂಲ ಮಾಡಬೇಕೆಂದು ಹೇಳಿ ಸರ್ಕಾರ ಅನೇಕ ವಿಚಾರಗಳಲ್ಲಿ ಏನು ವಿಫಲ ಆಗಿದೆ, ಅದನ್ನು ಕೂಡಲೇ ಸರಿಪಡಿಸಬೇಕೆಂದು ಹೇಳಿ, ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಸುರೇಶ್ ಕುಮಾರ್(ರಾಜಾಜಿನಗರ): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ, ಇದೆಲ್ಲಾ ಗ್ರಾಮೀಣ ಪ್ರದೇಶದ ಬಗ್ಗೆ ಮಾತನಾಡುತ್ತಿದ್ದಾರೆ. ನಾನು ಈ ಹಿಂದೆ ಈ ಸದನದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೆ. ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇರುವುದು ಅಂದರೆ ಪಂಪಿಂಗ್ ಸ್ಟೇಷನ್‌ಗೆ ವಿದ್ಯುಚ್ಛಕ್ತಿ ಸರಬರಾಜು ಸರಿಯಾದ ಕ್ವಾಲಿಟಿಯಲ್ಲಿ ಆಗದೇ ಇರುವುದು. ಸರಿಯಾದ ಕ್ವಾಲಿಟಿಯಾದ ಕರೆಂಟ್ ಸಿಗದಿರುವುದರಿಂದ, ಬೆಂಗಳೂರಿನ ಯಾವುದೇ ರಿಸರ್ವಾಯರ್‌ನಲ್ಲಿ ಮಿನಿಮಮ್ ಲೆವೆಲ್‌ನಲ್ಲಿ ಏನು ನೀರು ಇರಬೇಕೋ ಅಷ್ಟು ತುಂಬುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು, ನಾನು ಎಲ್ಲಾ ಪಂಪಿಂಗ್ ಸ್ಟೇಷನ್‌ಗಳಿಗೆ ಏನು ನಿಗದಿತ ಕ್ವಾಲಿಟಿ ಕರೆಂಟ್ ಅನ್ನು ಸರಬರಾಜು ಮಾಡಬೇಕೋ ಆ ರೀತಿ ಮಾಡುವಂತೆ ಕೆ.ಪಿ.ಟಿ.ಸಿ.ಎಲ್.ಗೆ ಸೂಚನೆ ನೀಡುತ್ತೇನೆ ಎಂದು ಭರವಸೆ ಕೊಟ್ಟಿದ್ದರು. ಆದರೆ ಇವತ್ತು ಅವರ ಟೆಕ್ನಿಕಲ್ ಟರ್ಮ್ಸ್‌ನಲ್ಲಿಯೇ ಹೇಳುವುದಾದರೆ, 49 ಸೈಕಲ್ಸ್ ಕ್ವಾಲಿಟಿಯ ಕರೆಂಟ್ ಸರಬರಾಜು ಆಗಬೇಕಾಗಿತ್ತು. ಆದರೆ ಇವತ್ತು ಅದು 44-45 ಸೈಕಲ್ಸ್ ಕೂಡ ಬರುತ್ತಿಲ್ಲ. ಇಡೀ

ಬೆಂಗಳೂರು ನಗರದಲ್ಲಿ 2-4 ದಿವಸಗಳ ಕಾಲ ನೀರಿಲ್ಲದೆ ಹಾಹಾಕಾರ ಏಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕನಿಷ್ಠಪಕ್ಷ ಪಂಪಿಂಗ್ ಸ್ಟೇಷನ್‌ಗಳಿಗೆ ನಿಗದಿತ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವಂತೆ ಮಾನ್ಯ ಮುಖ್ಯಮಂತ್ರಿಗಳು ಆದೇಶ ನೀಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದಾಗಿ ಬೆಂಗಳೂರು ನಗರದ ಸುಮಾರು 60 ಲಕ್ಷ ಜನರ ಕುಡಿಯುವ ನೀರಿನ ಕೊರತೆಯನ್ನು ನೀಗಿಸಿದಂತಾಗುತ್ತದೆ. ದಯವಿಟ್ಟು ಆ ಕೆಲಸವನ್ನು ಕೂಡಲೇ ಮಾಡಬೇಕೆಂದು ನಾನು ಮತ್ತೊಮ್ಮೆ ಅವರನ್ನು ಕೋರುತ್ತೇನೆ.

+ ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ): ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಬರಗಾಲದ ಪರಿಸ್ಥಿತಿಯ ಮೇಲಿನ ಈ ಚರ್ಚೆಯಲ್ಲಿ ನಾನು ಪಾಲ್ಗೊಂಡು ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಡೀ ರಾಜ್ಯದಲ್ಲಿ ಇವತ್ತು ಕುಡಿಯುವ ನೀರಿಗೆ ಹಾಹಾಕಾರ ಆಗುತ್ತಿರುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಮಾನ್ಯ ಸದಸ್ಯರುಗಳು ಇಲ್ಲಿ ಮಾತನಾಡಿ ಪ್ರಸ್ತಾಪಿಸಿದ್ದಾರೆ. ಈಗಾಗಲೇ ಶಿವರಾತ್ರಿ ಹಬ್ಬ ಕಳೆದು ನಾವು ಯುಗಾದಿ ಹಬ್ಬಕ್ಕೆ ಕಾಲಿಡುತ್ತಿದ್ದೇವೆ. ಇನ್ನು ಸತತವಾಗಿ ಮೂರು ತಿಂಗಳುಗಳ ಕಾಲ ಬೇಸಿಗೆ ಬಹಳ ಪ್ರಬಲವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿರುವುದನ್ನು ಕಳೆದ ಮೂರು ತಿಂಗಳುಗಳಿಂದ ನಾವು ಗಮನಿಸಿದ್ದೇವೆ. ನಾವು ಹಳ್ಳಿಗಳಲ್ಲಿ ಪ್ರವಾಸ ಮಾಡುವಂತಹ ಸಂದರ್ಭಗಳಲ್ಲಿ ಜನರು ಮೂಲಭೂತ ಸೌಕರ್ಯವಾಗಿರತಕ್ಕ ಕುಡಿಯುವ ನೀರು ಮತ್ತು ವಿದ್ಯುಚ್ಛಕ್ತಿ ಬಿಟ್ಟು ಬೇರೆ ಯಾವುದರ ಬಗ್ಗೆಯೂ ಕೇಳುವುದಿಲ್ಲ. ಈ ಎರಡರ ಬಗ್ಗೆ ಇಡೀ ರಾಜ್ಯದ ಜನತೆ ಇವತ್ತು ಹಾಹಾಕಾರ ಪಡುತ್ತಿರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಈ ಅಂಶವನ್ನೇ ನಾನಿಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಯಾವುದೇ ಒಂದು ಯೋಜನೆಯನ್ನು ಜಾರಿಗೊಳಿಸುವಂತಹ ಸಂದರ್ಭದಲ್ಲಿ ಅದು ಕೊನೆಯ ಗ್ರಾಮವನ್ನು ಮುಟ್ಟಿ ಇಂಪ್ಲಿಮೆಂಟ್ ಮಾಡುವಂತಹ ವ್ಯವಸ್ಥೆ ಸರಿಯಾಗಿ ಆಗುತ್ತಿಲ್ಲ ಎನ್ನುವ ವಾದವೊಂದನ್ನು ನಾನಿಲ್ಲಿ ಸದನದ ಮುಂದಿಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಕೆ.ಡಿ.ಪಿ. ಸಭೆಗಳಲ್ಲಿ ನಾವು ಈ ರೀತಿಯಾದಂತಹ ಚರ್ಚೆಯನ್ನು ಮಾಡುತ್ತಿರುತ್ತೇವೆ. ಗ್ರಾಮೀಣ ಪ್ರದೇಶದ ಜನತೆ ಕುಡಿಯುವ ನೀರು ಬೇಕು, ವಿದ್ಯುಚ್ಛಕ್ತಿ ಬೇಕು ಎಂದು ನಮ್ಮನ್ನು ಕೇಳಿಕೊಂಡಂತಹ ಸಂದರ್ಭದಲ್ಲಿ ಅಧಿಕಾರಿಗಳಿಗೆ ಎಷ್ಟೇ ಆದೇಶಗಳನ್ನು ನೀಡಿದರೂ ಸಹ ಅವರು ಸಮರ್ಪಕವಾಗಿ ಹಾಗೂ ಪ್ರಬಲವಾಗಿ ಅದನ್ನು ಜಾರಿಗೊಳಿಸುವುದರಲ್ಲಿ ವಿಫಲರಾಗಿದ್ದಾರೆ ಎಂಬ ಮಾತುಗಳು ಎಲ್ಲೆಡೆ ಕೇಳಿ ಬರುತ್ತಿವೆ. ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 2-3 ಕಿ.ಮೀ.ಗಳಿಂದ ಕುಡಿಯುವ ನೀರು ತರುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹುಬ್ಬಳ್ಳಿ-ಧಾರವಾಡ ನಗರದಲ್ಲಿ 10-12 ದಿವಸಕ್ಕೊಮ್ಮೆ ನೀರು

ಬಿಡುವಂತಹ ವ್ಯವಸ್ಥೆ ಇದೆ ಎಂದು ಆಗಲೇ ಸದನದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ. ಕುಡಿಯುವ ನೀರು ಒದಗಿಸುವಲ್ಲಿ ಅನೇಕ ಕೊರತೆಗಳಿವೆ. ಬೋರ್ ಕೊರೆದಂತಹ ಸಂದರ್ಭದಲ್ಲಿ ನೀರು ಬಂದರೂ ಸಹ, ಆ ನೀರನ್ನು ಮೇಲಕ್ಕೆ ಲಿಫ್ಟ್ ಮಾಡಲಿಕ್ಕೆ ಇವತ್ತಿನ ದಿವಸ ಕರೆಂಟ್ ಅಭಾವ ಗಣನೀಯವಾಗಿ ಇರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ. ವಿದ್ಯುಚ್ಛಕ್ತಿ ಕೊರತೆ ಬಗ್ಗೆ ಈಗಾಗಲೇ ಅನೇಕ ಮಹನೀಯರುಗಳು ಮಾತನಾಡಿದ್ದಾರೆ. ಹಳ್ಳಿಗಳಲ್ಲಿ ಕಿರು ನೀರಿನ ಸರಬರಾಜು ಯೋಜನೆ ಮುಂತಾದ ಯೋಜನೆಗಳಡಿ ನಿರ್ಮಿಸಲಾದ ಮೇಜರ್ ಟ್ಯಾಂಕ್‌ಗಳಿದ್ದರೂ ಸಹ ವಿದ್ಯುಚ್ಛಕ್ತಿಯ ಕೊರತೆಯಿಂದಾಗಿ ಅಲ್ಲಿಂದ ನೀರನ್ನು ಲಿಫ್ಟ್ ಮಾಡಲಿಕ್ಕಾಗುತ್ತಿಲ್ಲ. ಈ ತೊಂದರೆಯನ್ನು ನಿವಾರಿಸಲು ಪ್ರತ್ಯೇಕವಾಗಿ 25 ಕೆ.ವಿ.ಟಿ.ಸಿ. ಯನ್ನು ಅಳವಡಿಸಿದರೆ, ಖಂಡಿತವಾಗಿಯೂ ಸಹ ಈ ಸಮಸ್ಯೆಯನ್ನು ಬಗೆಹರಿಸಬಹುದು ಎಂಬುದು ನನ್ನ ಅನ್ನಿಸಿಕೆಯಾಗಿದೆ. ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ಮತ್ತು ಕೆ.ಡಿ.ಪಿ. ಸಭೆಗಳಲ್ಲಿ ಆಯಾ ಜಿಲ್ಲಾ ಮಂತ್ರಿಗಳು ಈ ರೀತಿಯಾಗಿ ಪ್ರತ್ಯೇಕವಾಗಿ 25 ಕೆವಿಟಿಸಿ ಯನ್ನು ಅಳವಡಿಸಬೇಕೆಂದು ಅಧಿಕಾರಿಗಳಿಗೆ ಆದೇಶಗಳನ್ನು ನೀಡಿದರೂ ಕೂಡಾ ಇದುವರೆಗೂ ಕೂಡ ಅದು ಇಂಪ್ಲಿಮೆಂಟ್ ಆಗಿಲ್ಲ. ಮಾನ್ಯ ಕೃಷಿ ಸಚಿವರಾದಂತಹ ಜಯಚಂದ್ರರವರೂ ಕೂಡ ನಮ್ಮ ಜಿಲ್ಲೆಯಲ್ಲಿ ಸಭೆಗಳು ನಡೆದಾಗ ಈ ರೀತಿಯ ಆದೇಶ ನೀಡಿದ್ದಾರೆ. ಗ್ರಾಮಗಳಲ್ಲಿ ಪ್ರತ್ಯೇಕವಾಗಿ 25 ಕೆವಿ-ಯ ಟಿಸಿಯನ್ನು ಅಳವಡಿಸಿದಲ್ಲಿ ಕುಡಿಯುವ ನೀರಿನ ಸಮಸ್ಯೆ ಭಾಗಶಃ ಕಡಿಮೆಯಾಗಬಹುದು ಎಂಬುದು ನನ್ನ ಅನ್ನಿಸಿಕೆಯಾಗಿದೆ. ದಯವಿಟ್ಟು ಇದನ್ನು ಕಾರ್ಯಗತಗೊಳಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ 2-3 ಕಿ.ಮೀ.ಗಳಷ್ಟು ದೂರದಿಂದ ಕುಡಿಯುವ ನೀರನ್ನು ತರುವಂತಹ ಸಮಸ್ಯೆಯನ್ನು ನೀಗಿಸಬೇಕೆಂಬ ಉದ್ದೇಶದಿಂದ ಅಂತಹ ಕಡೆಗಳಲ್ಲಿ ಬೋರ್ ಅನ್ನು ಕೊರೆಯಬೇಕು ಎಂಬ ಆದೇಶಗಳನ್ನು ನೀಡಿದ್ದರೂ ಕೂಡ ಅದನ್ನು ಜಾರಿಗೆ ತರುವಲ್ಲಿ ಜಿಲ್ಲಾಡಳಿತ ವಿಫಲವಾಗಿವೆ. ನನ್ನ ಕ್ಷೇತ್ರದ ಉದಾಹರಣೆಯನ್ನೇ ನೀಡುವುದಾದರೆ, ಈಗಾಗಲೇ ಐದು ತಿಂಗಳ ಹಿಂದೆಯೇ ಇಲ್ಲಿಯ 4-5 ಹಳ್ಳಿಗಳಿಗೆ ಬೋರ್ ಅನ್ನು ಕೊರೆಯಲಿಕ್ಕೆ ಆದೇಶ ನೀಡಿದ್ದರೂ ಕೂಡ ಇವತ್ತಿನವರೆಗೂ ಕೂಡ ಜಿಲ್ಲಾಡಳಿತ ಅಲ್ಲಿ ಬೋರ್‌ವೆಲ್ ಕೊರೆಸುವಲ್ಲಿ ವಿಫಲವಾಗಿದೆ. ನಾನು ಜಿಲ್ಲಾಧಿಕಾರಿಗಳೊಂದಿಗೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಅಧಿಕಾರಿಗಳಿಗೆ ಬೋರ್‌ವೆಲ್ ಕೊರೆಸಲು ಆದೇಶ ನೀಡಿದ್ದೇವೆ ಎಂದು ಹೇಳುತ್ತಾರೆ. ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮದ ಜನತೆ, ಅದರಲ್ಲೂ ವಿಶೇಷವಾಗಿ ಮಹಿಳೆಯರು ಆಯಾ ಗ್ರಾಮ ಪಂಚಾಯತ್ ಕಛೇರಿಯ ಮುಂದೆ ಧರಣಿ ಮಾಡಿ, ಆ ಕಛೇರಿಯ ಕಡತಗಳನ್ನು ಹೊರಗೆ ಬಿಸಾಕಿ ಪ್ರತಿಭಟನೆಗಳನ್ನು ಮಾಡಿದರೂ ಸಹಾ ಅಧಿಕಾರಿಗಳು ಇದರ ಬಗ್ಗೆ ಕ್ರಮ ಕೈಗೊಳ್ಳದೆ ಏನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಸರ್ಕಾರ ಸರಿಯಾದಂತಹ ಒಂದು ವ್ಯವಸ್ಥೆಯ ಮೂಲಕ, ಪೂರ್ಣವಾಗಿರತಕ್ಕಂತಹ ಕಾನೂನನ್ನು ಅಳವಡಿಸಿ ಈ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವಂತೆ ಅಧಿಕಾರಿಗಳಿಗೆ ಕಟ್ಟೆಚ್ಚರಿಕೆ ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ

ರಾಜ್ಯದಲ್ಲಿ ಬೇಸಿಗೆ ಆರಂಭವಾಗಿದ್ದು ಪ್ರತಿಯೊಂದು ಊರಿನಲ್ಲೂ ಕನಿಷ್ಟ 1-2 ಟಿ.ಸಿ.ಗಳು ಸುಟ್ಟು ಹೋಗಿವೆ. ನನ್ನ ಕ್ಷೇತ್ರದಲ್ಲೂ ಕೂಡ ನಾನು ಅಧಿವೇಶನ ನಡೆಯುವುದಕ್ಕಿಂತ ಮುಂಚೆ ಪ್ರವಾಸ ಮಾಡಿದಂತಹ ಸಂದರ್ಭದಲ್ಲಿ ಸುಮಾರು 2-4 ಟಿ.ಸಿ.ಗಳು ಪ್ರತಿ ಊರಿನಲ್ಲಿ ಸುಟ್ಟು ಹೋಗಿರುವುದನ್ನು ನೋಡಿದ್ದೇನೆ. ಇದನ್ನು ಬದಲು ಮಾಡಲಿಕ್ಕಾಗುತ್ತಿಲ್ಲ. ಏಕೆ ಈ ರೀತಿಯಾದಂತಹ ವ್ಯವಸ್ಥೆಯಾಗುತ್ತಿದೆ? ರೈತರಿಗೆ ಅಸಮರ್ಪಕವಾದ ವಿದ್ಯುತ್ ಸರಬರಾಜಿನಿಂದಾಗಿ ಬಹಳ ತೊಂದರೆಯಾಗುತ್ತಿದೆ. ರೈತ ಇವತ್ತು ಪ್ರತಿಯೊಂದು ಹನಿ ನೀರಿಗೂ ಕೂಡ ಪರಿತಪಿಸಬೇಕಾಗಿದೆ. ಸರ್ಕಾರ ಈಗಲಾದರೂ ಕೂಡ ಸರಿಯಾದಂತಹ ಸಂದರ್ಭದಲ್ಲಿ ಎಚ್ಚೆತ್ತು ಈ ದಿಸೆಯಲ್ಲಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಬೇಕೆಂದು ಕೋರುತ್ತೇನೆ. ಅಕ್ರಮ-ಸಕ್ರಮದ ಬಗ್ಗೆ ಈಗಾಗಲೇ ಅನೇಕ ಸಲ ಚರ್ಚೆಯಾಗಿದೆ. ನನ್ನ ಚುಕ್ಕೆರಹಿತ ಪ್ರಶ್ನೆಯೊಂದಕ್ಕೆ ಈ ದಿನ ಅದರ ಬಗ್ಗೆ ಉತ್ತರ ಬಂದಿದೆ. ಕಪ್ಪು ಮತ್ತು ಬೂದು ಪ್ರದೇಶದಲ್ಲಿ ಆಗಿರುವುದನ್ನೂ ಸಹ ಸಕ್ರಮ ಮಾಡಬೇಕೆಂದು ಕಳೆದೆರಡು ವರ್ಷಗಳಿಂದಲೂ ಅಧಿವೇಶನದಲ್ಲಿ ನಾವು ಚರ್ಚೆ ಮಾಡುತ್ತಾ ಬಂದಿದ್ದೇವೆ. ಸರ್ಕಾರ ಹೊಸದಾಗಿ ಅಧಿಕಾರ ವಹಿಸಿಕೊಂಡಂತಹ ಸಂದರ್ಭದಲ್ಲಿ ಅಕ್ರಮವಾಗಿ ವಿದ್ಯುಚ್ಛಕ್ತಿ ಸಂಪರ್ಕ ಪಡೆದಿರುವುದನ್ನು ನಾಮಿನಲ್ ರೇಟ್ ಫಿಕ್ಸ್ ಮಾಡಿ ಸಕ್ರಮ ಮಾಡಿಕೊಟ್ಟಿದ್ದರೆ ಸರ್ಕಾರಕ್ಕೆ ಸಾಕಷ್ಟು ಆದಾಯ ಬರುತ್ತಿತ್ತು. ಒಂದು ಕಡೆ ಸರ್ಕಾರ ಈ ಆದಾಯವನ್ನೂ ಸಹ ಕಳೆದುಕೊಂಡಿದೆ, ಮತ್ತೊಂದು ಕಡೆ ಅಕ್ರಮವಾಗಿರುವ ಸಂಪರ್ಕವನ್ನು ಸಕ್ರಮ ಮಾಡುವುದರಲ್ಲಿ ಕೂಡ ವಿಫಲವಾಗಿರುವುದನ್ನು ನಾವು ಕಾಣುತ್ತಿದ್ದೇವೆ. 10-12 ಸಾವಿರ ರೂಪಾಯಿಗಳ ದಂಡವನ್ನು ಫಿಕ್ಸ್ ಮಾಡಲಾಗಿದೆ. ಇದನ್ನು ತೆರುವಲ್ಲಿ ಬರಗಾಲ ಪರಿಸ್ಥಿತಿಯಿಂದ ಕಂಗಾಲಾಗಿರುವ ರೈತ ವಿಫಲನಾಗಿದ್ದಾನೆ. ಸಣ್ಣ ಮೊತ್ತವನ್ನು ನಿಗದಿಪಡಿಸಿ ಅಕ್ರಮ ಸಂಪರ್ಕವನ್ನು ಸಕ್ರಮ ಮಾಡಿಕೊಳ್ಳುವ ಯೋಜನೆಯೊಂದನ್ನು ರೂಪಿಸಿದ್ದೇ ಆದರೆ ರೈತರು ಅದರ ಪ್ರಯೋಜನವನ್ನು ಪಡೆಯುತ್ತಾರೆ. ಇದರಿಂದಾಗಿ ಎಲ್ಲಾ ರೈತರೂ ಕೂಡ ಸಮರ್ಪಕವಾದ ವಿದ್ಯುತ್ ಅನ್ನು ಪಡೆಯಲು ಸಹಕಾರಿಯಾಗುತ್ತದೆ ಎನ್ನುವುದು ನನ್ನ ಅನಿಸಿಕೆಯಾಗಿದೆ. ಈ ದಿಸೆಯಲ್ಲಿ ಸರ್ಕಾರ ಆಲೋಚನೆ ಮಾಡಿ ತಕ್ಷಣವೇ ಅಕ್ರಮ ವಿದ್ಯುಚ್ಛಕ್ತಿ ಸಂಪರ್ಕವನ್ನು ಸಕ್ರಮಗೊಳಿಸಬೇಕೆಂದು ನಾನು ಆಗ್ರಹಿಸುತ್ತೇನೆ.

ನಮ್ಮ ಜಿಲ್ಲೆಯಲ್ಲಿನ ಕೊಬ್ಬರಿ ಖರೀದಿ ಕೇಂದ್ರಗಳ ಬಗ್ಗೆ ಸದನದಲ್ಲಿ ಉಪಸ್ಥಿತರಿರುವ ಮಾನ್ಯ ಕೃಷಿ ಸಚಿವರು ನನ್ನ ಕ್ಷೇತ್ರಕ್ಕೆ ಮತ್ತು ತಿಪಟೂರು ಹಾಗೂ ತುಮಕೂರುಗಳಲ್ಲಿ ಹಲವಾರು ಹೇಳಿಕೆಗಳನ್ನು ನೀಡಿದ್ದಾರೆ. ಕೊಬ್ಬರಿ ಖರೀದಿಯಾದ ದಿವಸವೇ ನಾನು ಚೆಕ್ಕನ್ನು ಕೊಡಿಸುತ್ತೇನೆ ಎನ್ನುವಂತಹ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ ಖರೀದಿ ನಿಂತು ಈಗಾಗಲೇ ಒಂದೂವರೆ ತಿಂಗಳು ಕಳೆದರೂ ಕೂಡ ನಮ್ಮ ರೈತರಿಗೆ ಚೆಕ್ಕನ್ನು ನೀಡಿರುವುದಿಲ್ಲ. ಈ ದಿಸೆಯಲ್ಲಿ ಹಣ ಬಿಡುಗಡೆಯಾಗದೇ ರೈತ ಪರಿತಪಿಸುತ್ತಿದ್ದಾನೆ. ಮಾನ್ಯ ಕೃಷಿ ಸಚಿವರು ಸಂಬಂಧಪಟ್ಟ ಅಧಿಕಾರಿಗಳನ್ನು ಈ ದಿಸೆಯಲ್ಲಿ ಕರೆಸಿ ಚರ್ಚೆ ಮಾಡಿ, ಯಾವ ಕಾರಣಕ್ಕೋಸ್ಕರ

ರೈತರಿಗೆ ಹಣ ಬಿಡುಗಡೆ ಮಾಡಿಲ್ಲ ಎಂಬುದನ್ನು ಪರಿಶೀಲಿಸಿ, ರೈತರಿಗೆ ಇವತ್ತೇ ಹಣವನ್ನು ಕೊಡಬೇಕೆಂಬ ಆದೇಶವನ್ನು ಅಧಿಕಾರಿಗಳಿಗೆ ನೀಡಬೇಕೆಂದು ನಾನು ಈ ಮೂಲಕ ಆಗ್ರಹಿಸುತ್ತೇನೆ. ಕನಿಷ್ಟಪಕ್ಷ ಒಂದು ಪಂಚಾಯಿತಿಗೆ 40-50 ಬೋರ್‌ಗಳನ್ನು ಸರ್ಕಾರ ಹಾಕಿಸಿದ್ದೇ ಆದರೆ, ಮುಂದಿನ 3-4 ತಿಂಗಳುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬರಗಾಲದ ಪರಿಸ್ಥಿತಿ ಮೇಲಿನ ಚರ್ಚೆಯಲ್ಲಿ ನಾನು ನಾಲ್ಕೊಂಡು 3-4 ವಿಷಯಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ನಿವೇದನೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸುತ್ತಾ, ದಯವಿಟ್ಟು ನನ್ನ ಇಷ್ಟು ಬೇಡಿಕೆಗಳನ್ನು ಈಡೇರಿಸಬೇಕೆಂದು ಮತ್ತೊಮ್ಮೆ ಸರ್ಕಾರವನ್ನು ಆಗ್ರಹಿಸುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ನಾನು ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ ಪುನಃ 11 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು ಸಂಜೆ 6 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 20ನೇ ಮಾರ್ಚ್ 2002ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.